ಪ್ರವಾದಿ ಮುಹಮ್ಮದ್(ಸ)
ವಿವಾಹಗಳು ಮತ್ತು ವಿಮರ್ಶೆಗಳು

ಶೈಖ್ ಮುಹಮ್ಮದ್ ಕಾರಕುನ್ನು

ಮುನ್ನುಡಿ

ಜಗತ್ತಿನಲ್ಲಿ ಅತಿ ಹೆಚ್ಚು ಉಚ್ಚರಿಸಲ್ಪಡುವ ಹೆಸರು ಪ್ರವಾದಿ ಮುಹಮ್ಮದ್(ಸ) ಅವರದ್ದು. ಈ ಹೆಸರು ಎಲ್ಲ ಸಮಯಗಳಲ್ಲೂ ಎಲ್ಲ ದೇಶಗಳಲ್ಲೂ ಅನೇಕ ಬಾರಿ ಪುನರಾವರ್ತಿಸಲ್ಪಡುತ್ತಿರುತ್ತದೆ. ಪ್ರವಾದಿಯವರ(ಸ) ಅನುಯಾಯಿಗಳು ದಿನಕ್ಕೆ ಐದು ಹೊತ್ತು ಅನೇಕ ಸಲ ಅವರ ನಾಮವನ್ನು ಉಚ್ಛರಿಸುತ್ತಲೇ ಇರುತ್ತಾರೆ.

ಅದೇ ರೀತಿ ಪ್ರವಾದಿ ಮುಹಮ್ಮದ್(ಸ)ರು ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಅತಿ ಹೆಚ್ಚು ಚರ್ಚಿಸಲ್ಪಡುತ್ತಿರುವ ವ್ಯಕ್ತಿಯೂ ಆಗಿದ್ದಾರೆ. ಇಂದಿಗೂ ಜಗತ್ತಿನಲ್ಲಿ ಅವರಷ್ಟು ಟೀಕೆಗೆ ಒಳಗಾಗುತ್ತಿರುವ ಇನ್ನೊಬ್ಬ ವ್ಯಕ್ತಿ ಇರಲು ಸಾಧ್ಯವಿಲ್ಲ.

ಪ್ರವಾದಿ ಮುಹಮ್ಮದ್(ಸ)ರ ಜೀವನದಷ್ಟು ವಿವರವಾಗಿ ದಾಖಲಾದ ಜೀವನ ಮತ್ತೊಂದಿಲ್ಲ. ಅವರ ನಡಿಗೆ, ಕುಳಿತುಕೊಳ್ಳುವುದು, ಮಲಗುವುದು, ಏಳುವುದು, ನಿದ್ರೆ, ಎಚ್ಚರ, ತಿನ್ನುವುದು, ಕುಡಿಯುವುದು, ಸ್ವಭಾವ, ವರ್ತನೆ, ನಡವಳಿಕೆ, ವ್ಯವಹಾರ, ನೈತಿಕ ಶಿಷ್ಟಾಚಾರಗಳು ಮುಂತಾಗಿ ಅವರ ಸಂಪೂರ್ಣ ಜೀವನಶೈಲಿಯನ್ನು ಬಹಳ ವಿವರವಾಗಿ ಉಲ್ಲೇಖಿಸಲಾಗಿದೆ. ಅವರ ಪ್ರತಿಯೊಬ್ಬ ಅನುಯಾಯಿಯೂ ಆ ಜೀವನಶೈಲಿಯನ್ನು ಅನುಸರಿಸಲು ಅತ್ಯಂತ ಜಾಗರೂಕತೆಯನ್ನು ಪಾಲಿಸುತ್ತಾನೆ. ಬೆಳಗಿನ ಜಾವದಿಂದ ರಾತ್ರಿ ಮಲಗುವ ವರೆಗಿನ ಸತ್ಯವಿಶ್ವಾಸಿಗಳ ಬದುಕನ್ನು ನಿಯಂತ್ರಿಸುವ ಜೀವನ ಕ್ರಮವಿದು. ಬಾಲಕ, ಯುವಕ, ಉದ್ಯಮಿ, ಸ್ನೇಹಿತ, ಪತಿ, ಶಿಕ್ಷಕ, ವಿದ್ಯಾರ್ಥಿ, ತಂದೆ, ತಾತ, ಯೋಧ, ಸೇನಾ ನಾಯಕ, ಸಾಂಸ್ಕೃತಿಕ ಕಾರ್ಯಕರ್ತ, ಪ್ರಚಾರಕ, ಸುಧಾರಕ, ರಾಜಕೀಯ ನಾಯಕ, ಕ್ರಾಂತಿಕಾರಿ ಮತ್ತು ಆಡಳಿತಗಾರ ಸೇರಿದಂತೆ ಸಮಾಜದ ಎಲ್ಲ ವರ್ಗದ ಜನರಿಗೆ ಅವರ ಜೀವನದಲ್ಲಿ ಅತ್ಯುತ್ತಮ ಮಾದರಿ ಇದೆ.

ಅವರ ಜೀವಿತ ಕಾಲದಲ್ಲಿಯೇ ಅವರಿಗೆ ಸಾಕಷ್ಟು ವಿರೋಧಗಳಿದ್ದವು. ತೀವ್ರವಾದ ಕಿರುಕುಳ, ಚಿತ್ರಹಿಂಸೆಗೆ ಅವರು ಒಳಗಾಗಿದ್ದರು. ತಾಯಿ ನಾಡಿಗೆ ವಿದಾಯ ಹೇಳುವಷ್ಟು ಪೀಡಿಸಲಾಗಿತ್ತು. ಅನೇಕ ಯುದ್ಧಗಳನ್ನು ಅವರು ಎದುರಿಸಬೇಕಾಗಿ

ಬಂತು. ಆದ್ದರಿಂದ ಅವರ ಜೀವನದಲ್ಲಿ ಯಾವುದೇ ವೈಫಲ್ಯಗಳು, ನ್ಯೂನತೆಗಳು, ತಪ್ಪುಗಳು ಅಥವಾ ಅಪರಾಧಗಳಿವೆಯೇ ಎಂದು ನೋಡಲು ಅವರ ವಿರೋಧಿಗಳು ಅವರ ಜೀವನವನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವರನ್ನು ಮಾಂತ್ರಿಕ, ಕವಿ, ಹುಚ್ಚ ಮತ್ತು ಸಮಾಜ ವಿಭಜಕ ಎಂದು ದೂಷಿಸಲಾಗಿತ್ತು. ದೇಶದ್ರೋಹಿ ಎಂದೂ ಕ್ಷೋಭೆ ಉಂಟು ಮಾಡುವವನೆಂದೂ ಆರೋಪಿಸಲಾಗಿತ್ತು. ಆದರೂ ಅವರ ನಿಷ್ಠೆ, ಪ್ರಾಮಾಣಿಕತೆ, ಸತ್ಯಸಂಧತೆ, ನೈತಿಕ ಸಮಗ್ರತೆ, ಜೀವನ ಪಾವಿತ್ರ್ಯತೆಯನ್ನು ಯಾರೂ ಪ್ರಶ್ನಿಸಿರಲಿಲ್ಲ. ಆ ಜೀವನವು ತುಂಬಾ ಸುಸಮ್ಮತವೂ ಸರ್ವರಿಂದ ಅಂಗೀಕೃತವೂ ಆಗಿದ್ದಿತು. ಅವರ ವಿವಾಹದ ಬಗ್ಗೆ ಕೂಡ ಯಾರೂ ಅವರನ್ನು ನಿಂದಿಸಿರಲಿಲ್ಲ. ಆಕ್ಷೇಪಕರವಾದ ಯಾವ ಕೆಲಸವು ಅವರ ಕಡೆಯಿಂದ ಆಗಿರಲಿಲ್ಲ ಎಂಬುದೇ ಇದಕ್ಕೆ ಕಾರಣವಾಗಿದ್ದಿತು.

ಪ್ರವಾದಿಯವರ(ಸ) ನಿಧನದ ಬಳಿಕ, ಅನೇಕ ವರ್ಷಗಳು ಕಳೆದ ನಂತರ ಅವರ ವಿವಾಹದ ಬಗ್ಗೆ ವಿಮರ್ಶಕರಿಂದ ಟೀಕೆಗಳು ಬರಲಾರಂಭಿಸಿದವು. ಅದಕ್ಕೆ ಅವರ ಜೀವನದ ವೈಫಲ್ಯಗಳು ಕಾರಣವಾಗಿರಲಿಲ್ಲ. ಅವರು ಪ್ರತಿಪಾದಿಸುತ್ತಿದ್ದ ಜೀವನ ಮೌಲ್ಯಗಳು ಮತ್ತು ಆದರ್ಶಗಳ ಬಗ್ಗೆ ಇದ್ದಂತಹ ಉಗ್ರ ಅಸೂಯೆ ಮತ್ತು ದ್ವೇಷವೇ ಕಾರಣವಾಗಿತ್ತು. ಇಂದು ಕೂಡ ಅದು ಹಾಗೆಯೇ ಮುಂದುವರಿದಿದೆ.

ಪ್ರವಾದಿ ಮುಹಮ್ಮದರ(ಸ) ವ್ಯಕ್ತಿತ್ವವನ್ನು ಹೀನೈಸಲಿಕ್ಕಾಗಿ ವಿಮರ್ಶಕರು ಹೆಚ್ಚಾಗಿ ಉಪಯೋಗಿಸುವುದು ಅವರ ವೈವಾಹಿಕ ಜೀವನವನ್ನು. ಇಂತಹ ಪರಿಸ್ಥಿತಿ ಯಲ್ಲಿ ಪ್ರವಾದಿ ಮುಹಮ್ಮದ್(ಸ)ರು ಯಾಕಾಗಿ ಒಂದಕ್ಕಿಂತ ಹೆಚ್ಚು ವಿವಾಹವನ್ನು ಮಾಡಿಕೊಂಡಿದ್ದರು ಎಂಬುದನ್ನು ವಾಸ್ತವಿಕತೆಗಳ ಬೆಳಕಿನಲ್ಲಿ ವಿವರಿಸುವ ಒಂದು ಕಿರು ಕೃತಿ ಇದಾಗಿದೆ. ಇದರಲ್ಲಿ ಈ ವಿಷಯದ ಬಗ್ಗೆ ಎಬ್ಬಿಸಲಾಗುವ ಎಲ್ಲಾ ಆರೋಪಗಳನ್ನೂ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ವಾಸ್ತವಿಕತೆಗಳನ್ನು ಅರ್ಥ ಮಾಡಿಕೊಳ್ಳಲು ಬಯಸುವ, ನಿಷ್ಪಕ್ಷಪಾತಿ ಸತ್ಯಾನ್ವೇಷಿಗಳಿಗೆ ಇದು ಪ್ರಯೋಜನಕಾರಿಯಾಗಬಹುದು ಎಂದು ನಿರೀಕ್ಷಿಸುತ್ತೇವೆ. ಹಾಗೆಯೇ ಈ ಕೃತಿಯು ವಾಚಕರಿಗೆ ಉಪಯೋಗಪ್ರದವಾಗಲಿ ಎಂದು ಪ್ರಾರ್ಥಿಸುತ್ತೇವೆ.

ಡಾ. ಶೈಖ್ ಮುಹಮ್ಮದ್ ಕಾರಕುನ್ನು

ಅನುಕ್ರಮಣಿಕೆ

ಅಧ್ಯಾಯ 1

ವಿಮರ್ಶಕರ ನೈತಿಕ ಪರಿಕಲ್ಪನೆ

ಎಲ್ಲಾ ನಾಸ್ತಿಕ ತತ್ವಶಾಸ್ತ್ರಗಳು ಮನುಷ್ಯ ಶರೀರದ ಕುರಿತು, ಅದರಲ್ಲಿ ಉಂಟಾಗುವ ರೂಪಾಂತರಗಳು ಮತ್ತು ಅದರ ಪರಿಣಾಮದ ಕುರಿತು ಮಾತನಾಡುತ್ತವೆ. ಅದರ ಹಿತಾಸಕ್ತಿಗಳನ್ನು ರಕ್ಷಿಸಲಿಕ್ಕಾಗಿ ಬಹಳ ಗಮನ ಮತ್ತು ಶ್ರಮವನ್ನು ವಹಿಸ ಲಾಗುತ್ತದೆ. ಆದುದರಿಂದಲೇ ತಿನ್ನುವುದು, ಕುಡಿಯುವುದು, ಭೋಗಿಸುವುದು, ಆನಂದಿಸುವುದು, ಸುಖಿಸುವುದು ಮುಂತಾದವುಗಳು ಅವರ ಜೀವನದ ಪರಮೋದ್ದೇಶವಾಗಿರುತ್ತದೆ.

ಪ್ರಮುಖ ನಾಸ್ತಿಕ ತತ್ವಜ್ಞಾನಿ ಆಲ್ಡಸ್ ಹೆಕ್ಸಲ್ ಹೀಗೆನ್ನುತ್ತಾರೆ, "ಇಂದು ನೀವು ಆಸ್ವದಿಸಬಹುದಾದ ಮತ್ತು ಅನುಭವಿಸಬಹುದಾದ ಸಂತೋಷವನ್ನು ನಾಳೆಗೆ ಮುಂದೂಡಬೇಡಿ." ಸ್ವಿಸ್ ಚಿಂತಕ ಕಾರ್ ಹೋಸ್ಪೆಟ್ ಬರೆಯುತ್ತಾರೆ, "ಬದುಕಿನ ದಾರಿಯಲ್ಲಿ ಜೀವನ ಪೋಷಕ ಸಾಧನವು ಅದು ಆನಂದಾನುಭೂತಿ ಮಾತ್ರವಿರುವುದು."

ಆಧುನಿಕ ಮನೋವಿಜ್ಞಾನದ ಪಿತಾಮಹನೆಂದು ಕರೆಯಲ್ಪಡುವ ಸಿಗ್ಮಂಡ್ ಫ್ರಾಯ್ಡ್ ಹೀಗೆ ವಾದಿಸುತ್ತಾರೆ, "ಪ್ರತಿಯೊಬ್ಬರೂ ತಮ್ಮ ಪ್ರವೃತ್ತಿಗೆ ಅನುಗುಣವಾಗಿ ಬದುಕಬೇಕು. ಇದಕ್ಕೆ ಅಡ್ಡಿಪಡಿಸುವುದೇ ಎಲ್ಲ ರೀತಿಯ ಅನಾಹುತಗಳಿಗೆ ಕಾರಣ. ದೇಹೇಚ್ಛೆಯನ್ನು ಅನುಸರಿಸಿ ಜೀವಿಸುವುದಕ್ಕೆ ಅಡ್ಡಿಯಾಗುವ ಮೌಲ್ಯಗಳು ಮತ್ತು ಸಾಮಾಜಿಕ ಒತ್ತಡಗಳ ಕಲ್ಪನೆಯೇ ಮಾನವನ ಎಲ್ಲ ದುಃಖಗಳಿಗೆ ಮೂಲ ಕಾರಣವಾಗಿದೆ."

ಮೌಲ್ಯಗಳ ಸವಕಳಿ

ಜೀವನದ ಪರಮ ಉದ್ದೇಶವು ಪರಮಾವಧಿ ಜೀವನವನ್ನು ಅನುಭವಿಸುವುದು ಆಗಿದೆ. ಆದ್ದರಿಂದ ಅದಕ್ಕೆ ಅಡ್ಡಿಯನ್ನುಂಟು ಮಾಡುವ ಎಲ್ಲ ಮೌಲ್ಯಗಳು, ನಿಯಮ ಗಳು, ರೀತಿ–ರಿವಾಜುಗಳನ್ನು ವಿಚಾರವಾದಿಗಳು ಸಹಿತ ಎಲ್ಲಾ ಭೌತಿಕವಾದಿಗಳು ನಿರಾಕರಿಸುತ್ತಾರೆ. ಒಳಿತು ಕೆಡುಕುಗಳು, ಸರಿ–ತಪ್ಪುಗಳು, ಧರ್ಮ–ಅಧರ್ಮ, ನ್ಯಾಯ– ಅನ್ಯಾಯ, ವಿಧಿ–ನಿಷೇಧಗಳು ಇತ್ಯಾದಿಗಳು ಅವರಿಗೆ ಸ್ವಲ್ಪವೂ ಗಂಭೀರವಾದ

ವಿಷಯಗಳಲ್ಲ. ಅವರು ಸುಸ್ಥಿರವಾದ ಸತ್ಯಗಳು, ಮೌಲ್ಯಗಳು, ಮಾನವೀಯತೆ ಇತ್ಯಾದಿಗಳಿವೆ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ.

ಒಳ್ಳೆಯದನ್ನು ಉಪದೇಶಿಸುವವರು ಮನುಷ್ಯ ಕುಲದ ಬಹಳ ದೊಡ್ಡ ಶತ್ರುಗಳು ಎಂದು ಪ್ರಮುಖ ಶೈಕ್ಷಣಿಕ ಚಿಂತಕ ಇಮ್ಯಾನುವೆಲ್ ಕಾಂಟ್ ಹೇಳುತ್ತಾರೆ, "ಶಿಕ್ಷಕರು ಮತ್ತು ಹೆತ್ತವರು ನಮ್ಮ ಬಹಳ ದೊಡ್ಡ ಶತ್ರುಗಳು."

ಪ್ರಸಿದ್ಧ ನಾಸ್ತಿಕ ತತ್ವಜ್ಞಾನಿ ನೀತ್ಸೇ ತನ್ನ 'ಹ್ಯಾಪಿನೆಸ್ ವಿದ್ ವಿಸ್ಡಮ್' ಎಂಬ ಕೃತಿಯಲ್ಲಿ ಹೀಗೆ ಬರೆಯುತ್ತಾರೆ, "ಎಳೆಬಿಸಿಲು ಇದ್ದ ಒಂದು ದಿನ ಹುಚ್ಚನೊಬ್ಬ ಕೈಯಲ್ಲಿ ಬೆಳಕನ್ನು ಹಿಡಿದುಕೊಂಡು ದೇವರು ಎಲ್ಲಿದ್ದಾನೆ, ದೇವರು ಎಲ್ಲಿದ್ದಾನೆ ಎಂದು ಕೇಳುತ್ತಾ ಅಂಗಡಿಗಳ ಮಧ್ಯೆ ಓಡಾಡುತ್ತಿದ್ದ. ಅಲ್ಲಿ ಸೇರಿದ ಹೆಚ್ಚಿನ ಜನರು ದೇವನಿಷೇಧಿಗಳಾಗಿದ್ದರು. ಈ ವ್ಯಕ್ತಿಯ ವರ್ತನೆಯನ್ನು ನೋಡಿ ಅವರಿಗೆ ಸಂತೋಷವೆನಿಸಿತು. ಅವರಲ್ಲೊಬ್ಬ ಪ್ರಶ್ನಿಸಿದ, "ಏನಾಯಿತು ದೇವನು ಹೋದನೇ?" ಇನ್ನೊಬ್ಬ ವ್ಯಕ್ತಿ ಹೇಳಿದ, "ಸಣ್ಣ ಮಗುವಿಗೆ ದಾರಿ ತಪ್ಪಿದಂತೆ ದೇವನಿಗೂ ದಾರಿ ತಪ್ಪಿದ್ದಾಗಿರಬಹುದೇ?" ಮತ್ತೊಬ್ಬ ವ್ಯಕ್ತಿ ಪ್ರಶ್ನಿಸಿದ, "ದೇವನು ಎಲ್ಲಿಯಾದರೂ ಹೋಗಿ ಅಡಗಿಕೊಂಡಿರಬಹುದೇ? ಅವನಿಗೆ ನಮ್ಮ ಭಯವೇ? ವಿದೇಶ ಯಾತ್ರೆಗೆ ಏನಾದರೂ ಹೋಗಿರಬಹುದೇ ಅಥವಾ ಊರು ತೊರೆದಿರಬಹುದೇ?"

ಹೀಗೆ ಹಲವರು ಹಲವು ರೀತಿಯಲ್ಲಿ ಪ್ರತಿಕ್ರಯಿಸಿದರು. ಹುಚ್ಚ ಎಲ್ಲರನ್ನೂ ದುರುಗುಟ್ಟಿ ನೋಡುತ್ತಾ ಹೇಳಿದ, "ದೇವ ಎಲ್ಲಿಗೆ ಹೋಗಿದ್ದಾನೆ ಎಂದು ನಾನು ನಿಮಗೆ ತಿಳಿಸುತ್ತೇನೆ. ನಾನು ದೇವನನ್ನು ಕೊಂದುಬಿಟ್ಟೆ. ನಾನು ಮತ್ತು ನೀವು, ಎಲ್ಲರೂ ದೇವನ ಕೊಲೆಗಾರರು. ದೇವನನ್ನು ಸಮಾಧಿ ಮಾಡುವ ಶಬ್ದವನ್ನು ನಾವು ಕೇಳುತ್ತಿದ್ದೇವೆ. ಕೊಳೆತು ನಾರುವ ದೇವನ ದುರ್ಗಂಧ ನಮ್ಮ ಮೂಗುಗಳಿಗೆ ಬರುತ್ತಿದೆಯಲ್ಲವೇ? ಅವನು ಸತ್ತು ಹೋದ. ನಾವೇ ಅವನನ್ನು ಕೊಂದು ಬಿಟ್ಟೆವು."

ಅದೇ ಕೃತಿಯ ಐದನೇ ಸಂಪುಟದಲ್ಲಿ ಅವರು ಹೀಗೆ ಬರೆಯುತ್ತಾರೆ, "ದೇವ ನಿರಾಕರಣೆ ಇತ್ತೀಚೆಗಿನ ಸಾಂಸ್ಕೃತಿಕ ಇತಿಹಾಸದಲ್ಲಿಯೇ ಬಹಳ ಪ್ರಮುಖ ಘಟನೆಯಾಗಿದ್ದು, ಅದರ ನೆರಳು ಯುರೋಪಿನಾದ್ಯಂತ ಹರಡಲು ಆರಂಭಿಸಿದೆ. ಬಹಳಷ್ಟು ಸಂಗತಿಗಳು ದೇವನ ಮೇಲಿನ ನಂಬಿಕೆಯನ್ನು ಅವಲಂಬಿಸಿದೆ. ಎಲ್ಲಾ ನೈತಿಕ ಮೌಲ್ಯಗಳು ಅದರ ಅವಿಭಾಜ್ಯ ಅಂಗವಾಗಿತ್ತು. ದೇವನಿಷೇಧಕ್ಕೊಳಗಾದ ಕಾರಣದಿಂದಾಗಿ ಅವುಗಳ ಆಳವೂ ಸುದೀರ್ಘವೂ ಆದ ಕುಸಿತ ಸನ್ನಿಹಿತವಾಗಿದೆ. ಹಿಂದೆಂದೂ ಮಾನವಕುಲವು ಅರಿತಿರದ ರೀತಿಯಲ್ಲಿ ಅತಿ ಭೀಕರವಾದ ಒಂದು ದುರಂತಕ್ಕೆ ಕಾರಣವಾದೀತು. ಗಂಭೀರವಾದ ಈ ವಿಷಯವನ್ನು ಅನೇಕರು ತಿಳಿದುಕೊಳ್ಳಬೇಕಾದ ರೀತಿಯಲ್ಲಿ ತಿಳಿದುಕೊಂಡಿಲ್ಲ."

ಮೌಲ್ಯಗಳೆಲ್ಲವೂ ದೇವ ವಿಶ್ವಾಸಿಗಳಿಗೆ ಸಂಬಂಧಪಟ್ಟದ್ದು ಮತ್ತು ನಾಸ್ತಿಕರು ಮೌಲ್ಯಹೀನರು ಎಂಬುದನ್ನು ಯಾವುದೇ ಸಂಶಯಕ್ಕೆಡೆಯಿಲ್ಲದ ರೀತಿಯಲ್ಲಿ ನೀತ್ಸೇ ಇಲ್ಲಿ ವಿವರಿಸಿದ್ದಾರೆ.

ಧರ್ಮಗಳ ಪ್ರಭಾವ

ಯಾರಾದರೂ ಬದುಕಿನಲ್ಲಿ ಸತ್ಯ, ನೀತಿ, ಧರ್ಮ, ನಿಯಮ ಮತ್ತಿತರ ಮಾನವೀಯ ಮೌಲ್ಯಗಳನ್ನು ಬಿಗಿಹಿಡಿದುಕೊಂಡಿದ್ದಾರೆ ಎಂದಾದರೆ ಅದು ತಲೆತಲಾಂತರಗಳಿಂದ, ಸಹಸ್ರಾರು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಧರ್ಮ ವಿಶ್ವಾಸ ಮತ್ತು ಮೌಲ್ಯಗಳು ಪ್ರಭಾವ ಬೀರಿದ ಕಾರಣದಿಂದಲೇ ಆಗಿದೆ.

ಎಟ್ಟುಮಾನೂರ್ ಗೋಪಾಲಕೃಷ್ಣನ್ ಹೀಗೆ ಬರೆಯುತ್ತಾರೆ, "ಮದ್ಯಪಾನ ಮಾಡಬಾರದು, ಕಳ್ಳತನ ಮಾಡಬಾರದು, ವ್ಯಭಿಚಾರ ಮಾಡಬಾರದು ಮುಂತಾದವುಗಳು ಧಾರ್ಮಿಕ ನಿಷೇಧಗಳಾಗಿವೆ. ಇಂತಹ ಧಾರ್ಮಿಕ ನಿಷೇಧಗಳು ಧರ್ಮವನ್ನು ಅನುಸರಿಸುವವರಿಗೆ ಸಂಬಂಧಪಟ್ಟವುಗಳಾಗಿವೆ. ಮಾಡಬಾರದು ಎಂಬ ಕೆಲಸಗಳನ್ನು ಮಾಡಿದವರಿಗೆ ಸ್ವರ್ಗವು ನಷ್ಟವಾಗುತ್ತದೆ ಮತ್ತು ಆ ಕಾರಣಕ್ಕೆ ಉಗ್ರ ಶಿಕ್ಷೆಯು ಲಭಿಸುತ್ತದೆ. ಮರಣಾನಂತರ ಜೀವನದಲ್ಲಿ ಸುಖ ಸಂತೋಷದಿಂದಿರಬೇಕಾದರೆ ಇಂತಹ ಕೆಲವು ನಿಯಂತ್ರಣಗಳನ್ನು ಪಾಲಿಸಿಕೊಂಡು ಬದುಕಬೇಕು ಎಂಬುದಾಗಿ ಧರ್ಮವು ಕಲಿಸಿಕೊಡುತ್ತದೆ. ಆದರೆ ಜೀವನವು ಈ ಲೋಕದಲ್ಲಿ ಇರುವುದು ಮಾತ್ರ ಎಂದು ನಂಬುವ ವಿಚಾರವಾದಿಗಳೊಡನೆ ಅದೆಲ್ಲವನ್ನು ಪಾಲಿಸಬೇಕು ಎಂದು ಹೇಳಿದರೆ, ಅದು ಅವರಿಗೆ ಸಾಧ್ಯವಾಗುತ್ತದೆ ಎಂದು ಹೇಳುವಂತಿಲ್ಲ." (**ವಿಚಾರವಾದಿಗಳ ಸಾಮಾಜಿಕ ದೃಷ್ಟಿಕೋನ, ಎಟ್ಟುಮಾನೂರ್ ಗೋಪಾಲಕೃಷ್ಣನ್, ಪುಟ: 14–15**)

ಯಾರಾದರೂ ಮದುವೆಯಾಗುತ್ತಿದ್ದಾರೆ, ಕುಟುಂಬ ಜೀವನವನ್ನು ನಡೆಸುತ್ತಿದ್ದಾರೆ ಎಂದಾದರೆ ಅದು ಅವರಲ್ಲಿ ಉಳಿದುಕೊಂಡಿರುವ ಧಾರ್ಮಿಕ ಪ್ರಭಾವದ ಕಾರಣ ದಿಂದಾಗಿದೆ. ವಿವಾಹ ಎಂಬ ಪದ್ಧತಿಯೇ ಧಾರ್ಮಿಕವಾಗಿದೆ. ಅದರ ಎಲ್ಲಾ ರೂಪ ಗಳು ಧರ್ಮದಿಂದಲೇ ಹೊರಟವುಗಳಾಗಿವೆ. ಕುಟುಂಬ ಎಂಬುದು ಒಂದು ಧಾರ್ಮಿಕ ಸಂಸ್ಥೆಯಾಗಿದೆ. ಧರ್ಮವನ್ನು ಅನುಸರಿಸುವುದಿಲ್ಲ, ಎಂದು ಹೇಳಿಕೊಳ್ಳುವ ಅನೇಕರಿಗೆ ಧರ್ಮದ ಪ್ರಭಾವದಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗುವುದಿಲ್ಲ. ಕೇರಳದ ಪ್ರಸಿದ್ಧ ವಿಚಾರವಾದಿ ನಾಯಕ ರವಿಚಂದ್ರನ್ ಈ ವಿಷಯವನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

(ಮಾಧ್ಯಮಂ ವಾರ್ಷಿಕ ಪುರವಣಿ. 2020 ಪುಟ: 152)

ಕಾರ್ಲ್ ಮಾರ್ಕ್ಸ್ ಜಗತ್ತು ಕಂಡ ಪ್ರಮುಖ ಭೌತಿಕ ತತ್ವಶಾಸ್ತ್ರದ ಸಂಶೋಧಕ.

ಅವರು ಕೂಡ ಈ ಧಾರ್ಮಿಕ ಪ್ರಭಾವದಿಂದ ಹೊರತಾಗಿರಲಿಲ್ಲ. ಆದ ಕಾರಣದಿಂದಲೇ ಅವರು ಜೆನ್ನಿಯನ್ನು ವಿವಾಹವಾದರು. ವಿವಾಹ ಮತ್ತು ಅದರ ಮೂಲಕ ಉಂಟಾಗುವ ದಾಂಪತ್ಯ ಸಂಬಂಧವು ಸ್ತ್ರೀಯ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನು ಉಂಟು ಮಾಡುತ್ತದೆ ಮತ್ತು ಅದು ಖಾಸಗಿ ಆಸ್ತಿಯನ್ನು ಸಂರಕ್ಷಿಸುವ ಉಪಾಧಿ ಎಂದು ವಿಶ್ಲೇಷಿಸಿದ ಚಿಂತಕ ಕಾರ್ಲ್ ಮಾರ್ಕ್ಸ್ ಆಗಿದ್ದರು ಎಂಬ ವಾಸ್ತವಿಕತೆಯನ್ನು ಮರೆಯಬಾರದು.

"ಕಮ್ಯೂನಿಸಂ ಕಾಲದಲ್ಲಿ ಸ್ತ್ರೀಯರು ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರು. ಕುಟುಂಬವು ಸ್ತ್ರೀ ಕೇಂದ್ರೀಕೃತವಾಗಿತ್ತು. ಮಕ್ಕಳು ತಂದೆಯ ಬಗ್ಗೆ ಅರಿತಿರಲಿಲ್ಲ. ಬಳಿಕ ಆ ಮಕ್ಕಳ ಸಂರಕ್ಷಣೆಗಾಗಿ, ಸ್ತ್ರೀಯನ್ನು ಖಾಸಗಿ ಆಸ್ತಿ ಎಂದು ಪರಿಗಣಿಸಲಾಯಿತು. ನಂತರ ಏಕಪತ್ನಿತ್ವ ಸಂಪ್ರದಾಯವಾಗಿ ಕುಟುಂಬ ವ್ಯವಸ್ಥೆಯು ರೂಪ ತಾಳಿತು" ಎಂದು ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಏಂಜಲ್ಸ್ ವಾದಿಸುತ್ತಾರೆ. **(ಇಬ್ಬರು ಸೇರಿಕೊಂಡು ರಚಿಸಿದ 'ವ್ಯಕ್ತಿ, ಕುಟುಂಬ, ಸಮಾಜ' ಎಂಬ ಕೃತಿಯನ್ನು ನೋಡಿರಿ.)**

ವಿಚಾರವಾದಿ ಎಂದು ಹೇಳಿಕೊಳ್ಳುವ ಸ್ತ್ರೀವಾದಿಗಳು ಕೂಡ ಇದೇ ವಿಧಾನವನ್ನು ಅನುಸರಿಸುತ್ತಾರೆ. ಪಿ. ಗೀತಾ ಹೀಗೆ ಬರೆಯುತ್ತಾರೆ, "ಒಬ್ಬನಿಗೆ ಲೈಂಗಿಕತೆಯಿಂದ ಅಥವಾ ಸಲಿಂಗರತಿಯಿಂದ ಆನಂದವನ್ನು ಅನುಭವಿಸಬಹುದು. ಆದರೆ ಒತ್ತಾಯ ಪೂರ್ವಕವಾಗಿ ಅದು ಮಾಡಕೂಡದೆಂದು ಹೇಳಲು ಯಾರಿಗೂ ಅವಕಾಶವಿಲ್ಲ. ಪುರುಷರು ಮತ್ತು ಸ್ತ್ರೀಯರ ಪರಸ್ಪರ ಒಪ್ಪಿಗೆ ಇದ್ದರೆ, ಅವರು ಲೈಂಗಿಕಾಸಕ್ತಿಗಳನ್ನು ಹಂಚಿಕೊಳ್ಳಬಹುದು." **(ಪ್ರೀತಿ, ಲೈಂಗಿಕತೆ, ಅಧಿಕಾರ: ಪುಟ: 91)**

ಕುಟುಂಬ ಎಂಬ ಸಂಸ್ಥೆಯನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಅದು ಪುರುಷ ಪ್ರಾಧಾನ್ಯತೆಯ ಸೃಷ್ಟಿಯೆಂದು ಅವರು ಪರಿಗಣಿಸುತ್ತಾರೆ. ಮಾತೃತ್ವ ಎಂಬುದು ಹೆಣ್ಣಿನ ಜೈವಿಕ ಸ್ಥಿತಿ. ಇದನ್ನು ಕೃತಕವಾಗಿ ಒಂದು ಸಾಮಾಜಿಕ ಸಂಸ್ಥೆಯನ್ನಾಗಿ ಮಾಡುವ ಕೆಲಸವನ್ನು ಪಿತೃಪ್ರಧಾನ ವ್ಯವಸ್ಥೆಯು ಮಾಡಿರುವುದು ಕಂಡುಬರುತ್ತದೆ.

(ಅದೇ ಪುಸ್ತಕ: ಪುಟ: 99)

ಪತಿಯಿಂದ ಮಾತ್ರ ಗರ್ಭ ಧರಿಸಬೇಕು ಎಂಬುದನ್ನು ಕುಟುಂಬ ವ್ಯವಸ್ಥೆಯ ಒಂದು ಕೆಡುಕಾಗಿ ಅವರು ಪರಿಗಣಿಸುತ್ತಾರೆ. ಸಮಾಜ ಅಂಗೀಕರಿಸುವ ರೀತಿಯಲ್ಲಿ, ವಿಧಾನದಲ್ಲಿ ವಿವಾಹ ಜೀವನಕ್ಕೆ ಪ್ರವೇಶಿಸಿದ ಬಳಿಕ ಪತಿಯಿಂದ ಮಾತ್ರ ಗರ್ಭ ಧರಿಸಬಹುದು ಎಂದು ಬರೆಯಲಾಗಿರುವ ವ್ಯವಸ್ಥೆ ರೂಪುಗೊಂಡಿದೆ. ಈ ವ್ಯವಸ್ಥೆಯನ್ನು ಕಣ್ಮುಚ್ಚಿ ಸ್ವೀಕರಿಸುವ ಸಾಮಾಜಿಕ ಮೌಲ್ಯಗಳಿಂದಾಗಿ, ಅವಿವಾಹಿತ ಅಮ್ಮಂದಿರು ಉಂಟಾಗುತ್ತಿದ್ದಾರೆ. **(ಅದೇ ಪುಸ್ತಕ: ಪುಟ: 99)**

ಸಿ.ಎಸ್. ಚಂದ್ರಿಕಾ ಹೀಗೆ ಬರೆಯುತ್ತಾರೆ, "ವಿವಾಹ ಮಾಡಿಕೊಳ್ಳದೆ ಜೊತೆಯಾಗಿ ಜೀವಿಸುವಾಗ ಕೌಟುಂಬಿಕ ದೌರ್ಜನ್ಯ ಉಂಟಾದರೆ, ತಕ್ಷಣ ಸಂಬಂಧವನ್ನು ಮುಗಿಸಬಹುದು. ವಿವಾಹ ವಿಚ್ಛೇದನದಂತಹ ಕಾನೂನು ಪ್ರಕ್ರಿಯೆಗಳ ಅಗತ್ಯವಿಲ್ಲ." (ಉಲ್ಲೇಖ: ನ್ಯೂಸ್ ಆನ್‌ಲೈನ್ ಮಾಸಿಕ: **www.wartha.in**)

ಅರಾಜಕತೆಯಿಂದ ತುಂಬಿದ ಜೀವನ

ಸಂಪೂರ್ಣವಾಗಿ ಧರ್ಮವನ್ನು ದೂರವಿರಿಸಿದವರು ಮೌಲ್ಯಗಳಿಂದ ಕೂಡಿದ ಜೀವನವನ್ನು ಅನುಸರಿಸದಿರುವ ಕಾರಣದಿಂದಾಗಿ, ಅವರ ಜೀವನವು ಸಂಪೂರ್ಣವಾಗಿ ಅರಾಜಕತೆಯಿಂದ ಕೂಡಿರುತ್ತದೆ. ನಾಸ್ತಿಕ ವಾದ ಮತ್ತು ಧರ್ಮ ನಿಷೇಧವನ್ನು ಆತ್ಮಾರ್ಥವಾಗಿ ಅಪ್ಪಿಕೊಳ್ಳುವ ವಿಚಾರವಾದಿಗಳು ಹೀಗೆಯೇ ಇರುತ್ತಾರೆ ಅಥವಾ ಹೀಗಾಗದಿರಲು ವೈಚಾರಿಕವಾದ ಯಾವ ಕಾರಣಗಳೂ ಇರುವುದಿಲ್ಲ.

ಪ್ರಮುಖ ನಾಟಕಕಾರ ಬ್ರೆಸ್ಟ್ ಎಂಬವನು ಅನೇಕ ಸ್ತ್ರೀಯರನ್ನು ಕೆಡಿಸಿದ್ದಾನೆ. ಅವರಿಂದ ತನಗೆ ಹುಟ್ಟಿದ ಮಕ್ಕಳನ್ನು ಅವನು ತಿರುಗಿಯೂ ನೋಡಲಿಲ್ಲ. ಸಮಾಜ ಸೇವೆಯನ್ನು ಮಾಡಲು ಬಯಸುವವರು ಜನರೊಂದಿಗೆ ನಿರ್ದಯವಾಗಿ ವರ್ತಿಸಬೇಕು ಎಂಬ ಲೆನಿನ್‌ನ ಮಾತುಗಳನ್ನು ಆತ ಉಲ್ಲೇಖಿಸಿರುವನು. ಅವನು ಈ ವಿಷಯದಲ್ಲಿ ಸಾಮಾನ್ಯವಾದ ಸೌಜನ್ಯವನ್ನು ಕೂಡ ಪಾಲಿಸಲಿಲ್ಲ.

ಫ್ರೆಂಚ್ ನಾಟಕಕಾರ ಮತ್ತು ನೋಬೆಲ್ ಪುರಸ್ಕೃತ ಜಾನ್ ಪಾಲ್ ಸಾತ್ರನ ಹೆಣ್ಣಿನ ಬೇಟೆ ಅತಿ ಭಯಾನಕವಾಗಿದೆ. ಮೊಮ್ಮಕ್ಕಳ ವಯಸ್ಸಿನ ಹೆಣ್ಣುಮಕ್ಕಳನ್ನು ಕರೆಸಿಕೊಂಡು, ತನ್ನ ಅವಶ್ಯಕತೆಗಳನ್ನು ಪೂರೈಸಿದ ಬಳಿಕ ಅವರನ್ನು ಹೊರಕ್ಕಟ್ಟಿ ಬಿಡುತ್ತಿದ್ದನು. ಇಂತಹ ಅನಿಯಂತ್ರಿತ ಲೈಂಗಿಕಾಸಕ್ತಿಯ ಬಗ್ಗೆ ಬಹಿರಂಗವಾಗಿ ಹೇಳಿ ಕೊಳ್ಳುವುದು ಅವನ ಅಭ್ಯಾಸವಾಗಿತ್ತು.

ಮೌಲ್ಯಗಳನ್ನು ಗೌರವಿಸದೆ ಕಥಾಪಾತ್ರಗಳನ್ನು ವೈಭವೀಕರಿಸುವುದು ಇಂತಹವರ ಕೆಲಸ. ತನ್ನ ಖ್ಯಾತ 'ರೋಡ್ ಟು ಫ್ರೀಡಂ' ಎಂಬ ಕೃತಿಯಲ್ಲಿ ಎಂತಹ ಪಾತ್ರವನ್ನು ನಾಯಕನಾಗಿ ಪರಿಚಯಿಸಿದ್ದಾನೆ ನೋಡಿ. ಕುಟುಂಬ ಸಂಬಂಧವು ತನ್ನ ಸ್ವಸ್ಥ ಜೀವನಕ್ಕೆ ತೊಂದರೆಯನ್ನು ಉಂಟುಮಾಡುತ್ತದೆ ಎಂದು ಹೆದರಿ, ವಿವಾಹವಾಗಲು ನಿರಾಕರಿಸಿ, ಗರ್ಭಪಾತ ಮಾಡಿಸಲು 4,000 ಫ್ರಾಂಕ್ ಕದ್ದ ಮ್ಯಾಥ್ಯುವನ್ನಾಗಿತ್ತು!

ಪತಿಯ ಮಗನಿಂದ ತನಗುಂಟಾದ ಮಗು ತನ್ನ ಪ್ರೇಮಿಯೊಂದಿಗಿನ ಸಂಬಂಧಕ್ಕೆ ಅಡ್ಡಿಯಾಗುತ್ತದೆ ಎಂದು ಭಾವಿಸಿ ಅದನ್ನು ಕ್ರೂರವಾಗಿ ಕೊಲ್ಲುವ 'ಅಭಿ' ಎಂಬ ಹೆಣ್ಣನ್ನು 'ಯೂಜೀನ್ ಓ ನೀಲ್' ತನ್ನ ಕೃತಿಯಲ್ಲಿ ಪರಿಚಯಿಸುತ್ತಾನೆ.

ಸಮಾಜವು ಧರ್ಮ ಪಾಲನೆಯಿಂದ ದೂರವುಳಿದಾಗ, ಅರಾಜಕತೆಯು

ಸಾರ್ವತ್ರಿಕವಾಗುತ್ತದೆ. ನಾಸ್ತಿಕರ ಅಧಿಕಾರವು ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಹಲವು ದೇಶಗಳ ಪರಿಸ್ಥಿತಿ ಇದುವೇ ಆಗಿತ್ತು. ಆ ಕಾಲದ ಸೋವಿಯತ್ ಯೂನಿಯನ್ ಅವಸ್ಥೆಯನ್ನು ಹೀಗೆ ವಿವರಿಸಲಾಗಿದೆ, "ಹೆಣ್ಣು ಮಕ್ಕಳಿಗೆ ಅಂದು ಸಂಪೂರ್ಣ ಸ್ವಾತಂತ್ರ್ಯವಿತ್ತು. ಗಂಡು ಮಕ್ಕಳು, ಹೆಣ್ಣು ಮಕ್ಕಳು, ಒಂದೇ ಹಾಸ್ಟೆಲಿನ ಹತ್ತಿರದ ಕೋಣೆಗಳಲ್ಲಿ ಇರುತ್ತಿದ್ದರು. ವಿದ್ಯಾರ್ಥಿಗಳಾಗಿದ್ದಾಗಲೇ ಧಾರಾಳ ವಿವಾಹಗಳು ನಡೆಯುತ್ತಿದ್ದವು. ವಿವಾಹ ವಿಚ್ಛೇದನ ಮತ್ತು ಪುನರ್ ವಿವಾಹವು ಕೂಡ ಸರ್ವೇಸಾಮಾನ್ಯವಾಗಿತ್ತು. ವಿವಾಹಪೂರ್ವ ಲೈಂಗಿಕ ಸಂಬಂಧ ಎಲ್ಲ ಶಿಬಿರಗಳಲ್ಲಿಯೂ ಸಾಮಾನ್ಯವಾಗಿ ನಡೆಯುತ್ತಿತ್ತು. ('ರಷ್ಯಾದಲ್ಲಿ ಯುವ ಪೀಳಿಗೆ', **ಶಂಕರನಾರಾಯಣನ್. ಮಾತೃಭೂಮಿ ಸಾಪ್ತಾಹಿಕ 10. 6. 1973)**

ಧರ್ಮ ನಿರಪೇಕ್ಷತೆಯು ಉಂಟುಮಾಡುವ ಲೈಂಗಿಕ ಅರಾಜಕತೆಯ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಲು, ದೇವನಿಷೇಧಿಗಳು ಮತ್ತು ಧರ್ಮಾಧಿಕ್ಕಾರಿಗಳ ನಾಡಾಗಿದ್ದ ಜರ್ಮನಿಯ ಅತ್ಯಂತ ಹೆಚ್ಚು ಪ್ರಸಾರವುಳ್ಳ ಮತ್ತು ಸರಕಾರದ ಮುಖವಾಣಿಯಾಗಿದ್ದ 'ಲೈಫ್ ಜಿಗರ್ ಫೋಕ್ಸ್ಸೈ ಟುಂಗಿ' ಎಂಬ ಪತ್ರಿಕೆಯಲ್ಲಿ ಆ ಕಾಲದಲ್ಲಿ ಪ್ರಕಟವಾದ ಎರಡು ಜಾಹೀರಾತುಗಳನ್ನು ಓದಿದರೆ ಸಾಕು. ಅವುಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಬಹುದು:

"ನಾವು ಅಧಿಕೃತವಾಗಿ ವಿವಾಹವಾಗಿ ಒಂಬತ್ತು ತಿಂಗಳು ಹದಿನೇಳು ದಿನಗಳು ಮಾತ್ರ ಆಗಿವೆ. ನನ್ನ ಪತ್ನಿ ಸುಂದರಿ. ಆರೋಗ್ಯವಂತ ಹೆಣ್ಣು. ಗ್ರಹಿಸುವ ಶಕ್ತಿ, ಸಂದರ್ಭಕ್ಕೆ ಅನುಸಾರವಾಗಿ ವರ್ತಿಸುವ ವಿಧಾನ ತಿಳಿದವಳು. ಇಷ್ಟು ಮಾತ್ರವಲ್ಲ ಚೆನ್ನಾಗಿ ನೃತ್ಯವನ್ನು ಮಾಡುತ್ತಾಳೆ. ಸಾಕಷ್ಟು ಮದ್ಯಪಾನವನ್ನು ಮಾಡುತ್ತಾಳೆ. ಅತಿಥಿಯನ್ನು ಸತ್ಕರಿಸುವುದು ಅವಳಿಗೆ ಇಷ್ಟ. ಅದೇ ರೀತಿ ಮಕ್ಕಳು ಮತ್ತು ಸಾಕು ಪ್ರಾಣಿಗಳು ಅವಳಿಗಿಷ್ಟ. ನಾನಾದರೋ ಬಹಳ ಶಾಂತ ಸ್ವಭಾವದವನು. ಆರೋಗ್ಯವಂತ ವ್ಯಕ್ತಿಯು ಆಗಿದ್ದೇನೆ. ಬೇಕಿದ್ದರೆ ನಿಮಗೆ ನಮ್ಮ ಕುಟುಂಬವನ್ನು ಒಂದು ಮಾದರಿ ಕುಟುಂಬವೆಂದು ಕರೆಯಬಹುದು. ಸದ್ಯ ನಾವು ತಾತ್ಕಾಲಿಕವಾಗಿ ಪರಸ್ಪರ ಬೇರ್ಪಡಲು ತೀರ್ಮಾನಿಸಿದ್ದೇವೆ. ಇದು ಶಾಶ್ವತವಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಜೀವನಶೈಲಿಯಲ್ಲಿ ಸಹಮತವಿರುವವರೊಂದಿಗೆ, ಒಂದು ಬದಲಾವಣೆಗಾಗಿ ನಾವು ತಯಾರಿದ್ದೇವೆ. ಅಂದರೆ ಒಂದು ಅದಲು-ಬದಲು ಮಾಡಿಕೊಳ್ಳುವಿಕೆ. ಆಸಕ್ತರು ಏಳು ದಿನಗಳ ಒಳಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಕಾಲ್ರಮಾಯಿನ್ಸ್ ಜಾಕಂ, ಫಮೀಲಿಯ, ಲುಡ್ ಶವಿಶ್ ಯಾನ್ ಸ್ಟೋಡೇ, 072. ಕನಕ್ಟೀವ್. ಮ್ಯಾಕ್‌ಲಿಬರ್ಗ್. ಪೂರ್ವ ಜರ್ಮನಿ 7113."

33 ವರ್ಷ ವಯಸ್ಸಿನ ಕ್ಯಾತರಿನ್ ಸ್ಟ್ರೋವರ್ ಅವರ 1990 ಮಾರ್ಚ್ 20ರಂದು ಕಳುಹಿಸಿದ ಜಾಹೀರಾತು ಓದಿರಿ, "ನಾನು ನಾಲ್ಕು ಮಕ್ಕಳ ತಾಯಿ. ನಾಲ್ಕು

ಮಕ್ಕಳು ನಾಲ್ಕು ತಂದೆಯಿಂದ ಜನಿಸಿದವರು. ದೊಡ್ಡ ಮಗನ ತಂದೆ ನಿಕಾರಗುವಾ ದವನು, ಎರಡನೆಯ ಮಗನ ತಂದೆ ವಿಯೆಟ್ನಾಮಿ ವಂಶದವ, ಮೂರನೇ ಮಗುವಿನ ತಂದೆ ಯಮನಿನವನು. ನಾಲ್ಕನೆಯದು ಜರ್ಮನಿ. ನನಗೋರ್ವ ವಿದೇಶಿ ವ್ಯಕ್ತಿ ತಾತ್ಕಾಲಿಕ ಪತಿಯಾಗಿ ಬೇಕಾಗಿದೆ. ಐದನೆಯ ಮಗು ನೀಡಲು ಸಾಮರ್ಥ್ಯವುಳ್ಳ, ಈ ಮೇಲೆ ಪ್ರಸ್ತಾಪಿಸಿದ ದೇಶಗಳಿಗೆ ಸೇರಿಲ್ಲದ ವ್ಯಕ್ತಿಯಾಗಿರಬೇಕು. ಒಂದು ವಾರದೊಳಗೆ ನೇರವಾಗಿ ಅಥವಾ ಫೋನ್ ಮುಖಾಂತರ ಸಂಪರ್ಕಿಸಿ."

ಈ ರೀತಿಯ ಲೈಂಗಿಕ ವಿಷಯದಲ್ಲಿ ಯಾವುದೇ ನಿಯಂತ್ರಣ ಮತ್ತು ನೀತಿ ನಿಯಮಗಳನ್ನು ಸ್ವೀಕರಿಸದ ನಾಸ್ತಿಕರು, ನಿಯಮ ನಿಬಂಧನೆಗಳನ್ನು ಪಾಲಿಸುವವರ ಜೀವನವನ್ನು ಬೂಟಾಟಿಕೆ ಎಂದು ಹೇಳುವವರಾಗಿದ್ದಾರೆ.

ಲೈಂಗಿಕತೆಯ ಕುರಿತ ನಿಲುವು

ಪ್ರಾಯ ಪ್ರಬುದ್ಧರಾದ ಸ್ತ್ರೀ-ಪುರುಷರು ಪರಸ್ಪರ ಒಪ್ಪಿಗೆಯಿಂದ ಒಟ್ಟಾಗಿ ಜೀವಿಸಲು, ಲೈಂಗಿಕ ಸಂಬಂಧದಲ್ಲಿ ಏರ್ಪಡಲು ಯಾವುದೇ ಅಡ್ಡಿ ಆತಂಕಗಳಿಲ್ಲದ ದೇಶ ನಮ್ಮದು. ಯಾವ ಪುರುಷರು ಎಷ್ಟು ಸ್ತ್ರೀಯರೊಂದಿಗೆ ಬೇಕಿದ್ದರೂ ಲೈಂಗಿಕ ಸಂಬಂಧವನ್ನು ಹೊಂದಬಹುದಾಗಿದೆ. ಕೇವಲ ಸ್ತ್ರೀಯ ಒಪ್ಪಿಗೆ ಬೇಕೆಂದು ಮಾತ್ರ. ಸ್ತ್ರೀಯ ಪರಿಸ್ಥಿತಿ ಕೂಡ ಇದುವೇ ಆಗಿದೆ. ಆಕೆಯು ಎಷ್ಟು ಪುರುಷರೊಂದಿಗೆ ಬೇಕಿದ್ದರೂ ಸಂಬಂಧವಿರಿಸಬಹುದು. ದೇವನ ಮೇಲಿನ ವಿಶ್ವಾಸ ಮತ್ತು ಧರ್ಮನಿಷ್ಠೆ ಇಲ್ಲದವರನ್ನು ಇಂತಹ ಸಂಗತಿಗಳಿಂದ ತಡೆಯುವ ಯಾವ ವಸ್ತುವು ಇಲ್ಲ. ಧರ್ಮದ ಮೇಲೆ ವಿಶ್ವಾಸವಿಲ್ಲದವರು ಸ್ವತಂತ್ರ ಲೈಂಗಿಕತೆಯನ್ನು ವಿರೋಧಿಸುತ್ತಾರೆ ಎಂದಾದರೆ, ಅದರಲ್ಲಿ ಯಾವುದೇ ತರ್ಕ ಅಥವಾ ಸಮರ್ಥನೆ ಇಲ್ಲ.

ನಾಸ್ತಿಕರು ಮತ್ತು ವಿಚಾರವಾದಿಗಳು ಸೇರಿದಂತೆ ಎಲ್ಲಾ ಧರ್ಮ ನಿಷೇಧಿಗಳು, ಮುಕ್ತ ಲೈಂಗಿಕ ಅರಾಜಕತೆಯನ್ನು ವಿರೋಧಿಸುವ ಧರ್ಮದ ಕಾನೂನು ಮತ್ತು ನಿಯಮಗಳನ್ನು ಕಟುವಾಗಿ ಆಕ್ಷೇಪಿಸುವವರೂ ಅಪಹಾಸ್ಯ ಮಾಡುವವರೂ ಆಗಿದ್ದಾರೆ. ಆದುದರಿಂದ ಅವರು ಧರ್ಮದ ವಿಧಿ-ನಿಷೇಧಗಳನ್ನು ನಿರಾಕರಿಸುತ್ತಾರೆ ಮತ್ತು ತಿರಸ್ಕರಿಸುತ್ತಾರೆ. ಮನುಷ್ಯನಿಗೆ ಸಂಬಂಧಪಟ್ಟಂತೆ, ಭೌತಿಕವಾದಕ್ಕೆ ಬೇರೆ ಯಾವುದಾದರೂ ತೀರ್ಮಾನಕ್ಕೆ ತಲುಪುವುದು ಸಾಧ್ಯವಿಲ್ಲ.

ಮೃಗರತಿ ಮತ್ತು ಶವರತಿ

ಅಭ್ಯಂತರವಿಲ್ಲದಿದ್ದರೆ ತಾಯಿ ಮತ್ತು ಸಹೋದರಿಯೊಂದಿಗೆ ಮಿಲನವನ್ನು ವಿರೋಧಿಸಲು ಯಾವ ತರ್ಕ ಮತ್ತು ಸಮರ್ಥನೆ ಇದೆ ಎಂಬ ಪ್ರಶ್ನೆಗೆ, ಇಬ್ಬರಿಗೂ ಆಸಕ್ತಿ ಇದ್ದರೆ ಅದನ್ನು ವಿರೋಧಿಸುವುದರಲ್ಲಿ ಯಾವ ನ್ಯಾಯವಿದೆ ಎಂಬುದು

ನಾಸ್ತಿಕರ ಬಹಳ ಸ್ವಾಭಾವಿಕ ಪ್ರತಿಕ್ರಿಯೆಯಾಗಿದೆ. ಧರ್ಮರಹಿತ ರಾಜ್ಯವೆಂದು ನಾಸ್ತಿಕರು ಕರೆಯುವ ಸ್ಕ್ಯಾಂಡಿನೇವಿಯನ್ ದೇಶವಾದ ಫಿನ್‌ಲ್ಯಾಂಡಿನಲ್ಲಿ ಮೃಗರತಿಯನ್ನು ಕಾನೂನುಬದ್ಧಗೊಳಿಸಲಾಗಿದೆ. ಇಲ್ಲಿ ವಾಸಿಸುವ ಜನರು ಸಾಕುಪ್ರಾಣಿಗಳೊಂದಿಗೆ ಸಂಭೋಗ ನಡೆಸಬಹುದು.

'ಫಿನ್‌ಲ್ಯಾಂಡ್' ಮತ್ತು 'ಡೆನ್ಮಾರ್ಕ್'ಗಳಂತಹ ದೇಶಗಳಲ್ಲಿ ಕಾರ್ಟೂನ್ ರೂಪದಲ್ಲಿರುವ ಮಕ್ಕಳ ಅಶ್ಲೀಲ ಚಿತ್ರಗಳನ್ನು ನಿಷೇಧಿಸಲಾಗಿಲ್ಲ.

ಮೃಗರತಿ ಮತ್ತು ಶವರತಿಗೆ ಅನುಮತಿ ನೀಡಬೇಕೆಂದು ಕರೆ ನೀಡಿದ್ದು ಸ್ವೀಡನ್ನಿನ ಲಿಬರಲ್ ಯೂತ್ ಲೀಗ್.

ಅಮೇರಿಕದ ಖ್ಯಾತ ಭೌತಶಾಸ್ತ್ರಜ್ಞ ಮತ್ತು ಪ್ರಮುಖ ನಾಸ್ತಿಕವಾದಿ ಲಾರೆನ್ಸ್ ಕ್ರಾಸ್ ಎಂಬವನ ಪ್ರಕಾರ ಗರ್ಭ ನಿರೋಧಕ ಮಾರ್ಗಗಳನ್ನು ಅನುಸರಿಸಿದರೆ ವ್ಯಭಿಚಾರವು ತಪ್ಪಲ್ಲ. ನಾಸ್ತಿಕರ ಇನ್ನೊಬ್ಬ ನಾಯಕ ಪೀಟರ್ ಸಿಂಗರ್ ಎಂಬವನು ಮೃಗರತಿ, ಶವರತಿ, ವ್ಯಭಿಚಾರ ಮುಂತಾದವುಗಳಿಗಾಗಿ ವಾದಿಸುವ ವ್ಯಕ್ತಿಯಾಗಿದ್ದ.

ದೂರದ ಮಾತೇಕೆ? ಜನವರಿ 2019ರಲ್ಲಿ ಕೇರಳದ ಕೋಝಿಕ್ಕೋಡ್‌ನಲ್ಲಿ ವಿಚಾರವಾದಿಗಳ ಪ್ರಮುಖ ನಾಯಕ ಸಿ. ರವಿಚಂದ್ರನ್ ನೇತೃತ್ವದಲ್ಲಿ ನಡೆದ 'ಲಿಟ್ಮಸ್ 19' ಎಂಬ ಅಂತರರಾಷ್ಟ್ರೀಯ ಮುಕ್ತ ಸೆಮಿನಾರ್ ನಡೆದಿತ್ತು. ಅದರಲ್ಲಿ ಒಡಹುಟ್ಟಿದವರು ಸೇರಿದಂತೆ ತಂದೆ ತಾಯಿಯೊಂದಿಗೂ ಲೈಂಗಿಕ ಸಂಬಂಧವನ್ನು ಹೊಂದಬಹುದು. ಅದನ್ನು ಕಾನೂನು ಬದ್ಧಗೊಳಿಸಬೇಕು ಎಂದು ಪ್ರತಿಪಾದಿಸಿರುವುದು ಆ ಕಾರಣಕ್ಕಾಗಿರಬಹುದಲ್ಲವೇ?

'ಆಟ' ಎಂಬ ಅಧಿವೇಶನದಲ್ಲಿ ಆಲಪ್ಪುಝ ನಿವಾಸಿ ಮನು ಪ್ರಸಾದ್ ಹೇಳುವ ಪ್ರಕಾರ, 'ಒಪ್ಪಿಗೆ ಇದ್ದರೆ ವ್ಯಭಿಚಾರವನ್ನೂ ಮಾಡಬಹುದಾಗಿದೆ. ಮುಕ್ತ ಲೈಂಗಿಕತೆ ಎಂಬುದು ಮುಕ್ತ ಚಿಂತನೆಯ ಒಂದು ಭಾಗವಾಗಿದೆ. ಪರಸ್ಪರ ಒಪ್ಪಿಗೆ ಆಧಾರದಲ್ಲಿ ನಾವು ಲೈಂಗಿಕತೆಯನ್ನು ನೋಡಬೇಕು. ಇಂತಹ ಲೈಂಗಿಕ ಸಂಬಂಧವನ್ನು ಯಾವ ಕಾರಣಕ್ಕೂ ವಿರೋಧಿಸಬಾರದು. ಇನ್ಸೆಸ್ಟ್ ಸೆಕ್ಸ್ (ರಕ್ತ ಸಂಬಂಧಿಗಳು, ಒಡಹುಟ್ಟಿದವರು, ಮಕ್ಕಳು, ಹೆತ್ತವರೊಂದಿಗಿನ ಲೈಂಗಿಕ ಸಂಬಂಧ) ಕೂಡ ಅವರಿಗೆ ಅಭ್ಯಂತರವಿಲ್ಲದಿದ್ದರೆ ಮಾಡಬಹುದು.' ಇದನ್ನು ಜನಸಾಮಾನ್ಯರು ಯಾವ ರೀತಿಯಲ್ಲಿ ನೋಡಬಹುದು ಎಂಬುದರ ಕುರಿತು ಚಿಂತಿಸಿ ಆ ವಿಷಯದಲ್ಲಿ ಮೌನ ಪಾಲಿಸುವುದರಲ್ಲಿ ಅರ್ಥವಿಲ್ಲ ಎಂಬುದು ಅವರ ಅಭಿಪ್ರಾಯ. **(News tag live.com)**

'ತಂದೆ–ಮಗಳು, ತಾಯಿ–ಮಗ, ಸಹೋದರ–ಸಹೋದರಿ ಪರಸ್ಪರ ಲೈಂಗಿಕ ಸಂಬಂಧ ಇಟ್ಟುಕೊಳ್ಳಬಹುದು. ಮೃಗರತಿ, ಶವರತಿಗಳನ್ನು ಕೂಡ ನಿಷೇಧಿಸಬೇಕಾಗಿಲ್ಲ'

ಎಂದು ನಂಬುವ ಮತ್ತು ವಾದಿಸುವ ವಿಚಾರವಾದಿಗಳು, ಪ್ರವಾದಿಯವರ ವಿವಾಹಗಳ ಬಗ್ಗೆ ವಿಮರ್ಶೆ ನಡೆಸುವುದರಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾರೆ.

ಅನುಪಮ ಸಭ್ಯತೆ, ಒಳಿತುಗಳು ಮತ್ತು ಮಾನವೀಯ ಮೌಲ್ಯಗಳ ಒಡೆಯರಾದ ಪ್ರವಾದಿಯವರನ್ನು(ಸ) ವಿಮರ್ಶಿಸುವವರ ನೈತಿಕ ನಿಲುವು ಅನಾವರಣಗೊಳಿಸಬೇಕು ಎಂಬ ಕಾರಣಕ್ಕಾಗಿ, ಅವರ ನಿಜ ಬಣ್ಣವನ್ನು ಬಯಲುಗೊಳಿಸುವುದಕ್ಕಾಗಿ, ಇಷ್ಟೆಲ್ಲ ವನ್ನು ಬರೆಯಬೇಕಾಯಿತು. ಯಾವುದೇ ರೀತಿಯ ಮೌಲ್ಯಗಳನ್ನು ಒಪ್ಪಿಕೊಳ್ಳಲು, ಸ್ವೀಕರಿಸಲು ಸಿದ್ಧರಿಲ್ಲದಿರುವ ವ್ಯಕ್ತಿಗಳಿಗೆ, ಯಾರ ಕುರಿತು ಏನು ಬೇಕಾದರೂ ಹೇಳುವ ಮತ್ತು ಪ್ರಚಾರಪಡಿಸುವ ಕೆಲಸವನ್ನು ಮಾಡಬಹುದು ಅಲ್ಲವೇ.

ಲೈಂಗಿಕತೆಯನ್ನು ಮೀರಿ

ಜೀವನವನ್ನು ಕೇವಲ ಶರೀರ ಕೇಂದ್ರಿತವಾಗಿಸಿರುವ, ಜೀವನದ ಉದ್ದೇಶವನ್ನು ಕೇವಲ ದೇಹೇಚ್ಛೆಗಳ ಪೂರ್ತೀಕರಣಕ್ಕೆ ಸೀಮಿತಗೊಳಿಸಿರುವ ಭೌತಿಕವಾದಿಗಳ ಪ್ರಕಾರ, ಸ್ತ್ರೀ–ಪುರುಷ ಸಂಬಂಧವು ಕೇವಲ ಲೈಂಗಿಕತೆಗೆ ಸೀಮಿತವಾಗಿದೆ. ಕುಟುಂಬ ಎಂಬ ಒಂದು ಮಹಾವ್ಯವಸ್ಥೆಯ ಅಡಿಪಾಯವಾಗಿರುವ ವಿವಾಹವು ಅವರಿಗೆ ಬಹಳ ಅಪ್ರಸಕ್ತವಾಗಿದೆ. ವಾಸ್ತವದಲ್ಲಿ ಲೈಂಗಿಕ ಸಂಬಂಧ ಎಂಬುದು ವಿವಾಹದ ಅನೇಕ ಉದ್ದೇಶಗಳ ಪೈಕಿ ಒಂದಾಗಿದೆ. ಲೈಂಗಿಕ ಸಂಬಂಧವು ಅಸಾಧ್ಯವಾದ ದಂಪತಿಗಳು ಕೂಡ, ವರ್ಷಗಟ್ಟಲೆ ಪ್ರೀತಿ ವಿಶ್ವಾಸಗಳೊಂದಿಗೆ, ಆತ್ಮೀಯವಾದ ಸಂಬಂಧವನ್ನು, ಸಂತೃಪ್ತವಾದ ದಾಂಪತ್ಯ ಜೀವನವನ್ನು ನಡೆಸುತ್ತಿದ್ದಾರೆ. ಸಂತೋಷದಿಂದ, ಸಂತೃಪ್ತಿಯಿಂದ ಕುಟುಂಬವನ್ನು ಸಂರಕ್ಷಿಸುತ್ತಿದ್ದಾರೆ. ಇದ್ಯಾವುದನ್ನು ಅರ್ಥ ಮಾಡಿಕೊಳ್ಳಲು, ಸ್ವೀಕರಿಸಲು ಸಾಧ್ಯವಾಗದ ವ್ಯಕ್ತಿಗಳು, ಪ್ರವಾದಿಯವರ(ಸ) ವಿವಾಹಗಳ ಬಗ್ಗೆ ವಿಮರ್ಶಿಸುತ್ತಾರೆ. ಏಕೆಂದರೆ ಇಂತಹವರಿಗೆ ಸ್ತ್ರೀ–ಪುರುಷ ಸಂಬಂಧದ ಬಗ್ಗೆ ಲೈಂಗಿಕತೆಯನ್ನು ಮೀರಿ ಆಲೋಚಿಸಲು ಸಾಧ್ಯವಾಗುವುದಿಲ್ಲ. ವಿಧವೆಯರ ಸಂರಕ್ಷಣೆ, ಸಾಮಾಜಿಕ ಅಗತ್ಯಗಳನ್ನು ಪೂರೈಸುವುದು, ಬಡವರ ರಕ್ಷಣೆಯ ಗುರಿಯನ್ನು ಹೊಂದಿರುವ, ಪ್ರವಾದಿಯವರ(ಸ) ವಿವಾಹಗಳ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು, ಅದನ್ನು ಒಪ್ಪಲು, ಇಂತಹ ವ್ಯಕ್ತಿಗಳಿಗೆ ಸಾಧ್ಯವಾಗದೆ ಹೋದ ವಿಷಯದಲ್ಲಿ ಆಶ್ಚರ್ಯವೇನೂ ಇಲ್ಲ.

❖ ❖ ❖ ❖

ಅಧ್ಯಾಯ 2

ಪ್ರವಾದಿಯವರು(ಸ) ಭೋಗಾಸಕ್ತರೇ?

ಈ ಪಾವನ ಮನುಷ್ಯನ ವ್ಯಕ್ತಿತ್ವದ ಕುರಿತು ಅಧ್ಯಯನ ಮಾಡಿದ ಯಾರಿಗಾದರೂ ಇಸ್ಲಾಮಿನ ಕೆಲವು ವಿಮರ್ಶಕರು ಪ್ರವಾದಿಯವರನ್ನು(ಸ) ಭೋಗಾಸಕ್ತರೆಂದು ಚಿತ್ರಿಸಿರುವುದು ಘೋರ ಅಪರಾಧ ಎಂಬುದು ಯಾವುದೇ ಸಂದೇಹವಿಲ್ಲದೆ ಮನವರಿಕೆಯಾಗುತ್ತದೆ. ಅವರ ಜೀವನದಷ್ಟು ನಿಖರವಾಗಿ ಮತ್ತು ಸೂಕ್ಷ್ಮವಾಗಿ ದಾಖಲಿಸಲ್ಪಟ್ಟ ಜೀವನ ಜಗತ್ತಿನಲ್ಲಿ ಬೇರೊಂದಿಲ್ಲ ಎಂಬುದು ಪ್ರಸ್ತಾಪನೀಯವಾಗಿದೆ. ಸತ್ಯಾನ್ವೇಷಕರು ಸಂಶಯಾತೀತವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವ ಕೆಲವು ಸತ್ಯಗಳು ಇಲ್ಲಿ ವಿವರಿಸಲಾಗಿದೆ.

1. ಆರನೇ ಶತಮಾನದಲ್ಲಿ ಅರೇಬಿಯಾದಲ್ಲಿ ಲೈಂಗಿಕ ಅರಾಜಕತೆ ಮತ್ತು ನಿರ್ಲಜ್ಜೆ ಎಲ್ಲೆಡೆ ತಾಂಡವವಾಡುತ್ತಿತ್ತು. ಕಟ್ಟುನಿಟ್ಟಾಗಿ ಆಚರಿಸಲ್ಪಡುವ ಯಾವುದೇ ನೈತಿಕ ನಿಯಮ ಅಲ್ಲಿರಲಿಲ್ಲ. ಪವಿತ್ರ ಕಅಬಾ ಎಂಬ ಗೌರವಾನ್ವಿತ ಆರಾಧನಾಲಯದ ಪರಿಸರದಲ್ಲಿ ಕೂಡ ಅಶ್ಲೀಲ ಕೃತ್ಯಗಳು ಅನಾಯಾಸವಾಗಿ ನಡೆಯುತ್ತಿದ್ದವು. ವಿವಾಹೇತರ ಸಂಬಂಧಗಳಿಗೆ ಯಾವುದೇ ನಿಷೇಧವಿರಲಿಲ್ಲ. ಅಲ್ಲಿ ನಡೆಯುತ್ತಿದ್ದ ವಿವಾಹಗಳು ಕೂಡ ಭ್ರಷ್ಟ ಲೈಂಗಿಕ ಜೀವನವನ್ನು ಕಾನೂನು ಮತ್ತು ಸಭ್ಯತೆ ಹೆಸರಿನಲ್ಲಿ ಅಡಗಿಸುವ ಒಂದು ತಂತ್ರ ಮಾತ್ರವಾಗಿತ್ತು. ವೇಶ್ಯಾವೃತ್ತಿಯಲ್ಲಿ ತೊಡಗಿಕೊಂಡವರು ವಿಟ ಪುರುಷರನ್ನು ಬಹಿರಂಗವಾಗಿ ಆಹ್ವಾನಿಸುತ್ತಿದ್ದರು. ತಮ್ಮ ವೃತ್ತಿಯೇ ಅದು ಎಂಬುದನ್ನು ತಿಳಿಸಲಿಕ್ಕಾಗಿ ತಮ್ಮ ಮನೆಗಳ ಮುಂದೆ ಧ್ವಜಗಳನ್ನು ನಾಟಿಡುತ್ತಿದ್ದರು. ಯಾರಿಗೆ ಯಾರನ್ನು ಬೇಕಾದರೂ ಸದಾ ಕಾಮಕ್ಕಾಗಿ ಬಳಸಲು ಸಾಧ್ಯವಾಗುವ ಪರಿಸ್ಥಿತಿ ಅಲ್ಲಿತ್ತು.

ಎಲ್ಲ ರೀತಿಯಲ್ಲಿಯೂ ಲೈಂಗಿಕ ಅರಾಜಕತೆಯು ಮೇಲುಗೈ ಸಾಧಿಸಿದ್ದ ಸಮಾಜದಲ್ಲಿ ಪ್ರವಾದಿ ಮುಹಮ್ಮದರು(ಸ) ಸಂಪೂರ್ಣ ಪಾವನ ಮತ್ತು ನೈತಿಕ ಜೀವನವನ್ನು ನಡೆಸಿದರು. ಅವರ ಕಠಿಣ ವಿಮರ್ಶಕರಿಗೂ ಕೂಡ ಅವರ ಜೀವನದ ಬಗ್ಗೆ ಟೀಕೆಯನ್ನು ಮಾಡುವಂತಹ ಯಾವುದೇ ಅವಕಾಶವಿಲ್ಲದ ರೀತಿಯಲ್ಲಿ ಅವರ ಜೀವನವು ಪರಮ ಪವಿತ್ರವಾಗಿತ್ತು.

2. ಪ್ರವಾದಿ ಮುಹಮ್ಮದ್(ಸ)ರು ಬಹಳ ಸುಂದರ, ಬಲಶಾಲಿ ಮತ್ತು ದೃಢಕಾಯರಾಗಿದ್ದರು. ನೋಡುಗರ ಗಮನವನ್ನು ಸೆಳೆಯಬಲ್ಲಂತಹ ಆಕರ್ಷಣೆ ಅವರಿಗಿತ್ತು. ಅವರದು ಬಹಳ ಕುಲೀನ ಮನೆತನವಾಗಿತ್ತು. ಅವರು ತಮ್ಮ ಸ್ವಭಾವ, ವರ್ತನೆ ಮತ್ತು ವ್ಯವಹಾರದ ಕಾರಣದಿಂದಾಗಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದರು.

ಪ್ರವಾದಿ ಮುಹಮ್ಮದ್(ಸ)ರು 25 ವರ್ಷ ಪ್ರಾಯದಲ್ಲಿ ವಿವಾಹಿತರಾದರು. ಅವರು ಎಂದೂ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿರಲಿಲ್ಲ; ಆ ಬಗ್ಗೆ ಆಲೋಚಿಸಿರಲೂ ಇಲ್ಲ. ನೈತಿಕತೆಗೆ ವಿರುದ್ಧವಾದ ಮತ್ತು ಅಶ್ಲೀಲವಾದ ಎಲ್ಲ ಕೃತ್ಯಗಳಿಂದಲೂ ಸಂಪೂರ್ಣವಾಗಿ ದೂರ ಉಳಿದಿದ್ದರು. ಅಶ್ಲೀಲತೆ ಮತ್ತು ನಿರ್ಲಜ್ಜೆಯ ವಿಷಯದಲ್ಲಿ ಬಹಳ ಜಾಗರೂಕರಾಗಿದ್ದರು. ವಿಮರ್ಶಕರು ಆರೋಪಿಸುವಂತಹ ಚಾರಿತ್ರ್ಯವನ್ನು ಪ್ರವಾದಿಯವರು(ಸ) ಹೊಂದಿರುತ್ತಿದ್ದರೆ, ಮುಕ್ತ ಲೈಂಗಿಕತೆಗೆ ಯಾವುದೇ ರೀತಿಯ ಕಡಿವಾಣವಿಲ್ಲದ ಮಕ್ಕಾದಲ್ಲಿ ಪರಮ ಪವಿತ್ರ ಜೀವನವನ್ನು ಸಾಗಿಸುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

3. ತನ್ನ ಸಮವಯಸ್ಕಳನ್ನು ಅಥವಾ ತನಗಿಂತ ಸಣ್ಣ ಪ್ರಾಯದ ಯಾವುದೇ ಸುಂದರಿಯನ್ನು ವಿವಾಹವಾಗುವುದಕ್ಕೆ ಅವಕಾಶ ಇದ್ದರೂ ಕೂಡ ಹದಿನೈದು ವರ್ಷ ಹಿರಿಯರಾದಂತಹ ಖದೀಜಾರನ್ನು ವಿವಾಹವಾದರು. ಖದೀಜರಾದರೋ ಎರಡು ಬಾರಿ ವಿವಾಹಿತರಾಗಿ ವಿಧವೆಯಾದ ಸ್ತ್ರೀಯಾಗಿದ್ದರು. ನಾಲ್ಕು ಮಕ್ಕಳ ತಾಯಿ ಕೂಡ ಆಗಿದ್ದರು.

ಪ್ರವಾದಿತ್ವ ಲಭಿಸಿದ ಬಳಿಕ ಅವರಿಗೆ ನಿರ್ವಹಿಸಬೇಕಿದ್ದಂತಹ ಮಹತ್ಕಾರ್ಯಕ್ಕಾಗಿ ಅಲ್ಲಾಹನು ಖದೀಜಾ(ರ) ಮತ್ತು ಪ್ರವಾದಿ ಮುಹಮ್ಮದ್(ಸ)ರನ್ನು ದಂಪತಿಗಳನ್ನಾಗಿ ಮಾಡಿರಬಹುದು ಎಂಬುದು ಆ ಬಳಿಕದ ಘಟನೆಗಳಿಂದ ವ್ಯಕ್ತವಾಗುತ್ತದೆ. ವಿವಾಹದ ಉದ್ದೇಶ ಲೈಂಗಿಕ ಅಗತ್ಯಗಳನ್ನು ಪೂರ್ತಿಕರಿಸುವುದು ಮಾತ್ರವಲ್ಲ. ಇಂತಹ ಮಹತ್ವಪೂರ್ಣವಾದಂತಹ ಕೆಲಸಗಳನ್ನು ನಿರ್ವಹಿಸುವುದು ಕೂಡ ಅದರಲ್ಲಿ ಸೇರಿದೆ.

4. ಅಂದು ಜಗತ್ತಿನೆಲ್ಲೆಡೆ ಚಾಲ್ತಿಯಲ್ಲಿದ್ದಂತೆ ಅರೇಬಿಯಾದಲ್ಲಿಯೂ ಬಹುಪತ್ನಿತ್ವ ಆಕ್ಷೇಪಕರವೋ ಅಸಾಮಾನ್ಯವೋ ಆಗಿರಲಿಲ್ಲ. ಅದು ಘನತೆ, ಶ್ರೇಷ್ಠತೆ ಮತ್ತು ಅರ್ಹತೆಯ ಸಂಕೇತಗಳಾಗಿದ್ದವು. ಆ ಕಾಲದಲ್ಲಿ ಅಪವಾದವೆಂದರೆ ಏಕಪತ್ನಿತ್ವವಾಗಿತ್ತು. ಹೀಗಿದ್ದರೂ ಪ್ರಥಮ ಪತ್ನಿ ಖದೀಜಾ ಬೀಬಿ ಈ ಲೋಕವನ್ನು ಬಿಟ್ಟಗಲುವ ವರೆಗೆ ಪ್ರವಾದಿಯವರು(ಸ) ಇನ್ನೊಂದು ವಿವಾಹ ಮಾಡಿಕೊಳ್ಳಲಿಲ್ಲ ಅಥವಾ 50 ವರ್ಷ ವಯಸ್ಸಿನ ವರೆಗೆ ಏಕಪತ್ನೀವ್ರತರಾಗಿ ಅವರು ಜೀವಿಸಿದರು. ಪ್ರವಾದಿಯವರ(ಸ) ಬಹುಪತ್ನಿತ್ವಕ್ಕೆ ಕಾರಣ ಅವರ ಲೈಂಗಿಕಾಸಕ್ತಿಯಾಗಿರುತ್ತಿದ್ದರೆ, ಯೌವನ ಕಾಲದಲ್ಲಿ,

ಬಿಸಿರಕ್ತ ಮತ್ತು ಭಾವನಾತ್ಮಕ ಉತ್ಸಾಹದ ದಿನಗಳಲ್ಲಿ ಅವರು ಒಂದಕ್ಕಿಂತ ಹೆಚ್ಚು ವಿವಾಹಗಳನ್ನು ಮಾಡಿಕೊಳ್ಳಬೇಕಿತ್ತು. ಮಾತ್ರವಲ್ಲ, ಅವರು ಖದೀಜಾ(ರ)ರವರ ನಿಧನದ ನಂತರ ಎರಡನೆಯ ಬಾರಿ ವಿವಾಹವಾದದ್ದು ಕೂಡ ತನಗಿಂತ ವಯಸ್ಸಿನಲ್ಲಿ ಹಿರಿಯರಾದ ಸೌದಾ(ರ) ಎಂಬ ಹೆಸರಿನ ವಿಧವೆಯನ್ನಾಗಿತ್ತು.

5. ಮದೀನಕ್ಕೆ ವಲಸೆ ಹೋದ ಬಳಿಕ ಪ್ರವಾದಿಯವರು(ಸ) ರಾಷ್ಟ್ರದ ಪ್ರಮುಖ ವ್ಯಕ್ತಿ, ಆಡಳಿತಾಧಿಕಾರಿ ಮತ್ತು ಸೇನೆಯ ಮುಖ್ಯಸ್ಥರಾದರು. ತನ್ನ ಅಧಿಕಾರದಲ್ಲಿರುವ ಪ್ರದೇಶದಲ್ಲಿ ಯಾವ ವಯಸ್ಸಿನ ಸುಂದರಿಯನ್ನು ಬೇಕಿದ್ದರೂ ಅವರು ವಿವಾಹವಾಗಬಹುದಿತ್ತು. ಅಂತಹ ಸ್ಥಾನಮಾನದಲ್ಲಿ ಅವರಿದ್ದರು. ಆ ಸಂದರ್ಭದಲ್ಲಿ ಅವರು ಯಾವ ಕನ್ಯೆಯನ್ನೂ ವಿವಾಹ ಮಾಡಿಕೊಳ್ಳಲಿಲ್ಲ. ತನ್ನ ಶಕ್ತಿ ಮತ್ತು ಅಧಿಕಾರವನ್ನು ಉಪಯೋಗಿಸಿಕೊಂಡು ಯಾವುದೇ ಹೆಣ್ಣನ್ನು ಲೈಂಗಿಕವಾಗಿ ಬಳಸಿದ ಅಥವಾ ವಿವಾಹಕ್ಕೆ ಒತ್ತಾಯಿಸಿದ ಉದಾಹರಣೆಯಿಲ್ಲ. ಇಸ್ಲಾಮಿನ ಕಟು ವಿಮರ್ಶಕರಿಗೂ ಕೂಡ ಈ ರೀತಿ ಆರೋಪಗಳನ್ನು ಹೊರಿಸಲು ಸಾಧ್ಯವಾಗಲಿಲ್ಲ. ಪ್ರವಾದಿಯವರು(ಸ) ತನ್ನ ಪತ್ನಿಯರಿಗೆ ಬೇಕಿದ್ದರೆ ತನ್ನನ್ನು ತೊರೆದು ಹೋಗಬಹುದು ಎಂಬಂತಹ ಸ್ವಾತಂತ್ರ್ಯವನ್ನು ನೀಡಿದ್ದರು. ಈ ಸ್ವಾತಂತ್ರ್ಯದ ಘೋಷಣೆಯನ್ನು ಪ್ರಪಂಚದ ಪರಿಪಾಲಕನ ಆದೇಶ ಅನುಸಾರವೇ ಅವರು ಮಾಡಿದ್ದರು.

"ಪೈಗಂಬರರೇ, ನಿಮ್ಮ ಪತ್ನಿಯರೊಡನೆ ಹೇಳಿರಿ: ಈ ಲೋಕ ಮತ್ತು ಇದರ ವೈಭವಗಳನ್ನು ಇಚ್ಛಿಸುತ್ತೀರಾದರೆ ಬನ್ನಿ, ನಾನು ನಿಮಗೆ ಏನಾದರೂ ಕೊಡಿಸಿ ನಿಮ್ಮನ್ನು ಉತ್ತಮ ರೀತಿಯಲ್ಲಿ ಬೀಳ್ಕೊಡುತ್ತೇನೆ." **(ಪವಿತ್ರ ಕುರ್‌ಆನ್: 33: 28)**

ಪ್ರವಾದಿ ಪತ್ನಿಯರ ಪೈಕಿ ಯಾರೂ ಈ ರೀತಿ ಮಾಡಲಿಲ್ಲ. ಓರ್ವ ಕಾಮಾತುರನ ಕೈಯಲ್ಲಿ ಸಿಕ್ಕಿಬಿದ್ದ ಸ್ತ್ರೀಯರು ಅವರಾಗಿದ್ದರೆ, ಮೊದಲ ಅವಕಾಶದಲ್ಲಿಯೇ ಅಲ್ಲಿಂದ ಪಾರಾಗಲು ಪ್ರಯತ್ನಿಸುತ್ತಿದ್ದರು.

6. ಪ್ರವಾದಿಯವರು(ಸ) ವಿವಾಹ ಮಾಡಿಕೊಂಡವರ ಪೈಕಿ ಒಬ್ಬರನ್ನು ಬಿಟ್ಟು ಉಳಿದವರೆಲ್ಲ ವಿಧವೆಯರೂ ವಿಚ್ಛೇದಿತೆಯರೂ ಆಗಿದ್ದರು. ಅವರಲ್ಲಿ ಹೆಚ್ಚಿನವರು ಯೌವನ ಪ್ರಾಯವನ್ನು ಕಳೆದು ನೋಡುಗರ ಕಣ್ಣಿಗೆ ಕುತೂಹಲವನ್ನು ಹುಟ್ಟಿಸದ ರೀತಿಯಲ್ಲಿದ್ದರು. ಪ್ರವಾದಿ(ಸ) ಮೂರನೇ ವಿವಾಹ ಮಾಡಿಕೊಂಡ ಆಯಿಶಾ(ರ) ಮಾತ್ರ ಅವರ ಪತ್ನಿಯರ ಪೈಕಿ ಕನ್ಯೆಯಾಗಿದ್ದರು. ಅವರು ಆಯಿಶಾ(ರ)ರನ್ನು ಅವರ ಸಣ್ಣ ಪ್ರಾಯದಲ್ಲಿ ವಿವಾಹವಾಗಿದ್ದರು. ಮೂರು ವರ್ಷ ಕಳೆದ ಬಳಿಕ ಅವರೊಡನೆ ದಾಂಪತ್ಯ ಜೀವನ ಆರಂಭಿಸಿದರು. ಕನ್ಯೆಯಾಗಿದ್ದ ಆಯಿಶಾ(ರ)ರನ್ನು ವಿವಾಹವಾದುದರಿಂದಾಗಿ ಲೋಕಾಂತ್ಯದ ವರೆಗೆ ಬರುವ ಮನುಷ್ಯ ಸಮೂಹಕ್ಕೆ ಅವರಿಂದ ಅಮೂಲ್ಯವಾದ ಅನೇಕ ಜ್ಞಾನವು ಲಭಿಸಲು ಅಲ್ಲಾಹನು ಅವಕಾಶವನ್ನು ಒದಗಿಸಿದನು.

7. ಪ್ರವಾದಿಯವರ(ಸ) ಬಗ್ಗೆ ವಿಮರ್ಶಕರು ಮಾಡಿರುವ ಆರೋಪಗಳು ನಿಜವೇ ಆಗಿದ್ದರೆ, ಅರೇಬಿಯಾದಲ್ಲಿ ಅಂದು ಸಾಮಾನ್ಯವಾಗಿದ್ದ ಲೈಂಗಿಕ ಅರಾಜಕತೆಗೆ ಪ್ರವಾದಿಯವರು(ಸ) ಎಂದೂ ನಿಷೇಧವನ್ನು ಹೇರುತ್ತಿರಲಿಲ್ಲ. ವಿವಾಹೇತರ ಸಂಬಂಧಗಳಿಗೆ ಯಾವುದೇ ರೀತಿಯ ನಿಷೇಧವಿಲ್ಲದ ವ್ಯವಸ್ಥೆಯನ್ನು ಭೋಗಾಸಕ್ತರು ಸಾಮಾನ್ಯವಾಗಿ ಇಷ್ಟಪಡುತ್ತಾರೆ. ಆದರೆ ಪ್ರವಾದಿ ಮುಹಮ್ಮದ್(ಸ)ರ ಮೂಲಕ ಅವತೀರ್ಣವಾದ ಜೀವನ ವ್ಯವಸ್ಥೆ, ಸ್ತ್ರೀ–ಪುರುಷ ಸಂಬಂಧಕ್ಕೆ ಬಹಳ ಕಟ್ಟುನಿಟ್ಟಾದ ನಿರ್ಬಂಧಗಳನ್ನು ಹೇರಿತು. ವಿವಾಹೇತರ ಸಂಬಂಧಗಳಿಗೆ ಶಿಕ್ಷೆಯನ್ನು ನಿಶ್ಚಯಿಸಲಾಯಿತು. ಸ್ತ್ರೀ–ಪುರುಷರು ಪರಸ್ಪರ ಲೈಂಗಿಕಾಸಕ್ತಿಯ ನೋಟ ಬೀರುವುದನ್ನು ಕೂಡಾ ನಿಷೇಧಿಸಲಾಯಿತು. ಅನ್ಯ ಸ್ತ್ರೀ–ಪುರುಷರು ಏಕಾಂತದಲ್ಲಿ ಜೊತೆಗೆ ಇರಬಾರದು ಎಂದು ಆದೇಶಿಸಲಾಯಿತು. ಲೈಂಗಿಕತೆಯ ಪಾವಿತ್ರ್ಯವನ್ನು ಕಾಪಾಡುವ ನಿಟ್ಟಿನಲ್ಲಿ ನೈತಿಕ ಶಿಷ್ಟಾಚಾರಗಳನ್ನು ರೂಪಿಸಲಾಯಿತು. ಇವುಗಳಾವುವೂ ಕಾಮಸಕ್ತರು ಇಷ್ಟಪಡುವ ವಿಷಯಗಳಲ್ಲ.

ಧರ್ಮವನ್ನು ತಿರಸ್ಕರಿಸುವ ನಿಲುವನ್ನು ಹೊಂದಿರುವ ವಿಚಾರವಾದಿಗಳು, ನಾಸ್ತಿಕರು ಇಂತಹ ನಿಯಮ ನಿಬಂಧನೆಗಳನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ. ಇವುಗಳನ್ನೆಲ್ಲ ಕಠಿಣ ಪದಗಳೊಂದಿಗೆ ಟೀಕಿಸುವವರು ಆಗಿರುತ್ತಾರೆ. ಸ್ತ್ರೀಯು ತನ್ನ ದೇಹದ ಅತಿಹೆಚ್ಚಿನ ಭಾಗಗಳನ್ನು ತೆರೆದಿಡಬೇಕೆಂದು, ಸ್ತ್ರೀ–ಪುರುಷರು ಕೂಡಿ ಕಲೆತು, ಪರಸ್ಪರ ಸ್ಪರ್ಶಿಸಿ ಜೀವಿಸಲು ಅವಕಾಶ ಸಿಗಬೇಕೆಂದು ಬಯಸುವವರು ಮತ್ತು ಅದನ್ನು ಪ್ರತಿಪಾದಿಸುವವರು, ಪ್ರೋತ್ಸಾಹಿಸುವವರು ಇವರಾಗಿದ್ದಾರೆ.

8. ಪ್ರವಾದಿಯವರು ಜೀವಿಸಿದ್ದ ಸಮಾಜದಲ್ಲಿ ಇಸ್ಲಾಮಿನ ಶತ್ರುಗಳು ಅವರ ಜೀವನವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ನಿಖರವಾಗಿ ವಿಶ್ಲೇಷಿಸುತ್ತಿದ್ದರು. ತೀಕ್ಷ್ಣವಾಗಿ ವಿಮರ್ಶಿಸುತ್ತಿದ್ದರು. ಅವರ ಮೇಲೆ ಅನೇಕ ಸುಳ್ಳು ಆರೋಪಗಳನ್ನು ಹೊರಿಸಲಾಯಿತು. ಅಪವಾದಗಳನ್ನು ಹೇರಲಾಯಿತು. ಆದರೆ ಯಾರೊಬ್ಬರೂ ಅವರ ಮೇಲೆ ಲೈಂಗಿಕಾಸಕ್ತ, ಭೋಗಾಸಕ್ತ, ಅನೈತಿಕ ವ್ಯಕ್ತಿ ಅಥವಾ ಕಾಮಾಸಕ್ತ ಎಂಬ ಆರೋಪಗಳನ್ನು ಹೊರಿಸಲಿಲ್ಲ. ಅವರ ಮೂಲಕ ಅವತೀರ್ಣವಾದ ಆದರ್ಶ, ನಂಬಿಕೆ ಮತ್ತು ವಿಶ್ವಾಸವನ್ನು ಉಗ್ರವಾಗಿ ಟೀಕಿಸಿದರೂ ವಿರೋಧಿಸಿದರೂ ಕೂಡ ಪ್ರವಾದಿಯವರ ಜೀವನವು ಪರಮ ಪವಿತ್ರವಾಗಿತ್ತು ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದರು.

ಹಾಗಿದ್ದರೂ ಪ್ರವಾದಿಯವರು ಔಪಚಾರಿಕವಾಗಿ ಹನ್ನೊಂದು ವಿವಾಹಗಳನ್ನು ಮಾಡಿಕೊಂಡದ್ದೇಕೆ, ಏಕಕಾಲದಲ್ಲಿ ಒಂಬತ್ತು ಪತ್ನಿಯರನ್ನು ಇಟ್ಟುಕೊಂಡದ್ದೇಕೆ ಎಂಬ ಪ್ರಶ್ನೆಗಳಿಗೆ ವಿವರವಾದ ವಿವರಣೆಗಳನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ.

❖ ❖ ❖ ❖

ಅಧ್ಯಾಯ 3

ನಲ್ವತ್ತು ಮತ್ತು ಅರುವತ್ತಾರು ವಯಸ್ಸಿನ ಮಹಿಳೆಯರು

ಖುವೈಲಿದ್‌ರ ಮಗಳು ಖದೀಜಾ ಬೀಬಿ ಪ್ರಮುಖ ವರ್ತಕಿಯಾಗಿದ್ದರು. ಶ್ರೀಮಂತೆಯಾಗಿದ್ದರು. ಸದ್ಗುಣ ಸಂಪನ್ನತೆ ಮತ್ತು ಸುಶೀಲತೆಗೆ ಹೆಸರುವಾಸಿಯಾಗಿದ್ದರು.

ಮುಹಮ್ಮದರ ಪಾಲನೆಯ ಜವಾಬ್ದಾರಿಯನ್ನು ವಹಿಸಿದ್ದ ದೊಡ್ಡಪ್ಪ ಅಬೂತಾಲಿಬ್‌ರೊಂದಿಗೆ ಸಮಾಲೋಚನೆ ನಡೆಸಿದ ಖದೀಜಾರವರು ಮುಹಮ್ಮದರನ್ನು ತನ್ನ ವ್ಯಾಪಾರಿ ಸರಕುಗಳೊಂದಿಗೆ ಸಿರಿಯಕ್ಕೆ ಕಳುಹಿಸಿದರು. ವ್ಯಾಪಾರದಲ್ಲಿ ಎಂದಿಗಿಂತ ಹೆಚ್ಚು ಲಾಭ ಲಭಿಸಿತು. ಅದಕ್ಕೆ ಕಾರಣವಾದ ಮುಹಮ್ಮದರ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯು ಖದೀಜಾ(ರ)ರಿಗೆ ಬಹಳ ಹಿಡಿಸಿತು. ಅವರ ಒಳ್ಳೆಯ ಗುಣನಡತೆ, ಸದ್ವ್ಯವಹಾರ, ಜೀವನ ಪರಿಶುದ್ಧತೆಯನ್ನು ಕಂಡು ಅವರು ಬಹಳ ಆಕರ್ಷಿತರಾದರು. ಅವರನ್ನೇ ಜೀವನ ಸಂಗಾತಿಯಾಗಿ ಲಭಿಸಿದ್ದರೆ ಚೆನ್ನಾಗಿತ್ತು ಎಂದು ಆಶಿಸಿದರು. ಖದೀಜಾ(ರ) ಈ ಮೊದಲೇ ಎರಡು ವಿವಾಹವಾಗಿ ವಿಧವೆಯಾಗಿದ್ದರು ಮತ್ತು ನಾಲ್ಕು ಮಕ್ಕಳ ತಾಯಿಯೂ ಆಗಿದ್ದರು.

ಖದೀಜಾ(ರ)ರವರೇ ವಿವಾಹ ಪ್ರಸ್ತಾಪವನ್ನಿಟ್ಟರು. ಅಗತ್ಯವಾದ ಸಮಲೋಚನೆ, ಚರ್ಚೆಗಳ ಬಳಿಕ ವಿವಾಹ ನೆರವೇರಿತು. ಆಗ ಮುಹಮ್ಮದ್(ಸ)ರು ಇಪ್ಪತ್ತೈದರ ಹರೆಯದವರಾಗಿದ್ದರೆ, ಖದೀಜಾ ಬೀಬಿ ನಲವತ್ತು ವರ್ಷದವರಾಗಿದ್ದರು.

ಪ್ರವಾದಿತ್ವ ಲಭಿಸುವಾಗ ಮುಹಮ್ಮದ್(ಸ)ರಿಗೆ ನಲವತ್ತು ವರ್ಷಗಳಾಗಿದ್ದವು. ಆಗ ಖದೀಜಾ(ರ)ರಿಗೆ ಐವತ್ತೈದು ವರ್ಷವಾಗಿತ್ತು. ಬಳಿಕ ಹತ್ತು ವರ್ಷ ಕಳೆದು ತಮ್ಮ ಅರವತ್ತೈದನೇ ವಯಸ್ಸಿನಲ್ಲಿ ಅವರು ಮರಣ ಹೊಂದಿದರು. ಅಲ್ಲಿಯ ವರೆಗೆ ಪ್ರವಾದಿಯವರು(ಸ) ಬೇರೆ ವಿವಾಹವನ್ನು ಮಾಡಿಕೊಳ್ಳಲಿಲ್ಲ. ತನ್ನ ಸಂಗಾತಿಗಳಿಗೆಲ್ಲ ಒಂದಕ್ಕಿಂತ ಹೆಚ್ಚು ಪತ್ನಿಯರಿದ್ದರೂ ಕೂಡ, ಅವರು ಬೇರೆ ಯಾವ ಸ್ತ್ರೀಯನ್ನು ಜೀವನ ಸಂಗಾತಿಯನ್ನಾಗಿ ಸ್ವೀಕರಿಸುವುದರ ಕುರಿತು ಆಲೋಚಿಸಲೂ ಇಲ್ಲ.

ಪ್ರವಾದಿ ಮುಹಮ್ಮದರು ಅತಿ ಹೆಚ್ಚು ಸಮಯ ದಾಂಪತ್ಯ ಜೀವನವನ್ನು ನಡೆಸಿದ್ದು ಖದೀಜಾ(ರ)ರೊಂದಿಗಾಗಿತ್ತು. 25 ವರ್ಷ ಜೊತೆಗೆ ಬಾಳಿದರು. ಅವರಿಗೆ

ಆರು ಮಕ್ಕಳು ಜನಿಸಿದ್ದು ಆ ದಾಂಪತ್ಯ ಜೀವನದಲ್ಲೇ ಆಗಿತ್ತು.

ದೈವಿಕ ಮಧ್ಯಸ್ಥಿಕೆ

ಪ್ರವಾದಿತ್ವ ಪದವಿಯನ್ನು ನೀಡಲಿಕ್ಕಾಗಿ ಅಲ್ಲಾಹನು ಮುಹಮ್ಮದ್(ಸ)ರನ್ನು ವಿಶೇಷ ರೀತಿಯಲ್ಲಿ ಬೆಳೆಸುತ್ತಿದ್ದನು. ಖದೀಜಾ(ರ)ರನ್ನು ವಿವಾಹವಾದುದರಲ್ಲಿ ಕೂಡ ದೈವಿಕ ಮಧ್ಯಸ್ಥಿಕೆ ಇರುವುದು ಮನದಟ್ಟಾಗುತ್ತದೆ. ಖದೀಜಾ(ರ)ರ ಪ್ರಬುದ್ಧತೆ, ಬುದ್ಧಿವಂತಿಕೆ, ಸಹನೆ, ಉದಾರಶೀಲತೆ, ತ್ಯಾಗ ಗುಣಗಳ ಕಾರಣದಿಂದಾಗಿ ಪ್ರವಾದಿತ್ವದ ಆರಂಭದ ದಶಕಗಳಲ್ಲಿ ಎದುರಿಸಿದ ತೀಕ್ಷ್ಣವಾದ ವಿರೋಧ, ಅಸಹನೀಯ ಕಷ್ಟ-ನಷ್ಟ ಮತ್ತು ಕಠಿಣವಾದ ಸತ್ವಪರೀಕ್ಷೆ ಮುಂತಾದವುಗಳಿಗೆ ತತ್ತರಿಸದೆ ಬದ್ಧತೆಯೊಂದಿಗೆ ಜೊತೆಯಾಗಿ ನಿಲ್ಲಲು ಸಾಧ್ಯವಾಯಿತು.

ಅವರಿಬ್ಬರೂ ಪ್ರವಾದಿತ್ವಕ್ಕಿಂತ ಮೊದಲೇ ಆದರ್ಶ ಜೀವನವನ್ನು ನಡೆಸುತ್ತಿದ್ದರು. ಪ್ರವಾದಿ ಮುಹಮ್ಮದ್(ಸ)ರಂತೆ ಖದೀಜಾ(ರ) ಕೂಡ ಏಕದೇವ ವಿಶ್ವಾಸಿಯಾಗಿದ್ದರು. ನೊಂದವರಿಗೆ ಸಹಾಯ ಮಾಡುವುದರಲ್ಲಿ, ಅಸಹಾಯಕರಿಗೆ ಸಾಂತ್ವನ ನೀಡುವುದರಲ್ಲಿ, ನಿರಾಶ್ರಿತರಿಗೆ ಆಶ್ರಯ ನೀಡುವುದರಲ್ಲಿ ಇಬ್ಬರೂ ಸಮಾನ ಮನಸ್ಕರಾಗಿದ್ದರು, ಸಮಾನ ಸ್ವಭಾವದವರಾಗಿದ್ದರು.

ಮಾತೆಯ ಆರೈಕೆ ಸಿಗದೇ ಹೋದ ಪ್ರವಾದಿಯವರಿಗೆ(ಸ) ಖದೀಜಾ(ರ)ರಿಂದ ಮಾತೃತ್ವದ ಆರೈಕೆ ಸಿಕ್ಕಿತು. ಜತೆಗೆ ಸಹೋದರಿಯ ಮಮತೆ, ಪ್ರಿಯತಮೆಯ ಪ್ರೀತಿ, ಸ್ನೇಹಿತನ ಸ್ನೇಹವನ್ನು ಅನುಭವಿಸುವ ಅವಕಾಶವನ್ನು ಪಡೆದರು.

ಖದೀಜಾ(ರ)ರವರು ಮುಹಮ್ಮದ್(ಸ)ರ ಯಾವ ಬೇಡಿಕೆಗೂ ಇಲ್ಲ ಎನ್ನಲಿಲ್ಲ. ಯಾವುದಕ್ಕೂ ಅಡ್ಡಿ ಬರಲಿಲ್ಲ. ಅಗತ್ಯವಿರುವುದೆಲ್ಲವನ್ನು ಪೂರೈಸಿದರು. ಯಾವುದರಲ್ಲೂ ಅಸಮಾಧಾನ ವ್ಯಕ್ತಪಡಿಸಲಿಲ್ಲ. ಪ್ರವಾದಿ(ಸ) ಹಿರಾ ಗುಹೆಯಲ್ಲಿ ಏಕಾಂತ ವಾಸಕ್ಕೆ ಹೋದಾಗ ಕೂಡ ಅವರು ಆಕ್ಷೇಪಿಸಲಿಲ್ಲ. ಪತಿಯು ಬಹಳ ಇಷ್ಟಪಡುತ್ತಿದ್ದ ಆಹಾರ ಪದಾರ್ಥಗಳನ್ನು ತಯಾರಿಸಿ ವೃದ್ಧಾಪ್ಯದ ಕಷ್ಟಗಳನ್ನು ಸಹಿಸುತ್ತಾ ಬೆಟ್ಟವೇರಿ ಹಿರಾಗುಹೆಗೆ ಅದನ್ನು ತಲುಪಿಸುತ್ತಿದ್ದರು.

ಪ್ರವಾದಿ ಮುಹಮ್ಮದ್(ಸ)ರು ದೇವನ ಸಂದೇಶವಾಹಕರೆಂದು ಪ್ರಥಮವಾಗಿ ಒಪ್ಪಿಕೊಂಡವರು ಖದೀಜಾ(ರ) ಆಗಿದ್ದರು. ಪ್ರವಾದಿತ್ವದ ಬಹಳ ದೊಡ್ಡ ಹೊಣೆಗಾರಿಕೆ ಮುಹಮ್ಮದ್(ಸ)ರ ಮೇಲೆ ವಹಿಸಲ್ಪಟ್ಟಾಗ, ಅದು ಅವರನ್ನು ವಿಚಲಿತರಾಗಿಸಿದಾಗ, ಬೇರೆ ಯಾವ ಸ್ತ್ರೀಗೂ ಸಾಧ್ಯವಾಗದ ರೀತಿಯಲ್ಲಿ ಅವರು ಪ್ರವಾದಿಯವರನ್ನು ಸಮಾಧಾನಪಡಿಸಿದ್ದರು.

ಆ ಬಳಿಕ ಸತ್ಯ ಪ್ರಚಾರವನ್ನು ಆರಂಭಿಸಿದಾಗ, ಅನುಭವಿಸಬೇಕಾಗಿ ಬಂದ

ಕಠಿಣ ಸಂಕಷ್ಟಗಳನ್ನು ಎದುರಿಸಲು ಅವರಲ್ಲಿ ಧೈರ್ಯ ತುಂಬಿದರು. ಕಳವಳ ಚಿತ್ತರಾದ ಪ್ರವಾದಿಯವರನ್ನು(ಸ) ಸಾಂತ್ವನ ಪಡಿಸುವುದರಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಿದರು. ಪ್ರಿಯ ಪತಿಯಂತೆ ಅವರಿಗೂ ಅಪಹಾಸ್ಯ, ಆಕ್ಷೇಪ ಮತ್ತು ಅವಮಾನಗಳನ್ನು ಎದುರಿಸಬೇಕಾಗಿ ಬಂತು. ತಮ್ಮ ಸಂಪೂರ್ಣ ಸಂಪತ್ತನ್ನು ತಮ್ಮ ಪ್ರಿಯ ಪತಿಯು ಪ್ರತಿಪಾದಿಸುತ್ತಿದ್ದ ಆದರ್ಶಕ್ಕಾಗಿ ಖರ್ಚು ಮಾಡಿದರು. ಕೊನೆಗೆ ಅವರೊಂದಿಗೆ ಖದೀಜಾ(ರ)ರು ಕಠಿಣ ದಾರಿದ್ರ್ಯವನ್ನೂ ಅನುಭವಿಸಬೇಕಾಗಿ ಬಂತು. ಬಹಿಷ್ಕಾರದ ಸಮಯದಲ್ಲಿ ವಿವರಿಸಲಸಾಧ್ಯವಾದ ಹಸಿವು ಮತ್ತು ದಾಹವನ್ನು ಸಹಿಸಿದರು. ವಾರ್ಧಕ್ಯದ ಕಷ್ಟದಿಂದ ಅವರು ಸ್ವಲ್ಪವೂ ವಿಚಲಿತರಾಗಲಿಲ್ಲ, ಕಿರಿಕಿರಿಯನ್ನು ವ್ಯಕ್ತಪಡಿಸಲಿಲ್ಲ. ಖದೀಜಾ(ರ)ರೇ ಏಕೆ [ಪ್ರವಾದಿಯವರ(ಸ) ಪ್ರಥಮ ಪತ್ನಿಯಾದರು] ಎಂಬ ಪ್ರಶ್ನೆಗೆ ಅವರ ಈ ಜೀವನವೇ ಅತ್ಯುತ್ತಮ ಉತ್ತರದಂತಿತ್ತು.

ಪ್ರವಾದಿಯವರಿಗಾಗಿ ಸರ್ವಸ್ವವನ್ನು ತ್ಯಾಗ ಮಾಡಿ, ಎಲ್ಲಾ ಸಂಕಷ್ಟಗಳನ್ನು ಸಹಿಸಿಕೊಂಡು, ಸುದೀರ್ಘ ಕಾಲು ಶತಮಾನಗಳ ಕಾಲ ಬದುಕಿದ ಖದೀಜಾ(ರ), ಪ್ರವಾದಿ ಮುಹಮ್ಮದ್(ಸ)ರ ಮನಸ್ಸಿನಲ್ಲಿ ವಿಶಿಷ್ಟ ಪ್ರೀತಿ ಮತ್ತು ಸ್ಥಾನಮಾನ ಹೊಂದಿದ್ದರು. ಪ್ರವಾದಿಯವರು(ಸ) ಖದೀಜರ ಮರಣದ ಬಳಿಕ ಅವರನ್ನು ಸದಾ ಸ್ಮರಿಸುತ್ತಾ ಅವರ ಕುರಿತು ಆಗಾಗ್ಗೆ ಪ್ರಸ್ತಾಪಿಸುತ್ತಿದ್ದರು ಎಂದು ಆಯಿಶಾ(ರ) ಹೇಳುತ್ತಾರೆ. ತನ್ನ ಜೀವನದಲ್ಲಿ ವಿವಾಹಿತರಾಗಿ ಸೇರಿಕೊಂಡ ಇತರ ಎಲ್ಲಾ ಪತ್ನಿಯರಿಗಿಂತ ಮಿಗಿಲಾಗಿ ಖದೀಜಾ(ರ)ರನ್ನು ಪ್ರವಾದಿಯವರು ಪ್ರೀತಿಸಿದ್ದರು.

ಒಮ್ಮೆ ಆಯಿಶಾ(ರ)ರವರು ಸ್ವಲ್ಪ ವ್ಯಂಗ್ಯವಾಗಿ ಅವರ ಕುರಿತು ಹೀಗೆ ಹೇಳಿದರು, "ಖದೀಜಾರವರು ಒಬ್ಬ ಮುದುಕಿ ಅಲ್ಲವೇ? ಅಲ್ಲಾಹನು ಅವರಿಗಿಂತ ಉತ್ತಮ ಪತ್ನಿಯರನ್ನು ನಿಮಗೆ ನೀಡಿದ್ದಾನೆ. ಹೀಗಿರುತ್ತಾ ಸದಾ ಅವರನ್ನೇಕೆ ಸ್ಮರಿಸುತ್ತಿದ್ದೀರಿ?"

ಪ್ರವಾದಿಯವರಿಗೆ ಈ ಮಾತು ಸ್ವಲ್ಪವೂ ಹಿಡಿಸಲಿಲ್ಲ. ಅವರು ಹೇಳಿದರು, "ಇಲ್ಲ ನನಗೆ ಖದೀಜಾರಿಗಿಂತ ಉತ್ತಮ ಪತ್ನಿಯರು ದೊರೆತಿಲ್ಲ. ಎಲ್ಲರೂ ನನ್ನನ್ನು ನಿಷೇಧಿಸಿದಾಗ ಅವರು ನನ್ನನ್ನು ನಂಬಿದರು. ಎಲ್ಲರೂ ನನ್ನನ್ನು ತಿರಸ್ಕರಿಸಿದಾಗಲೂ ಅವರು ನನ್ನ ಕೈಬಿಡಲಿಲ್ಲ. ಎಲ್ಲ ಸಂದರ್ಭಗಳಲ್ಲಿಯೂ ಅವರು ನನಗೆ ನೆರವಾದರು. ಅವರ ಮೂಲಕ ಅಲ್ಲಾಹನು ನನಗೆ ಮಕ್ಕಳನ್ನು ಅನುಗ್ರಹಿಸಿದ್ದಾನೆ."

ವಿಚಾರವಾದಿಗಳು ಸೇರಿದಂತೆ ಎಲ್ಲ ವಿಮರ್ಶಕರು ವಾದಿಸುವಂತೆ ಪ್ರವಾದಿ ಮುಹಮ್ಮದ್(ಸ)ರು ಭೋಗಾಸಕ್ತ ಎಂದಾಗಿದ್ದರೆ, ವಾರ್ಧಕ್ಯದಿಂದ ಮರಣ ಹೊಂದಿದ ಪತ್ನಿಯ ಕುರಿತು, ಸಣ್ಣ ವಯಸ್ಸಿನ ಸುಂದರಿಯಾದ ಪತ್ನಿಯೊಡನೆ ಎಂದಿಗೂ ಈ ರೀತಿಯ ಪ್ರಶಂಸೆಯ ಮಾತುಗಳನ್ನು ಹೇಳುತ್ತಿರಲಿಲ್ಲ. ಇತರೆಲ್ಲರಿಗಿಂತಲೂ

ಅವರಿಗೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಈ ರೀತಿ ಬಹಿರಂಗವಾಗಿ ಹೇಳಿಕೊಳ್ಳುತ್ತಿರಲಿಲ್ಲ. ಇಷ್ಟು ಮಾತ್ರವಲ್ಲ, ಪ್ರವಾದಿಯವರು(ಸ) ಖದೀಜಾ(ರ)ರಿಗೆ ಪ್ರತ್ಯೇಕ ಸ್ಥಾನಮಾನಗಳನ್ನು ನೀಡಿದ್ದು ಅವರಲ್ಲಿದ್ದ ಸೌಂದರ್ಯ ಅಥವಾ ಶರೀರ ಪ್ರಕೃತಿಯ ಕಾರಣದಿಂದಾಗಿರಲಿಲ್ಲ ಎಂಬುದು ಗಮನಾರ್ಹವಾಗಿದೆ.

ಎರಡನೆಯ ವಿವಾಹ

ಖದೀಜಾ(ರ)ರವರ ನಿಧನದ ನಂತರ ಪ್ರವಾದಿ(ಸ) ಸೌದಾ(ರ)ರನ್ನು ವಿವಾಹವಾದರು. ಅವರು ಕುರೈಶಿ ಕುಟುಂಬಕ್ಕೆ ಸೇರಿದ ಝಮ್‌ಆ ಬಿನ್ ಖೈಸ್‌ರ ಪುತ್ರಿ.

ಬಹಳ ಉದಾರಿಯಾಗಿ ಗುರುತಿಸಲ್ಪಟ್ಟಿದ್ದ ಸೌದಾ(ರ)ರವರು ಅಪಾರ ಧೀಮಂತಿಕೆಯುಳ್ಳವರಾಗಿದ್ದರು. ಒಳಿತಿನ ಬಗ್ಗೆ ಅವರಿಗಿದ್ದ ಆಸಕ್ತಿಯು ಅವರನ್ನು ಇಸ್ಲಾಮಿಗೆ ನಿಕಟಗೊಳಿಸಿತು. ಸಂಪೂರ್ಣ ಮಕ್ಕಾ ನಗರವು ಇಸ್ಲಾಮನ್ನು ಹೊಡೆದೋಡಿಸಲು ಪರಿಶ್ರಮಿಸುತ್ತಿದ್ದ ಕಾಲದಲ್ಲಿ ಅವರು ಸನ್ಮಾರ್ಗವನ್ನು ಸ್ವೀಕರಿಸಿದರು. ಹಾಗಾಗಿ ಇತರರಂತೆಯೇ ಅವರಿಗೂ ತೀವ್ರ ಯಾತನೆ, ಸಂಕಷ್ಟಗಳನ್ನು ಅನುಭವಿಸಬೇಕಾಗಿ ಬಂತು. ಅವರ ಸ್ವ ಕುಟುಂಬ ಮತ್ತು ಸಮುದಾಯವು ಅವರ ಶತ್ರುವಾಯಿತು.

ಶತ್ರುಗಳ ಉಪಟಳವು ಅಸಹನೀಯವಾದಾಗ ಅಬಿಸೀನಿಯಕ್ಕೆ ವಲಸೆ ಹೋಗಬೇಕಾಗಿ ಬಂತು. ಅಲ್ಲಿಗೆ ಹೊರಟ ಎರಡನೆಯ ತಂಡದಲ್ಲಿ ಸೌದಾ(ರ) ಮತ್ತು ಅವರ ಪತಿ ಸಕ್ರಾನ್ ಬಿನ್ ಅಮ್ರ್(ರ) ಕೂಡ ಇದ್ದರು.

ಕುರೈಶರು ಸಾಮೂಹಿಕವಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರುವರು ಎಂಬ ವದಂತಿಯು ಅಬಿಸೀನಿಯಾದಲ್ಲಿ ಹಬ್ಬಿದಾಗ, ಅಲ್ಲಿದ್ದ ಅನೇಕ ಮುಸ್ಲಿಮರು ಮಕ್ಕಾಗೆ ಮರಳಿದರು. ಹಾಗೆ ಮರಳಿದವರಲ್ಲಿ ಸೌದಾ(ರ)ರ ಪತಿ ಸಕ್ರಾನ್ ಇದ್ದರು. ಕುರೈಶರು ಇಸ್ಲಾಮ್ ಸ್ವೀಕರಿಸಿರುವರು ಎಂಬ ಸುದ್ದಿಯು ಕಟ್ಟುಕಥೆ ಎಂದು ಅವರು ಮಕ್ಕಾಗೆ ಮರಳಿದ ಬಳಿಕವಷ್ಟೇ ಮನವರಿಕೆಯಾಯಿತು. ಹೆಚ್ಚಿನವರು ಮರಳಿ ಅಬಿಸೀನಿಯಕ್ಕೆ ಹೋದರು. ಸೌದಾರ ಪತಿ ಹಾಗೂ ಇನ್ನೂ ಕೆಲವರು ಉಳಿದುಕೊಂಡರು. ಕೆಲವೇ ದಿನಗಳಲ್ಲಿ ಸೌದ(ರ)ರ ಪತಿಯು ರೋಗಪೀಡಿತರಾಗಿ ಮರಣ ಹೊಂದಿದರು. ಹೀಗೆ ಸೌದ(ರ) ವಿಧವೆಯಾದರು.

ಕುಟುಂಬವು ವೈರಿಗಳ ಪಕ್ಷದಲ್ಲಿದ್ದ ಕಾರಣ ಸೌದಾ(ರ) ಏಕಾಂಗಿಯಾಗಿಬಿಟ್ಟರು. ಅವರ ಸಂರಕ್ಷಣೆಗೆ ಯಾರೂ ಇರಲಿಲ್ಲ. ಪರಿಸ್ಥಿತಿ ಹೀಗಿರುವಾಗ ಕುಟುಂಬದ ಸದಸ್ಯರು ಅವರೊಂದಿಗೆ ಇಸ್ಲಾಮನ್ನು ತೊರೆದು ಬರಲು ಒತ್ತಾಯಿಸಲಾರಂಬಿಸಿದರು.

ಅವರ ನಿಸ್ಸಹಾಯಕ ಅವಸ್ಥೆಯನ್ನು ನೋಡಿದ ಸಅಲಬ್‌ರ ಮಗಳು ಖೌಲ(ರ) ಪ್ರವಾದಿಯವರ(ಸ) ಬಳಿ ಬಂದು, ಸೌದಾ(ರ)ರನ್ನು ವಿವಾಹವಾಗಬೇಕೆಂದು

ವಿನಂತಿಸಿದರು. ವೃದ್ಧೆಯಾದ ಸೌದಾ(ರ)ರ ಅಸಹಾಯಕ ಸ್ಥಿತಿಯನ್ನು ಅರಿತು, ಅವರೊಂದಿಗೆ ಅನುಕಂಪ ತೋರಿ ಪ್ರವಾದಿಯವರು ಅವರನ್ನು ಜೀವನ ಸಂಗಾತಿಯಾಗಿ ಸ್ವೀಕರಿಸಲು ಸಿದ್ಧರಾದರು. ಹೀಗೆ 400 ದಿರ್ಹಮ್ ಮಹರ್ ನೀಡಿ ಪ್ರವಾದಿಯವರು(ಸ) ಅವರನ್ನು ವಿವಾಹವಾದರು. ಪ್ರವಾದಿತ್ವದ ಹತ್ತನೆಯ ವರ್ಷ ರಮಝಾನ್ ತಿಂಗಳಲ್ಲಿ ಇದು ನಡೆಯಿತು. ಅಂದು ಸೌದಾ(ರ)ರವರ ಪ್ರಾಯ ಅರವತ್ತಾರು ವರ್ಷಗಳಾಗಿದ್ದವು. ಪ್ರವಾದಿಯವರ ಪ್ರಾಯ ಐವತ್ತು.

ಬಳಿಕ ಮದೀನಕ್ಕೆ ವಲಸೆ ಹೋದ ಸೌದಾ(ರ) ಪ್ರವಾದಿಯವರ(ಸ) ನಿಧನದ ಬಳಿಕ ಹದಿಮೂರು ವರ್ಷಗಳ ನಂತರ ನಿಧನರಾದರು.

ತನಗಿಂತ ಹದಿನಾರು ವರ್ಷ ಹಿರಿಯರಾದ ಸೌದಾ(ರ)ರನ್ನು ಪ್ರವಾದಿಯವರು(ಸ) ಯಾಕಾಗಿ ವಿವಾಹ ಮಾಡಿಕೊಂಡಿದ್ದರು ಎಂಬುದು ವಿವರಣೆಗಳು ಅಗತ್ಯವಿಲ್ಲದ ರೀತಿಯಲ್ಲಿ ಸ್ಪಷ್ಟವಿದೆ. ಸತ್ಯಧರ್ಮದ ಮಾರ್ಗದಲ್ಲಿ ಬಹಳಷ್ಟು ಸಂಕಷ್ಟಗಳನ್ನು ಸಹಿಸ ಬೇಕಾಗಿ ಬಂದ ಆ ವೃದ್ಧ ಮಹಿಳೆಗೆ ನೀಡಬಹುದಾದ ಅತಿ ದೊಡ್ಡ ಉಡುಗೊರೆ ಯಾಗಿತ್ತದು.

ಪ್ರವಾದಿಪತ್ನಿಯ ಪದವಿಯನ್ನು ಅಲಂಕರಿಸಿದ ಕಾರಣ ಸತ್ಯವಿಶ್ವಾಸಿಗಳ ಮಾತೆ ಎಂಬ ಮಹತ್ತರವಾದ ಸ್ಥಾನ ಮತ್ತು ಲೋಕಾಂತ್ಯದ ವರೆಗೆ ಅತಿ ಹೆಚ್ಚು ಗೌರವಿಸಲ್ಪಡುವಂತಹ ಮಹತ್ವಪೂರ್ಣ ಪದವಿಯೂ ಸೌದಾ(ರ)ರಿಗೆ ಲಭಿಸಿತು.

❖ ❖ ❖ ❖

ಅಧ್ಯಾಯ 4

ಒಬ್ಬಳೇ ಕನ್ಯೆ

ಪ್ರವಾದಿ ಮುಹಮ್ಮದ್(ಸ)ರು ವಿವಾಹವಾದವರ ಪೈಕಿ ಆಯಿಶಾ(ರ) ಒಬ್ಬರೇ ಕನ್ಯೆಯಾಗಿದ್ದರು.. ಖದೀಜಾ(ರ)ರ ನಿಧನಾನಂತರ ವೃದ್ಧೆಯಾದ ಸೌದಾ(ರ)ರನ್ನು ವಿವಾಹವಾಗಿದ್ದರು. ಆ ಬಳಿಕ ಆಯಿಶಾ(ರ)ರನ್ನು ಜೀವನ ಸಂಗಾತಿಯಾಗಿ ಸ್ವೀಕರಿಸಿದರು.

ಇವರು ಪ್ರವಾದಿ ಮುಹಮ್ಮದ್(ಸ)ರ ಆಪ್ತಮಿತ್ರರಾಗಿದ್ದ ಅಬೂಬಕ್ಕರ್ ಸಿದ್ದೀಕ್(ರ)ರ ಪ್ರಿಯ ಪುತ್ರಿಯಾದರು. ಆಯಿಶಾ(ರ)ರವರು ಸಣ್ಣ ವಯಸ್ಸಿನಲ್ಲಿಯೇ ಅಪಾರ ಬುದ್ಧಿವಂತಿಕೆ, ಪ್ರತಿಭೆ, ಸ್ವಭಾವ ವಿಶೇಷತೆ, ವ್ಯವಹಾರ ಚತುರತೆಯನ್ನು ಹೊಂದಿದ್ದ ಬಹಳ ಅಪರೂಪದ ವ್ಯಕ್ತಿತ್ವವಾಗಿದ್ದರು. ಬಾಲ್ಯದಿಂದಲೇ ಅವರ ಬಗ್ಗೆ ಚೆನ್ನಾಗಿ ಅರಿತಿದ್ದ ಮುಹಮ್ಮದ್(ಸ)ರಿಗೆ ಅವರ ಎಲ್ಲಾ ಸಾಮರ್ಥ್ಯ ಮತ್ತು ವಿಶೇಷತೆ ಗಳನ್ನು ಒಳ್ಳೆಯ ರೀತಿಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಾಗಿತ್ತು. ಆದುದರಿಂದಲೇ ಭವಿಷ್ಯದಲ್ಲಿ ಇಸ್ಲಾಮ್ ಮತ್ತು ಮುಸ್ಲಿಮ್ ಸಮಾಜಕ್ಕೆ ಮಾತ್ರವಲ್ಲ, ಸಂಪೂರ್ಣ ಮಾನವ ಕುಲಕ್ಕೆ, ಆಯಿಶಾ(ರ)ರ ಸಾನಿಧ್ಯವು ಉಪಕಾರಪ್ರದವಾಗಬಹುದು ಎಂದು ಪ್ರವಾದಿಯವರು(ಸ) ಅರಿತುಕೊಂಡರು. ಅವರನ್ನು ತನ್ನ ಜೀವನ ಸಂಗಾತಿಯನ್ನಾಗಿ ಮಾಡಿಕೊಳ್ಳಲು ತೀರ್ಮಾನಿಸಿ, ತನ್ನ ಮನದಿಂಗಿತವನ್ನು ಅಬೂಬಕ್ಕರ್ ಬಳಿ ಹೇಳಿದರು. ಅವರನ್ನದು ಅತ್ಯಧಿಕ ಸಂತುಷ್ಟಗೊಳಿಸಿತು.

ಹೀಗೆ ಅಬೂಬಕರ್(ರ)ರವರು ಆಯಿಶಾ(ರ)ರನ್ನು ಪ್ರವಾದಿ ಮುಹಮ್ಮದ್(ಸ)ರಿಗೆ ವಿವಾಹ ಮಾಡಿಸಿಕೊಡುತ್ತಾರೆ. ಅದು ಅವರ ಆರು ಅಥವಾ ಏಳನೇ ವಯಸ್ಸಿನಲ್ಲಾ ಗಿತ್ತು. ಕೆಲವು ಆಧುನಿಕ ಇಸ್ಲಾಮೀ ಪಂಡಿತರು ಹದಿನಾಲ್ಕನೇ ವಯಸ್ಸಿನಲ್ಲಿ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಪ್ರಾಚೀನ ಕಾಲದ ವಿದ್ವಾಂಸರಾದ ಅಲ್ಲಾಮಾ ಶಿಬ್ಲಿ ನುಅ್‌ಮಾನಿ, ಸೈಯದ್ ಸುಲೈಮಾನ್ ನದ್ವಿ ಮುಂತಾದ ಪ್ರಮುಖ ಪ್ರವಾದಿ ಇತಿಹಾಸಕಾರರು ಇದನ್ನು ಅಂಗೀಕರಿಸುವುದಿಲ್ಲ. ಪ್ರವಾದಿ ವಚನಗಳು ಕೂಡ ಇದಕ್ಕೆ ವಿರುದ್ಧವಾಗಿವೆ.

ಪ್ರವಾದಿತ್ವದ ಹತ್ತನೇ ವರ್ಷದಲ್ಲಿ ಆಯಿಶಾ(ರ)ರನ್ನು ಮುಹಮ್ಮದ್(ಸ)ರು ವಿವಾಹವಾದರು. ವಿವಾಹ ಧನ 500 ದಿರ್ಹಮ್ ನೀಡಲಾಗಿತ್ತು.

ಮೂರು ವರ್ಷ ಕಳೆದ ಬಳಿಕ ಪ್ರವಾದಿಯವರು(ಸ) ಆಯಿಶಾ(ರ)ರೊಂದಿಗೆ ದಾಂಪತ್ಯ ಜೀವನವನ್ನು ಆರಂಭಿಸಿದರು. ವಲಸೆಯ ಬಳಿಕ ಅದು ನಡೆಯಿತು.

ಈ ವಿವಾಹದಿಂದಾಗಿ ಅಬೂಬಕರ್ ಸಿದ್ದೀಕ್(ರ)ರೊಂದಿಗಿನ ಪ್ರವಾದಿ ಮುಹಮ್ಮದ್(ಸ)ರ ಆತ್ಮೀಯ ಸಂಬಂಧಕ್ಕೆ ಮತ್ತಷ್ಟು ಬಲ ಲಭಿಸಿತು. ಅದು ಸುದೃಢ ಕುಟುಂಬ ಸಂಬಂಧವಾಗಿ ಮಾರ್ಪಟ್ಟಿತು.

ಆಯಿಶಾ(ರ) ಹಿಜರಿ ಮೂರನೇ ವರ್ಷದಲ್ಲಿ ನಡೆದ ಉಹುದ್ ಯುದ್ಧದಲ್ಲಿ, ಯೋಧರಿಗೆ ನೀರನ್ನು ಸರಬರಾಜು ಮಾಡುವ ಘನ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಸಣ್ಣ ವಯಸ್ಸಿನಲ್ಲಿಯೇ ನೀರು ತುಂಬಿದ ಚರ್ಮದ ಚೀಲವನ್ನು ಹೊತ್ತು ಯುದ್ಧ ರಂಗದಲ್ಲಿ ಅತ್ತಿತ್ತ ಓಡಾಡುವ ಅವರ ಚತುರತೆ ಬಹಳ ಪ್ರಶಂಸಾರ್ಹವಾಯಿತು.

ಆಯಿಶಾ(ರ)ರ ಪಾಂಡಿತ್ಯ

ಆಯಿಶಾ(ರ) ಇಸ್ಲಾಮಿನ ಪಾಂಡಿತ್ಯವನ್ನು ಹೊಂದಿದ್ದರು. ಪಾಂಡಿತ್ಯದಲ್ಲಿ ಅವರಿಗೆ ಸರಿಸಾಟಿಯಾದ ಸಮಕಾಲೀನರು ತೀರಾ ವಿರಳ. ಅಬೂಬಕರ್ ಸಿದ್ದೀಕ್, ಉಮರ್ ಫಾರೂಕ್, ಉಸ್ಮಾನ್ ಬಿನ್ ಅಫ್ಫಾನ್ ಮುಂತಾದವರು ಆಯಿಶಾ(ರ)ರೊಂದಿಗೆ ಫತ್ವಾ ಕೇಳಲು ಬರುತ್ತಿದ್ದರು. ಉನ್ನತ ಸಹಾಬಿಗಳು ವಾರೀಸು ಹಕ್ಕುಗಳಂತಹ ಕ್ಲಿಷ್ಟ ವಿಷಯಗಳ ಸಂದೇಹ ನಿವಾರಣೆಗಾಗಿ ಅವರನ್ನು ಸಮೀಪಿಸುತ್ತಿದ್ದರು. ಹದೀಸ್ ಮತ್ತು ಕುರ್‌ಆನ್‌ನ ಬಗೆಗಿನ ಅವರ ಪಾಂಡಿತ್ಯವು ಅನುಪಮವಾಗಿತ್ತು. 2,210 ಪ್ರವಾದಿ ವಚನಗಳು ಆಯಿಶಾ(ರ)ರಿಂದ ವರದಿಯಾಗಿವೆ. ಇದು ಅವರ ಅಗಾಧ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

ಇಸ್ಲಾಮಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವಾಗ, ಕುರ್‌ಆನ್ ಮತ್ತು ಪ್ರವಾದಿಚರ್ಯೆಗಳ ಆಧಾರದಲ್ಲಿ, ಬುದ್ಧಿ ಮತ್ತು ಯುಕ್ತಿಗೆ ಅನುಗುಣವಾಗಿ ಸಮಸ್ಯೆಗಳನ್ನು ಬಗೆಹರಿಸುವುದು ಆಯಿಶಾ(ರ)ರ ವೈಶಿಷ್ಟ್ಯವಾಗಿತ್ತು.

ದಾಂಪತ್ಯ ಮತ್ತು ಕುಟುಂಬ ಜೀವನಕ್ಕೆ ಸಂಬಂಧಿಸಿದಂತೆ ಸರಿಯಾದ ಮಾರ್ಗದರ್ಶನವನ್ನು ನೀಡುತ್ತಿದ್ದರು. ಪ್ರವಾದಿಯವರೊಂದಿಗೆ ದೀರ್ಘಕಾಲ ಅವರು ದಾಂಪತ್ಯ ಜೀವನವನ್ನು ನಡೆಸದೆ ಹೋಗಿದ್ದರೆ ಕುಟುಂಬ ಜೀವನಕ್ಕೆ ಸಂಬಂಧಪಟ್ಟ ಹಲವು ನಿಯಮಗಳು, ಪ್ರವಾದಿಯವರ(ಸ) ಮಾದರಿಗಳು ಜಗತ್ತಿಗೆ ಲಭಿಸುತ್ತಿರಲಿಲ್ಲ. ಪ್ರವಾದಿಯವರು(ಸ) ಯಾಕಾಗಿ ಆಯಿಶಾ(ರ)ರನ್ನು ವಿವಾಹವಾದರು ಎಂಬುದನ್ನು ತಿಳಿಸುವುದಕ್ಕೆ ಅವರ ಮೂಲಕ ಲಭ್ಯವಾದ ಇಸ್ಲಾಮೀ ಜ್ಞಾನದ ಭಂಡಾರವೇ ಪರ್ಯಾಪ್ತವೆನಿಸುತ್ತದೆ.

ಅರಬಿ ಕವಿತೆಗಳನ್ನು ಧಾರಾಳವಾಗಿ ಕಂಠಪಾಠ ಮಾಡಿಕೊಂಡಿದ್ದ ಅವರು,

ವಂಶ ಚರಿತ್ರೆಯಲ್ಲಿಯೂ ಅಪಾರ ಪಾಂಡಿತ್ಯವನ್ನು ಹೊಂದಿದ್ದರು. ಪವಿತ್ರ ಕುರ್‌ಆನಿನ ತಿರುಳನ್ನು ಗ್ರಹಿಸಿ ಅದಕ್ಕೆ ಅವರು ನೀಡಿರುವ ವ್ಯಾಖ್ಯಾನವು ಎಲ್ಲರಿಂದಲೂ ಸ್ವೀಕರಿಸಲ್ಪಟ್ಟಿದೆ. ಈ ರೀತಿ ತನ್ನ ದೌತ್ಯದ ನಿರ್ವಹಣೆಯಲ್ಲಿ ಹೆಚ್ಚು ಸಹಾಯಕವಾಗಬಹುದು ಎಂಬ ಉದ್ದೇಶದಿಂದ, ಪ್ರವಾದಿಯವರು(ಸ) ಪ್ರತಿಭಾನ್ವಿತ ರಾದ ಆಯಿಶಾ(ರ)ರನ್ನು ತಮ್ಮ ಜೀವನ ಸಂಗಾತಿಯನ್ನಾಗಿ ಮಾಡಿಕೊಂಡರು.

ಪ್ರವಾದಿಯವರು(ಸ) ತಮಗೆ ಅತ್ಯಂತ ಪ್ರೀತಿಪಾತ್ರರಾಗಿದ್ದ ಆಯಿಶಾ(ರ)ರ ಮಡಿಲಲ್ಲಿ ತಲೆಯಿರಿಸಿ ಇಹಲೋಕಕ್ಕೆ ವಿದಾಯ ಕೋರಿದರು. ರೋಗಗ್ರಸ್ತರಾದಾಗ ಪ್ರವಾದಿಯವರನ್ನು(ಸ) ಉಪಚರಿಸುವಂತಹ ಕೆಲಸವನ್ನು ಕೂಡ ಅವರೇ ಮಾಡಿದ್ದರು.

ಹಿ.ಶ. 58 ರಮಝಾನ್ 17ರಂದು ಸಾರ್ವಕಾಲಿಕ ಪಂಡಿತ ಶ್ರೇಷ್ಠರಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುವ ಆಯಿಶಾ ಬೀಬಿ ಇಹಲೋಕ ವಾಸ ಮುಗಿಸಿದರು.

ವಿವಾಹ ಪ್ರಾಯ ಮತ್ತು ವಿಮರ್ಶಕರು

ಪ್ರವಾದಿ ಮುಹಮ್ಮದ್(ಸ)ರು ಒಂಬತ್ತು ವರ್ಷ ವಯಸ್ಸಿನ ಹೆಣ್ಣನ್ನು ಬಲಾತ್ಕಾರ ಮಾಡಿದರು; ಬಾಲ್ಯ ವಿವಾಹವನ್ನು ಪ್ರೋತ್ಸಾಹಿಸಿದರು. ಈ ಮೂಲಕ ಹೆಣ್ಣು ಮಕ್ಕಳ ಶಿಕ್ಷಣ, ಸ್ವಾತಂತ್ರ್ಯ, ನೈಸರ್ಗಿಕ ಬೆಳವಣಿಗೆ, ವ್ಯಕ್ತಿತ್ವ ವಿಕಸನಕ್ಕೆ ತಡೆಯೊಡ್ಡಿದರು; ಐವತ್ತೊಂಬತ್ತು ವರ್ಷ ವಯಸ್ಸಿನ ವ್ಯಕ್ತಿ ಒಂಬತ್ತು ವರ್ಷದ ಬಾಲಕಿಗೆ ಚಿತ್ರಹಿಂಸೆಯನ್ನು ನೀಡುತ್ತಿದ್ದರು; ಮುಹಮ್ಮದ್(ಸ)ರವರು ಮಾದರಿ ಪುರುಷರಾಗಿದ್ದರೆ, ಮುಸ್ಲಿಮರೇಕೆ ಇಂದಿಗೂ ಅವರ ಈ ಮಾದರಿಯನ್ನು ಅನುಸರಿಸುವುದಿಲ್ಲ ಎಂದು ಮುಂತಾಗಿ ಪ್ರವಾದಿಯವರ(ಸ) ಮಹಾನ್ ವ್ಯಕ್ತಿತ್ವವನ್ನು ಅಪಹಾಸ್ಯ ಮಾಡುವ ಪ್ರಶ್ನೆಗಳನ್ನು, ಟೀಕೆಗಳನ್ನು ಇಸ್ಲಾಮಿನ ವಿಮರ್ಶಕರು ಮುಂದಿರಿಸುತ್ತಿದ್ದಾರೆ. ಇವುಗಳೆಲ್ಲವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

1. ಪ್ರವಾದಿಯವರ(ಸ) ಕಾಲದಲ್ಲಿ (ಅಂದರೆ ಏಳನೆಯ ಶತಮಾನದಲ್ಲಿ) ಆರು, ಏಳು ವಯಸ್ಸಿನ ಹುಡುಗಿಯರನ್ನು ವಿವಾಹವಾಗುವುದು ಸಾಮಾನ್ಯ ವಿಷಯವಾಗಿತ್ತು. ಪ್ರವಾದಿಯವರು(ಸ) ಆಯಿಶಾ(ರ)ರಿಗೆ ವಿವಾಹ ಪ್ರಸ್ತಾಪ ಮಾಡಿದ ಪ್ರಥಮ ವ್ಯಕ್ತಿ ಯಾಗಿರಲಿಲ್ಲ. ಅದಕ್ಕೂ ಮುನ್ನ ಜುಬೇರ್ ಬಿನ್ ಮುತ್‌ಇಮ್ ಎಂಬ ವ್ಯಕ್ತಿ ವಿವಾಹ ಪ್ರಸ್ತಾಪ ನಡೆಸಿದ್ದರು. ಪ್ರವಾದಿಯವರು(ಸ) ಆಯಿಶಾ(ರ)ರನ್ನು ವಿವಾಹವಾದುದರಲ್ಲಿ ಏನಾದರೂ ಅಸ್ವಭಾವಿಕವಾದ ಮತ್ತು ಅಸಾಂಗತ್ಯವಾದ ವಿಷಯವಿರುತ್ತಿದ್ದರೆ, ಪ್ರವಾದಿ ಯವರನ್ನು(ಸ) ಟೀಕಿಸುತ್ತಿದ್ದ, ನಿಂದಿಸುತ್ತಿದ್ದ, ಅಪವಾದಗಳನ್ನು ಹೊರಿಸುತ್ತಿದ್ದ ಆಗಿನ ಶತ್ರುಗಳು ಈ ವಿಷಯವನ್ನು ಎತ್ತಿಕೊಳ್ಳುತ್ತಿದ್ದರು. ಸಮಕಾಲೀನ ವ್ಯಕ್ತಿಗಳು ಅಥವಾ ಇತ್ತೀಚಿನ ವರೆಗೆ ಯಾರು ಕೂಡ ಆರು ವರ್ಷ ವಯಸ್ಸಿನಲ್ಲಿ ವಿವಾಹವಾದುದರ

ಕುರಿತು ಪ್ರವಾದಿಯವರನ್ನು(ಸ) ಟೀಕಿಸಿದ್ದಾಗಲಿ, ವಿಮರ್ಶಿಸಿದ್ದಾಗಲಿ ಇಲ್ಲ.

2. ಆಯಿಶಾ(ರ)ರು ತಮ್ಮ ಜೀವನದಲ್ಲಿ ಒಂದು ಬಾರಿಯೂ ತನ್ನನ್ನು ಸಣ್ಣ ಪ್ರಾಯದಲ್ಲಿ ವಿವಾಹ ಮಾಡಿದ್ದಕ್ಕಾಗಿ ದುಃಖಿಸಿದ್ದಾಗಲಿ, ಬೇಸರಿಸಿದ್ದಾಗಲಿ, ದೂರಿ ಕೊಂಡದ್ದಾಗಲಿ ಇತಿಹಾಸದಿಂದ ತಿಳಿದು ಬರುವುದಿಲ್ಲ. ತನ್ನನ್ನು ಸಣ್ಣ ವಯಸ್ಸಿನಲ್ಲಿ ವಿವಾಹ ಮಾಡಿಕೊಟ್ಟದ್ದಕ್ಕಾಗಿ ಹೆತ್ತವರನ್ನು ದೂಷಿಸಲಿಲ್ಲ. ಬದಲಾಗಿ ಪ್ರವಾದಿ ಯವರನ್ನು(ಸ) ಜೀವನ ಸಂಗಾತಿಯಾಗಿ ಪಡೆದುದಕ್ಕಾಗಿ ಸದಾ ಸಂತೋಷವನ್ನು ವ್ಯಕ್ತಪಡಿಸಿದ್ದರು ಮತ್ತು ಅದರ ಬಗ್ಗೆ ಅವರು ಹೆಮ್ಮೆ ಪಡುತ್ತಿದ್ದರು.

3. ಪ್ರವಾದಿಯೊಂದಿಗಿನ ವಿವಾಹವು ಆಯಿಶಾ(ರ)ರ ಅಧ್ಯಯನ, ಸೃಜನಶೀಲತೆ, ಬೌದ್ಧಿಕ ಮತ್ತು ವೈಯಕ್ತಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರಲಿಲ್ಲ; ಬದಲಾಗಿ ಎಲ್ಲದಕ್ಕೂ ಸಹಾಯಕವಾಗಿದೆ. ಅವರು ಸಣ್ಣ ಪ್ರಾಯದಲ್ಲಿಯೇ ಪ್ರವಾದಿ ಮುಹಮ್ಮದ್(ಸ)ರನ್ನು ವಿವಾಹವಾದ ಕಾರಣದಿಂದಾಗಿ ಸಾರ್ವಕಾಲಿಕವೂ ಶ್ರೇಷ್ಠವೂ ಅತ್ಯುಜ್ವಲವೂ ಆದ ಪಾಂಡಿತ್ಯವನ್ನು ಗಳಿಸಿದರು. ಮಾತ್ರವಲ್ಲ, ಉತ್ತಮ ನಾಯಕಿಯಾಗಿ ಹೊರಹೊಮ್ಮಲು ಅವರಿಗೆ ಸಾಧ್ಯವಾಯಿತು. ಪ್ರವಾದಿ ಮುಹಮ್ಮದ್(ಸ)ರಿಗೆ ಆಯಿಶಾ(ರ)ರನ್ನು ಸಣ್ಣ ಪ್ರಾಯದಲ್ಲಿಯೇ ತರಬೇತುಗೊಳಿ ಸಲು ಸಾಧ್ಯವಾದುದರ ಪರಿಣಾಮ, ಅವರನ್ನು ಮಾನವೇತಿಹಾಸದ ಬಹಳ ಉದಾತ್ತ ಮತ್ತು ಗಮನಾರ್ಹ ಮಹಿಳೆಯಾಗಿ ಮಾರ್ಪಡಿಸಲು ಸಾಧ್ಯವಾಯಿತು.

4. ಪ್ರವಾದಿಯವರು(ಸ) ಅವರನ್ನು ವಿವಾಹವಾದ ಕಾರಣದಿಂದಾಗಿ ಅವರು ಸತ್ಯವಿಶ್ವಾಸಿಗಳ ಮಾತೆ ಎಂಬ ಅತ್ಯುನ್ನತ ಪದವಿಗೇರಿದರು. ಇವೆಲ್ಲವನ್ನು ಸಾಧ್ಯವಾಗಿಸಿದ ಪ್ರವಾದಿಯವರ(ಸ) ವಿವಾಹವನ್ನು ವಿಮರ್ಶಕರು ಅಪಹಾಸ್ಯ ಮಾಡುತ್ತಾರೆ ಮತ್ತು ಟೀಕಿಸುತ್ತಾರೆ.

ದಾಂಪತ್ಯ ಜೀವನವನ್ನು ಕೇವಲ ಲೈಂಗಿಕತೆಯೊಂದಿಗೆ ಮಾತ್ರ ನೋಡುವ ಮತ್ತು ಪರಿಗಣಿಸುವ ವ್ಯಕ್ತಿಗಳಿಗೆ ಪ್ರವಾದಿ(ಸ) ಮತ್ತು ಆಯಿಶಾ(ರ)ರ ವಿವಾಹದ ಹಿಂದೆ ಇರುವ ಕಾರಣ ಮತ್ತು ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗ ಬೇಕೆಂದೇನಿಲ್ಲ. ಪ್ರವಾದಿ ಎಂಬ ನೆಲೆಯಲ್ಲಿ ಸಮಾಜದಲ್ಲಿ ಪ್ರಚಾರಪಡಿಸಬೇಕಿದ್ದ ಹೆಚ್ಚಿನ ಮೌಲ್ಯಗಳು, ಕಾನೂನುಗಳು, ಮಾರ್ಗ ನಿರ್ದೇಶನಗಳನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ ಕೆಲಸಕ್ಕೆ ಆಯಿಶಾ(ರ)ರಂತಹ ಓರ್ವ ಅಸಾಧಾರಣ ವ್ಯಕ್ತಿತ್ವವುಳ್ಳ ಜೀವನ ಸಂಗಾತಿಯ ಅನಿವಾರ್ಯತೆ ಇತ್ತು. ಸ್ತ್ರೀಯರಿಗೆ ಸಂಬಂಧಿಸಿದ ಅನೇಕ ನಿಯಮ–ನಿರ್ದೇಶನಗಳು, ವಿಧಿ–ನಿಷೇಧಗಳು, ಸ್ವಭಾವ–ಗುಣನಡತೆಗಳು ಇತ್ಯಾದಿ ಜಗತ್ತಿಗೆ ಆಯಿಶಾ(ರ)ರ ಮುಖಾಂತರ ಸಿಕ್ಕಿದೆ. ಪ್ರವಾದಿಯವರಿಂದ(ಸ)

ಅತಿ ಹೆಚ್ಚು ವಚನಗಳು ವರದಿಯಾಗಿರುವುದು ಇವರಿಂದಲೇ ಆಗಿದೆ. ಈ ವಿಷಯದಲ್ಲಿ ಪ್ರವಾದಿಪತ್ನಿಯರ ಪೈಕಿ ಇವರು ಪ್ರಥಮ ಸ್ಥಾನದಲ್ಲಿ ನಿಲ್ಲುತ್ತಾರೆ. ಆದುದರಿಂದಲೇ ಪ್ರವಾದಿಯವರು(ಸ) ಸಣ್ಣ ವಯಸ್ಸಿನಲ್ಲಿಯೇ ಆಯಿಶಾ(ರ)ರನ್ನು ತಮ್ಮ ಪತ್ನಿಯ ಪದವಿಗೆ ಸ್ವೀಕರಿಸಿಕೊಂಡರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಕಾರಣಕ್ಕಾಗಿಯೇ ಅಲ್ಲಾಹನು ಇಂತಹ ಒಂದು ಸಂಬಂಧಕ್ಕೆ ಅವಕಾಶವನ್ನು ಒದಗಿಸಿಕೊಟ್ಟನು.

5. ಪ್ರವಾದಿವರ್ಯರ(ಸ) ಮತ್ತು ಆಯಿಶಾ(ರ)ರ ಮಧ್ಯೆ ಇದ್ದ ಸಂಬಂಧವು ಎಷ್ಟು ಪ್ರೀತಿಯಿಂದ ತುಂಬಿತ್ತು ಮತ್ತು ಅವರ ಸಂಬಂಧ ಎಷ್ಟು ಗಾಢವಾಗಿತ್ತು ಎಂಬುದನ್ನು ಅದರ ಕುರಿತು ಅರಿಯುವ ಯಾರಿಗೂ ಕೂಡ ಸುಲಭವಾಗಿ ಮನದಟ್ಟಾಗುತ್ತದೆ. ಸಣ್ಣ ಪ್ರಾಯದಲ್ಲಿಯೇ ದಾಂಪತ್ಯ ಜೀವನವನ್ನು ಆರಂಭಿಸಿದ ಕಾರಣದಿಂದಾಗಿ ಅವರ ಮಧ್ಯೆ ಸಂಬಂಧವು ದುರ್ಬಲವಾದದಲ್ಲ, ಬದಲಾಗಿ ಅದು ಹೆಚ್ಚು ಸುದೃಢವಾಗಿ ಮಾರ್ಪಟ್ಟಿತ್ತು.

6. ಮಹತ್ತರವಾದ ಜವಾಬ್ದಾರಿಯ ನಿರ್ವಹಣೆಗಾಗಿ 1,400 ವರ್ಷಗಳ ಹಿಂದೆ ಪ್ರವಾದಿಯವರು(ಸ) ಮಾಡಿದ ಕೆಲಸವನ್ನು ನಮ್ಮದೇ ಆದ ಮಾನದಂಡಗಳ ಮೂಲಕ ವಿಮರ್ಶಿಸುವುದು ಸರಿಯಲ್ಲ. ಇದನ್ನು ಇಸ್ಲಾಮೀ ಶರೀಅತ್‌ನ ಕಠಿಣ ವಿಮರ್ಶಕರಾದ ಡಾ. ಎನ್.ಎಂ. ಮುಹಮ್ಮದ್ ಅಲಿ ಕೂಡ ಸಮರ್ಥಿಸುತ್ತಾರೆ. ಅವರು ಹೀಗೆ ಬರೆಯುತ್ತಾರೆ, "ಮುಹಮ್ಮದರ ಆತ್ಮೀಯ ಮಿತ್ರರೂ ಅನುಯಾಯಿಯೂ ಆಗಿದ್ದ ಅಬೂಬಕರ್ ತನ್ನ ಸ್ವಂತ ಮಗಳಾದ ಆಯಿಶಾಳನ್ನು ತನ್ನ ನಾಯಕನಿಗೆ ವಿವಾಹ ಮಾಡಿಕೊಡಲು ತೀರ್ಮಾನಿಸಿದರು. ಆದರೆ ಮಗಳಿಗೆ ಆರು ಅಥವಾ ಏಳು ವಯಸ್ಸು ಮಾತ್ರವಾಗಿದ್ದ ಕಾರಣ, ವಿವಾಹ ನಿಶ್ಚಯ ಕಾರ್ಯಕ್ರಮ ಮಾತ್ರ ನಡೆಯಿತು. ಕುಟುಂಬ ಸಂಬಂಧವನ್ನು ಸುದೃಢಗೊಳಿಸಲು, ವಿವಿಧ ಗೋತ್ರಗಳ ಮಧ್ಯೆ ಸಂಬಂಧವನ್ನು ಸ್ಥಾಪಿಸಲು, ಸೌಹಾರ್ದವನ್ನು ಉಂಟುಮಾಡಲು, ವಿವಾಹ ಸಂಬಂಧವನ್ನು ಮಾಡಿಕೊಳ್ಳುವುದು ಅರಬಿಗಳ ಮಧ್ಯೆ ಸಾಮಾನ್ಯ ವಿಷಯವಾಗಿತ್ತು. ಅಲ್ಲಾಹನ ಪ್ರವಾದಿ ಮುಹಮ್ಮದರೊಂದಿಗೆ ಕುಟುಂಬ ಸಂಬಂಧವನ್ನು ಬೆಳೆಸಿಕೊಳ್ಳಬೇಕು ಎಂಬ ಕಾರಣಕ್ಕಾಗಿ ತಮ್ಮ ಸಣ್ಣ ವಯಸ್ಸಿನ ಮಗಳನ್ನು ಮಧ್ಯವಯಸ್ಕರಾದ ಪ್ರವಾದಿ ಮುಹಮ್ಮದರಿಗೆ ವಿವಾಹ ಮಾಡಿಕೊಡಲು ಅಬೂಬಕರ್ ತೀರ್ಮಾನಿಸಿದರು. ಆಯಿಶಾರೊಂದಿಗಿನ ಪ್ರವಾದಿ ಮುಹಮ್ಮದರ ವಿವಾಹವನ್ನು ಉಲ್ಲೇಖಿಸಿ ಅವರನ್ನು 'ಶಿಶುಕಾಮಿ' ಎನ್ನುವವರು ಇದ್ದಾರೆ. ಆಯಿಶಾರಿಗೆ ಆರು ಅಥವಾ ಏಳು ವಯಸ್ಸು ಇದ್ದಾಗ ವಿವಾಹ ನಡೆದಿದ್ದರೂ ದಾಂಪತ್ಯ ಜೀವನವನ್ನು ಆರಂಭಿಸಿದ್ದು ಮುಹಮ್ಮದರು ಮತ್ತು ಅವರ ಅನುಯಾಯಿಗಳು ಮದೀನಕ್ಕೆ ವಲಸೆ ಹೋದ ಬಳಿಕವಾಗಿತ್ತು. ಆಗ ಆಯಿಷರಿಗೆ ಒಂಬತ್ತು ಅಥವಾ ಹತ್ತು ವರ್ಷಗಳಾಗಿತ್ತು. ಆರನೇ ಶತಮಾನದಲ್ಲಿ

ಅರಬಿಗಳ ಮಧ್ಯೆ ಇದೊಂದು ಅಸಾಮಾನ್ಯ ವಿವಾಹವಾಗಿರಲಿಲ್ಲ. ಅರಬಿಗಳ ಮಾನದಂಡವನ್ನು ಇಟ್ಟು ನೋಡುವುದಾದರೂ 'ಮುಹಮ್ಮದರು ಮಾಡಿದ್ದು ತಪ್ಪು' ಎಂದು ಮ್ಯಾಕ್ಸಿಮ್ ರಾಫಿನ್ಸನ್ ಹೇಳುವುದು ಪ್ರವಾದಿಯವರನ್ನು(ಸ) ಕೀಳಾಗಿ ಚಿತ್ರಿಸುವ ದುರುದ್ದೇಶದಿಂದ ಮಾತ್ರವಾಗಿದೆ."

(ಮುಹಮ್ಮದ್ ಎಂಬ ಮನುಷ್ಯ, ಮೈತ್ರಿ ಬುಕ್ಸ್, ಪುಟ ಸಂಖ್ಯೆ 109)

ಆ ರೀತಿಯ ವಿವಾಹಗಳು ಅಂದಿನ ಸಮಾಜದಲ್ಲಿ ಸರ್ವೇ ಸಾಮಾನ್ಯವಾಗಿದ್ದರೂ ಅದರ ಹೆಸರಿನಲ್ಲಿ ಪ್ರವಾದಿಯವರನ್ನು(ಸ) ವಿಮರ್ಶಿಸುವುದರಲ್ಲಿ ಅರ್ಥವಿಲ್ಲ ಎಂಬುದು ಅವರ ಅಭಿಪ್ರಾಯವಾಗಿದೆ.

7. ಪ್ರವಾದಿಯವರು(ಸ) ಮಾಡಿಕೊಂಡಂತೆ ಆರು ಅಥವಾ ಏಳು ವಯಸ್ಸಿನ ಹೆಣ್ಣನ್ನು ವಿವಾಹವಾಗಬೇಕೆಂದು ಇಸ್ಲಾಮ್ ಆದೇಶಿಸುವುದಿಲ್ಲ. ಇದು ಪುಣ್ಯಕಾರ್ಯವೆಂದೋ ಪ್ರೋತ್ಸಾಹನೀಯವೆಂದೋ ಈ ವರೆಗೂ ಯಾವ ಇಸ್ಲಾಮೀ ಪಂಡಿತರೂ ಅಭಿಪ್ರಾಯಪಟ್ಟಿಲ್ಲ. ಮುಸ್ಲಿಮರಾರೂ ಹಾಗೆ ನಂಬುವುದಿಲ್ಲ. ಪ್ರವಾದಿಯವರಂತೆ(ಸ) ತಮ್ಮ ಜೀವನ ಶೈಲಿಯನ್ನು ಮತ್ತು ಮಾದರಿಯನ್ನು ಮನುಷ್ಯರಿಗೆ ತಲುಪಿಸಬೇಕೆಂಬ ಜವಾಬ್ದಾರಿಯನ್ನು ಹೊಂದಿದವರು ಬೇರೆ ಯಾರೂ ಈ ಜಗತ್ತಿನಲ್ಲಿಲ್ಲ. ಆದುದರಿಂದ ಪ್ರವಾದಿವರ್ಯರು(ಸ) ಈ ಆದರ್ಶಕ್ಕಾಗಿ ಮಾಡಿದಂತಹ ಕೆಲಸವನ್ನು ಇತರರು ಅನುಸರಿಸಬೇಕಾದ ಅಗತ್ಯವಿಲ್ಲ. ಆ ಕಾಲದ ಅವರ ಅನುಯಾಯಿಗಳಿಂದ ಆರಂಭಿಸಿ ಇಂದಿನ ವರೆಗೆ ಮುಸ್ಲಿಮರಿಗೆ ಇದನ್ನು ಅರ್ಥೈಸಲು ಯಾವುದೇ ತೊಂದರೆಯಾಗಲಿಲ್ಲ. ಇಸ್ಲಾಮಿನ ವಿಮರ್ಶಕರಿಗೆ ಇದು ಅರ್ಥವಾಗಿಲ್ಲ. ವಿವಾಹಕ್ಕೆ ಇಸ್ಲಾಮ್ ನಿಶ್ಚಯಿಸಿರುವ ವ್ಯವಸ್ಥೆ ಏನೆಂದರೆ, ದಂಪತಿಗಳಿಗೆ ಸಂವೇದನಾಶೀಲತೆ ಇರಬೇಕೇ ಹೊರತು ವಯಸ್ಸು ಎಷ್ಟೆಂಬುದು ಮುಖ್ಯವಲ್ಲ.

8. ತನಗಿಂತ ವಯಸ್ಸಿನಲ್ಲಿ ಸಣ್ಣವರಾದ ಆಯಿಶಾ(ರ)ರನ್ನು ವಿವಾಹವಾಗಿದ್ದ ಕಾರಣಕ್ಕಾಗಿ ಪ್ರವಾದಿಯವರನ್ನು(ಸ) ಅಪಹಾಸ್ಯ ಮಾಡುವವರು, ಝಾನ್ಸಿಯ ರಾಜರಾಗಿದ್ದ ಗಂಗಾಧರನ್ ರಾವ್, ಸೋಶಿಯಲ್ ಕಾನ್ಫರೆನ್ಸ್ ಮೂವ್‌ಮೆಂಟ್ ಸ್ಥಾಪಕ ಮತ್ತು ಸಮಾಜ ಸುಧಾರಕ ಮಹಾದೇವ್ ಗೋವಿಂದ್ ರಾಮ್, ಎ.ಕೆ. ಗೋಪಾಲನ್ ಮುಂತಾದ ಅಸಂಖ್ಯಾತ ಪ್ರಮುಖ ನಾಯಕರ ಬಗ್ಗೆ ಏನು ಹೇಳುತ್ತಾರೆ ಎಂಬ ಬಗ್ಗೆ ತಿಳಿದುಕೊಳ್ಳಲು ನಾನು ಆಸಕ್ತನಾಗಿದ್ದೇನೆ.

9. ತಿರು–ಕೊಚ್ಚಿಯ ಮುಖ್ಯಮಂತ್ರಿ ಆಗಿದ್ದ ಸಿ. ಕೇಶವನ್, ಶ್ರೀರಾಮಕೃಷ್ಣ ಪರಮಹಂಸ ಮುಂತಾದ ಪ್ರಮುಖ ವ್ಯಕ್ತಿಗಳು ಆರು ಏಳು ವಯಸ್ಸಿನ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಂಡವರಾಗಿದ್ದಾರೆ. ಡಾ. ಧೋನೋ ಕೇಶವ್ ಕರ್ವೆ,

ಶ್ರೀನಿವಾಸ್ ರಾಮಾನುಜನ್ ಮುಂತಾದವರು ಒಂಬತ್ತರ ಹರೆಯದ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಂಡಿದ್ದರು.

ರಾಷ್ಟ್ರಪಿತ ಗಾಂಧೀಜಿ, ದೇಶ ಕಂಡ ಅತ್ಯಂತ ಪ್ರಮುಖ ನ್ಯಾಯಾಧೀಶರಲ್ಲಿ ಒಬ್ಬರಾದ ಜಸ್ಟಿಸ್ ವಿ.ಆರ್. ಕೃಷ್ಣ ಅಯ್ಯರ್, ಪ್ರಮುಖ ನಾಸ್ತಿಕ ಪೆರಿಯಾರ್ ರಾಮಸ್ವಾಮಿ, 'ಮನೋರಮ'ದ ಸ್ಥಾಪಕ ಅಧ್ಯಕ್ಷ ಮಾಮನ್ ಮಾಪಿಲ್ಲೈ ಈ ರೀತಿಯ ನೂರಾರು ಪ್ರಮುಖ ವ್ಯಕ್ತಿಗಳು ವಿವಾಹ ಮಾಡಿಕೊಂಡದ್ದು ಹತ್ತು, ಹನ್ನೆರಡು, ಹದಿನಾಲ್ಕು ವಯಸ್ಸಿನ ಹೆಣ್ಣು ಮಕ್ಕಳನ್ನಾಗಿತ್ತು. ಮಾಮನ್ ಮಾಪಿಲ್ಲೈಯವರ ಪತ್ನಿ ಮಗುವಿಗೆ ಜನ್ಮ ನೀಡಿದ್ದು ತಮ್ಮ ಹನ್ನೊಂದನೇ ವಯಸ್ಸಿನಲ್ಲಾಗಿತ್ತು.

ಶ್ರೀ ಕುಮಾರನ್ ತಂಬಿ ಹೀಗೆ ಬರೆಯುತ್ತಾರೆ: ಹತ್ತು ವಯಸ್ಸಿನಲ್ಲಿ ವಿವಾಹಿತರಾಗುವ ಹೆಣ್ಣು ಮಕ್ಕಳು ಹದಿಮೂರನೇ ವಯಸ್ಸಿನಲ್ಲಿ ತಾಯಂದಿರಾಗುತ್ತಾರೆ. ನನ್ನ ಅಮ್ಮ ಮತ್ತು ಅವರ ದೊಡ್ಡ ಮಗಳ ಮಧ್ಯೆ ಹನ್ನೊಂದು ವರ್ಷಗಳ ವ್ಯತ್ಯಾಸ ಮಾತ್ರವಿದೆ. ದೊಡ್ಡಮ್ಮ ಮತ್ತು ಅವರ ದೊಡ್ಡ ಮಗಳು ಚೆಲ್ಲಮ್ಮರ ಮಧ್ಯೆ ಅಷ್ಟೇ ವ್ಯತ್ಯಾಸವಿದೆ. **(ಮಾತೃಭೂಮಿ ಸಾಪ್ತಾಹಿಕ. 2019 ಸೆಪ್ಟೆಂಬರ್ 22 –28)**

ಇಂದು ಭಾರತದಲ್ಲಿ ಯಾರಾದರೂ ಹೀಗೆ ಮಾಡಿದರೆ 'ಪೋಸ್ಕೋ' ಕಾಯ್ದೆಯಡಿ ಬಂಧಿತರಾಗುತ್ತಾರೆ. ಇತ್ತೀಚಿನ ವರೆಗೂ ಭಾರತದಾದ್ಯಂತ ಐದು, ಆರು, ಏಳು ವಯಸ್ಸಿನ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಳ್ಳುವುದು ಸಾಮಾನ್ಯ ವಾಗಿತ್ತು. ಅದಕ್ಕಿಂತಲೂ ಸಣ್ಣಪ್ರಾಯದಲ್ಲಿ ವಿವಾಹ ಮಾಡಿಕೊಳ್ಳುವ ಸಂಪ್ರದಾಯ ಹಲವೆಡೆಗಳಲ್ಲಿ ಚಾಲ್ತಿಯಲ್ಲಿತ್ತು. ಆದ್ದರಿಂದಲೇ ಪ್ರವಾದಿಯವರು(ಸ) ಆಯಿಶಾ(ರ)ರನ್ನು ವಿವಾಹವಾದುದು ಒಂದು ವಿವಾದಾತ್ಮಕ ವಿಷಯವಾಗಲಿಲ್ಲ.

ಇತ್ತೀಚಿನ ವರೆಗೂ ಜಗತ್ತಿನಲ್ಲೆಲ್ಲೂ ಇದು ಆಕ್ಷೇಪಕ್ಕೆ, ವಿಮರ್ಶೆಗೆ ಗುರಿಯಾಗಲಿಲ್ಲ. ಅಮೆರಿಕಾದಂತಹ ಹಲವು ದೇಶಗಳಲ್ಲಿ 12 ವಯಸ್ಸಿನ ಹೆಣ್ಣು ಮಕ್ಕಳನ್ನು ಇಂದಿಗೂ ವಿವಾಹ ಮಾಡಿಕೊಳ್ಳಲಾಗುತ್ತದೆ. ಆದುದರಿಂದಲೇ ಆಯಿಶಾ(ರ)ರನ್ನು ವಿವಾಹ ಮಾಡಿಕೊಂಡ ಕಾರಣಕ್ಕೆ ಪ್ರವಾದಿಯವರನ್ನು(ಸ) ಟೀಕಿಸುವವರು, ಅಪಹಾಸ್ಯ ಮಾಡುವವರು ತಮ್ಮ ಮನಸ್ಸಿನ ವೈಕಲ್ಯ ಮತ್ತು ಮಾಲಿನ್ಯವನ್ನು ಹೊರಗೆಡಹುತ್ತಿದ್ದಾರೆ.

❖ ❖ ❖ ❖

ಅಧ್ಯಾಯ 5

ಎರಡು ತೀರಗಳಿಂದ ಇಬ್ಬರು

ಪ್ರವಾದಿಯವರು ನಾಲ್ಕನೆಯದಾಗಿ ಹರ್ಝತ್ ಹಫ್ಸಾ(ರ)ರನ್ನು ವಿವಾಹವಾಗಿದ್ದರು. ಅದು ಮದೀನಾ ತಲುಪಿದ ಬಳಿಕ ನಡೆದಂತಹ ಪ್ರಥಮ ವಿವಾಹ.

ಮುಹಮ್ಮದರಿಗೆ ಪ್ರವಾದಿತ್ವ ದೊರೆಯುವುದಕ್ಕಿಂತ ಐದು ವರ್ಷಗಳ ಮೊದಲು ಹಫ್ಸಾ(ರ) ಜನಿಸಿದರು. ಉಮರ್(ರ) ಇಸ್ಲಾಮ್ ಸ್ವೀಕರಿಸಿದ ಬಳಿಕ ಹಫ್ಸಾ(ರ) ಮತ್ತು ಕುಟುಂಬದ ಇತರ ಸದಸ್ಯರು ಮುಸ್ಲಿಮರಾದರು. ಇದು ಪ್ರವಾದಿತ್ವದ ಆರನೇ ವರ್ಷದಲ್ಲಿ ನಡೆಯಿತು.

ಹಫ್ಸಾ(ರ)ರ ಪ್ರಥಮ ವಿವಾಹವು ಕುನೈಸ್ ಬಿನ್ ಹುದಾಫ(ರ)ರೊಂದಿಗೆ ನಡೆಯಿತು. ಮದೀನಕ್ಕೆ ವಲಸೆ ಹೋದ ಮುಸ್ಲಿಮರೊಡನೆ ಹಫ್ಸಾ(ರ) ಮತ್ತು ಅವರ ಪತಿಯು ಮದೀನಕ್ಕೆ ವಲಸೆ ಹೋದರು.

ಹಿಜರಿ ಎರಡನೇ ವರ್ಷದಲ್ಲಿ ನಡೆದ ಬದ್ರ್ ಯುದ್ಧದಲ್ಲಿ ಹಫ್ಸಾ(ರ)ರ ಪತಿ ಕುನೈಸ್ ಕೂಡ ಭಾಗವಹಿಸಿದ್ದರು. ಯುದ್ಧದಲ್ಲಿ ತೀವ್ರ ಗಾಯಗೊಂಡ ಕುನೈಸ್ ಮದೀನಾದಲ್ಲಿ ನಿಧನರಾದರು. ಕುನೈಸ್‌ರಿಗೆ ಹಫ್ಸಾರಲ್ಲಿ ಮಕ್ಕಳಾಗಿರಲಿಲ್ಲ.

ಹಫ್ಸಾ(ರ)ರ ಪತಿ ನಿಧನರಾದದ್ದು ಉಮರ್(ರ)ರಿಗೆ ಭಾರೀ ಆಘಾತವಾಯಿತು. ಮಗಳನ್ನು ಉಸ್ಮಾನ್ ಬಿನ್ ಅಫ್ಫಾನ್(ರ)ರಿಗೆ ವಿವಾಹ ಮಾಡಿ ಕೊಡಬೇಕೆಂದು ಬಯಸಿದರು. ಉಸ್ಮಾನ್ ಬಿನ್ ಅಫ್ಫಾನ್(ರ)ರ ಪತ್ನಿಯೂ ಪ್ರವಾದಿಯವರ(ಸ) ಪುತ್ರಿಯೂ ಆಗಿದ್ದ ರುಕಿಯ್ಯಾ(ರ)ರೂ ಅದೇ ಸಂದರ್ಭದಲ್ಲಿ ನಿಧನರಾಗಿದ್ದರು. ಆದರೆ ಉಸ್ಮಾನ್ ನಾನು ಈಗ ವಿವಾಹ ಬಯಸಿಲ್ಲವೆಂದು ಹೇಳಿ ನಿರಾಕರಿಸಿದರು. ಆದುದರಿಂದ ಉಮರ್(ರ)ರವರು ಅಬೂಬಕ್ಕರ್ ಸಿದ್ದೀಕ್(ರ)ರನ್ನು ಸಮೀಪಿಸಿ ವಿಷಯ ತಿಳಿಸಿದರು. ಆದರೆ ಅಬೂಬಕರ್(ರ) ಅದಕ್ಕೆ ಯಾವ ಉತ್ತರವನ್ನು ನೀಡಲಿಲ್ಲ. ಉಮರ್(ರ)ರಿಗೆ ಬಹಳ ದುಃಖವಾಯಿತು. ಅವರು ಪ್ರವಾದಿಯವರ(ಸ) ಬಳಿ ಹೋಗಿ ನಡೆದ ವಿಷಯವನ್ನು ತಿಳಿಸಿದರು. ಪ್ರವಾದಿಯವರು(ಸ) ಅವರನ್ನು ಸಾಂತ್ವನಗೊಳಿಸಿದರು. "ಹಫ್ಸಾ(ರ)ರಿಗೆ ಉಸ್ಮಾನ್‌ರಿಗಿಂತ ಶ್ರೇಷ್ಠರಾದ ಪತಿಯು,

ಉಸ್ಮಾನ್(ರ)ರಿಗೆ ಹಫ್ಸಾರಿಗಿಂತ ಶ್ರೇಷ್ಠರಾದ ಪತ್ನಿಯು ದೊರೆಯಬಹುದು" ಎಂದರು.

ಪ್ರವಾದಿ ಹಫ್ಸಾ(ರ)ರನ್ನು ವಿವಾಹವಾದರು. ತನ್ನ ಮಗಳು ಮತ್ತು ರುಕಿಯ್ಯಾ(ರ)ರ ಕಿರಿಯ ಸಹೋದರಿ ಉಮ್ಮು ಕುಲ್ಸುಮ್(ರ)ರನ್ನು ಉಸ್ಮಾನ್(ರ)ರಿಗೆ ವಿವಾಹ ಮಾಡಿಕೊಟ್ಟರು. ಹೀಗೆ ಅವರು ತಾವು ಕೊಟ್ಟ ಮಾತನ್ನು ಪಾಲಿಸಿದರು.

ಅಬೂಬಕ್ಕರ್ ಸಿದ್ದೀಕ್(ರ) ಮತ್ತು ಉಮರ್(ರ)ರ ಸ್ನೇಹ ಸಂಬಂಧ ಪ್ರಖ್ಯಾತ ವಾಗಿದೆ. ಅದೇ ಸ್ನೇಹ ಸಂಬಂಧವು ಆಯಿಶಾ(ರ) ಮತ್ತು ಹಫ್ಸಾ(ರ)ರಲ್ಲಿದ್ದಿತು.

ಉಮರ್ ಫಾರೂಕ್(ರ)ರೊಂದಿಗಿದ್ದ ಸಂಬಂಧವನ್ನು ಇನ್ನಷ್ಟು ದೃಢಗೊಳಿಸ ಲಿಕ್ಕಾಗಿ, ಅದನ್ನು ಕುಟುಂಬ ಸಂಬಂಧವಾಗಿ ಮಾರ್ಪಡಿಸುವುದಕ್ಕಾಗಿ ಆ ಮೂಲಕ ಅವರ ಪ್ರಯಾಸವನ್ನು ಲಘೂಕರಿಸಲಿಕ್ಕಾಗಿ ಪ್ರವಾದಿಯವರು ಹಫ್ಸಾ(ರ)ರನ್ನು ವಿವಾಹವಾದರು. ನೋಡುಗರಲ್ಲಿ ಕುತೂಹಲ ಮೂಡಿಸುವ ಸೌಂದರ್ಯ, ಆಕರ್ಷಣೆ ಇಲ್ಲದಿದ್ದ ಹಫ್ಸಾ(ರ)ರನ್ನು ವಿವಾಹವಾದುದು ಶಾರೀರಿಕ ಬೇಡಿಕೆಗಳನ್ನು ಪೂರ್ತಿಗೊಳಿಸಲಿಕ್ಕಾಗಿಯೋ ಅಥವಾ ಭೋಗಾಸಕ್ತಿಯಿಂದಲೋ ಆಗಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಹಫ್ಸಾ(ರ) ಬಹಳ ಬುದ್ಧಿವಂತೆ ಮತ್ತು ಪಾಂಡಿತ್ಯವನ್ನು ಹೊಂದಿದವರಾಗಿದ್ದರು. ಓದು ಬರಹ ಬಲ್ಲವರಾಗಿದ್ದರು. ಅದನ್ನು ಇತರರಿಗೆ ಕಲಿಸಿಕೊಡುತ್ತಿದ್ದರು. ಆದುದರಿಂದ ಅವರಿಗೆ ಧಾರಾಳ ಶಿಷ್ಯರಿದ್ದರು. ಆರಾಧನೆಗಳ ಬಗ್ಗೆ ಹಫ್ಸಾ(ರ)ರಲ್ಲಿ ಅಸಾಧಾರಣ ನಿಷ್ಠೆ ಇತ್ತು. ಹಫ್ಸಾ(ರ)ರಿಂದ 60 ಹದೀಸ್‌ಗಳು ವರದಿಯಾಗಿವೆ. 63ನೇ ವಯಸ್ಸಿನಲ್ಲಿ ಅವರು ಇಹಲೋಕಕ್ಕೆ ವಿದಾಯ ಕೋರಿದರು.

ಶತ್ರುವಿನ ಪುತ್ರಿ

ಪ್ರವಾದಿಯವರ(ಸ) ನಾಲ್ಕನೆಯ ವಿವಾಹ ಆತ್ಮೀಯ ಮಿತ್ರನ ಮಗಳೊಂದಿಗೆ ಆಗಿದ್ದರೆ, ಐದನೆಯ ವಿವಾಹವು ಕಡು ವೈರಿಯ ಪುತ್ರಿಯೊಂದಿಗಾಯಿತು. ಅಬೂ ಸುಫಿಯಾನ್‌ರ ಮಗಳು ಉಮ್ಮು ಹಬೀಬಾ(ರ). ಅವರ ನಿಜನಾಮಧೇಯ ರಮ್ಲ ಎಂದಾಗಿತ್ತು. ಅವರ ತಾಯಿ ಉಸ್ಮಾನ್ ಬಿನ್ ಅಫ್ಫಾನ್(ರ)ರ ಪಿತೃ ಸಹೋದರಿ ಹಾಗೂ ಅಬುಲ್ ಆಸ್‌ರ ಪುತ್ರಿ ಹಿಂದ್. ಮದೀನಕ್ಕೆ ವಲಸೆ ಹೋಗುವುದಕ್ಕಿಂತ 25 ವರ್ಷ ಮೊದಲು ಉಮ್ಮು ಹಬೀಬರ ಜನನವಾಯಿತು. ಅಕ್ಷರ ಅಭ್ಯಾಸ ಮಾಡಲು ಸೌಭಾಗ್ಯ ಸಿಕ್ಕಿದ ವಿರಳ ಸ್ತ್ರೀಯರ ಪೈಕಿ ಅವರು ಒಬ್ಬರಾಗಿದ್ದರು.

ಅವರ ಪ್ರಥಮ ಪತಿ ಸಅದ್ ಗೋತ್ರದ ಜಹ್ಶ್‌ರ ಮಗ ಉಬೈದುಲ್ಲ. ಉಮ್ಮು ಹಬೀಬಾರ(ರ) ತಂದೆ ಅಬೂ ಸುಫಿಯಾನ್ ಪ್ರವಾದಿಯವರನ್ನು ವಿರೋಧಿಸುತ್ತಿದ್ದರು, ಟೀಕಿಸುತ್ತಿದ್ದರು, ಕ್ರೂರವಾಗಿ ಅಪಹಾಸ್ಯ ಮಾಡುತ್ತಿದ್ದರು, ಸಾಧ್ಯಂತ ಪೀಡಿಸುತ್ತಿದ್ದರು.

ಉಹುದ್ ಮತ್ತು ಕಂದಕ್ ಯುದ್ಧದಲ್ಲಿ ಶತ್ರುಗಳ ಸೈನ್ಯದ ದಂಡನಾಯಕರಾಗಿದ್ದರು. ಉಹುದ್ ಯುದ್ಧದಲ್ಲಿ ಪ್ರವಾದಿಯವರು ವಧಿಸಲ್ಪಟ್ಟರು ಎಂಬ ವದಂತಿ ಹರಡಿದಾಗ ಅಬೂ ಸುಫಿಯಾನ್ ಅತಿಯಾಗಿ ಸಂತೋಷಪಟ್ಟಿದ್ದರು. ಅವರ ಪತ್ನಿ ಹಿಂದ್, ವಹ್ಶಿಯೊಂದಿಗೆ, "ಉಹುದ್‌ನಲ್ಲಿ ಪ್ರವಾದಿಯವರ ಚಿಕ್ಕಪ್ಪ ಹಂಝಾ(ರ)ರನ್ನು ವಧಿಸಿದರೆ ನನ್ನೆಲ್ಲಾ ಆಭರಣಗಳನ್ನು ನೀಡುತ್ತೇನೆ" ಎಂದು ವಾಗ್ದಾನ ಮಾಡಿದರು. ಆ ಪ್ರಕಾರ ವಹ್ಶಿಯು ಹಂಝಾರನ್ನು ಕ್ರೂರವಾಗಿ ಕೊಂದುಬಿಟ್ಟರು. ಹೊಟ್ಟೆಯನ್ನು ಸೀಳಿ ಕರುಳನ್ನು ಹೊರತೆಗೆದು ಹಿಂದ್‌ಗೆ ಸಮರ್ಪಿಸಿದ್ದರು. ಹಿಂದ್ ಆ ಕರುಳನ್ನು ಜಗಿದು ಜಗಿದು ಪ್ರತೀಕಾರದ ದಾಹವನ್ನು ತೀರಿಸಿದ್ದರು.

ತಂದೆ ತಾಯಿ ಇಬ್ಬರು ಇಸ್ಲಾಮಿನ ಕಠಿಣ ಶತ್ರುಗಳಾಗಿದ್ದರೂ ಉಮ್ಮು ಹಬೀಬಾ(ರ) ಸತ್ಯವನ್ನು ಅರಿತು ಸನ್ಮಾರ್ಗವನ್ನು ಸ್ವೀಕರಿಸಿದರು. ಇದು ಅಬೂ ಸುಫಿಯಾನ್ ಮತ್ತು ಕುಟುಂಬದಲ್ಲಿ ಯಾವ ರೀತಿಯ ಪ್ರತಿಕ್ರಿಯೆಗೆ ಕಾರಣ ವಾಗಿರಬಹುದು ಎಂಬುದನ್ನು ಊಹಿಸಬಹುದಲ್ಲವೇ. ಆಮಿಷಗಳನ್ನು ಒಡ್ಡಿ, ನಿರ್ದಾಕ್ಷಿಣ್ಯವಾಗಿ ಪೀಡಿಸಿ ಅವರನ್ನು ಸತ್ಯ ಧರ್ಮದಿಂದ ಹಿಂದಿರುಗಿಸಲು ಗರಿಷ್ಠ ಪ್ರಯತ್ನವನ್ನು ಪಟ್ಟರು. ಆದರೆ ಅವರು ಪತಿಯೊಂದಿಗೆ ಇಸ್ಲಾಮ್ ಧರ್ಮದಲ್ಲಿ ದೃಢವಾಗಿ ನಿಂತರು. ಮಕ್ಕಾದಲ್ಲಿ ಜೀವನವು ಅಸಹನೀಯವಾದಾಗ ಅಬಿಸೀನಿಯಕ್ಕೆ ವಲಸೆ ಹೋದ ಎರಡನೆಯ ತಂಡದಲ್ಲಿ ಉಮ್ಮು ಹಬೀಬಾ(ರ) ಮತ್ತು ಅವರ ಪತಿ ಇದ್ದರು. ಅಲ್ಲಿ ಅವರಿಗೆ ಒಂದು ಮಗು ಜನಿಸಿತು. ಅದಕ್ಕೆ ಹಬೀಬಾ ಎಂದು ಹೆಸರಿಟ್ಟರು. ಹೀಗೆ ರಮ್ಲ(ರ) ಉಮ್ಮು ಹಬೀಬ ಎಂದು ಕರೆಯಲ್ಪಟ್ಟರು.

ಅಲ್ಲಿ ಇನ್ನಷ್ಟು ಕಠಿಣ ಪರೀಕ್ಷೆಗಳನ್ನು ಎದುರಿಸಬೇಕಾಗಿ ಬಂತು. ಪತಿ ಉಬೈದುಲ್ಲಾರು ಲೌಕಿಕ ಉದ್ದೇಶವನ್ನಿಟ್ಟುಕೊಂಡು ಕ್ರೈಸ್ತ ಧರ್ಮ ಸ್ವೀಕರಿಸಿದರು. ಪತಿಯ ನಿರ್ಧಾರವನ್ನು ಬದಲಿಸಲು ಉಮ್ಮು ಹಬೀಬಾ(ರ) ಸಾಧ್ಯವಿದ್ದಷ್ಟು ಪ್ರಯತ್ನಿ ಸಿದರು. ಆದರೆ ಸಫಲರಾಗಲಿಲ್ಲ. ಹೀಗೆ ತಾಯ್ನಾಡಿನಿಂದ ದೂರವಾಗಿ ಅನ್ಯ ದೇಶದಲ್ಲಿ ಅವರು ಎಲ್ಲ ವಿಧದಲ್ಲೂ ಒಬ್ಬಂಟಿಯಾಗಿ ಬಿಟ್ಟರು. ಅಬಿಸೀನಿಯಾದಲ್ಲಿ ತನ್ನವರೆನ್ನುವವರು ಯಾರೂ ಇರಲಿಲ್ಲ. ಊರಿಗೆ ಹಿಂದಿರುಗಿದರೆ, ಕುಟುಂಬವು ಒತ್ತಾಯ ಪೂರ್ವಕ ಧರ್ಮವನ್ನು ಬಿಟ್ಟು ಬರಲು ಬಲವಂತ ಪಡಿಸಬಹುದು. ಅವರ ಪರಿಸ್ಥಿತಿ ಸಮುದ್ರ ಮತ್ತು ಸೈತಾನನ ಮಧ್ಯೆ ಇದ್ದಂತಾಯಿತು. ಒಂದೋ ಧರ್ಮ ತ್ಯಾಗ ಮಾಡಬೇಕು. ಇಲ್ಲದಿದ್ದರೆ ಮರಣ ಹೊಂದಬೇಕು. ಏನೂ ತೋಚದಂತಹ ಪರಿಸ್ಥಿತಿ! ಆದರೂ ಅವರು ಸತ್ಯ ವಿಶ್ವಾಸದಿಂದ ಹಿಂದಿರುಗಲಿಲ್ಲ. ಸುಖಾಡಂಬರಗಳ ನಡುವೆ ಹುಟ್ಟಿ ಬೆಳೆದ ಉಮ್ಮು ಹಬೀಬಾ(ರ), ಓರ್ವ ಹೆಣ್ಣು ಸಹಿಸಲು ಸಾಧ್ಯವಾಗುವುದಕ್ಕಿಂತ ಹೆಚ್ಚಿನ ಸಂಕಷ್ಟಗಳನ್ನು ಅನುಭವಿಸುತ್ತಿದ್ದರು.

ಉಮ್ಮುಹಬೀಬಾ(ರ)ರ ಹೃದಯ ವಿದ್ರಾವಕ ಘಟನೆಯನ್ನು ಪ್ರವಾದಿಯವರು ಅರಿತರು. ಆ ಮೃದು ಹೃದಯವನ್ನು ಅದು ಬಹಳವಾಗಿ ನೋಯಿಸಿತು. ಘನತೆ, ಗೌರವ ಇರುವ ಕುಟುಂಬದಲ್ಲಿ ಜನಿಸಿ, ಸುಖಾಡಂಬರದಲ್ಲಿ ಬೆಳೆದ ಆ ಮಹಿಳಾ ರತ್ನ, ಸನ್ಮಾರ್ಗವನ್ನು ಸ್ವೀಕರಿಸಿ ಸಹಿಸಲಾಗುವುದಕ್ಕಿಂತ ಹೆಚ್ಚಿನ ಸಂಕಷ್ಟಗಳನ್ನು ಸಹಿಸಬೇಕಾಗಿ ಬಂದರೂ ಸತ್ಯಧರ್ಮದಲ್ಲಿ ದೃಢವಾಗಿ ನಿಂತಿದ್ದರು. ಅವರಿಗೆ ಸಾಧ್ಯವಿರುವ ಸಹಾಯವನ್ನು ಮಾಡಿ ಅವರನ್ನು ದುಃಖ ಸಾಗರದಿಂದ ದಡ ಸೇರಿಸಿ ಸಾಂತ್ವನಗೊಳಿಸಲು ಪ್ರವಾದಿಯವರು ಬಯಸಿದರು. ಅಮ್ರ್ ಬಿನ್ ಉಮಯ್ಯ(ರ)ರನ್ನು ಅಬಿಸೀನಿಯಾದ ರಾಜ ನಜ್ಜಾಶಿಯವರ ಬಳಿಗೆ ಕಳುಹಿಸಿಕೊಟ್ಟರು. ಉಮ್ಮು ಹಬೀಬಾ(ರ)ರನ್ನು ತಾನು ವಿವಾಹವಾಗ ಬಯಸಿರುವುದಾಗಿಯೂ ಈ ವಿಷಯವನ್ನು ಅವರಿಗೆ ತಿಳಿಸಬೇಕೆಂದು ಮುಂದಿನ ವ್ಯವಸ್ಥೆಗಳನ್ನು ಮಾಡಿಕೊಡಲು ತಾವು ನೇತೃತ್ವ ವಹಿಸಬೇಕೆಂದು ತಿಳಿಸುವ ಪತ್ರವನ್ನು ಅವರಿಗೆ ಕೊಟ್ಟು ಕಳುಹಿಸಿದರು.

ವಿಷಯ ತಿಳಿದು ನಜ್ಜಾಶಿ ರಾಜರು ಸೇವಕಿ ಅಬ್ರಹರ ಮೂಲಕ ಉಮ್ಮು ಹಬೀಬಾ(ರ)ರಿಗೆ ತಿಳಿಸಿದರು. ಉಮ್ಮು ಹಬೀಬಾರ ಕಣ್ಣುಗಳಿಂದ ಆನಂದ ಭಾಷ್ಪಗಳು ಉದುರಿದವು. ಅವರು ತನ್ನ ರಕ್ತ ಸಂಬಂಧಿ ಖಾಲಿದ್ ಬಿನ್ ಸಈದ್(ರ)ರಿಗೆ ವಿವಾಹದ ಉಸ್ತುವಾರಿ ವಹಿಸಿಕೊಟ್ಟರು. ನಾಲ್ನೂರು ದೀನಾರ್ ಮಹರ್ ನಿರ್ಧರಿಸ ಲಾಯಿತು. ಅದನ್ನು ನಜ್ಜಾಶಿ ರಾಜ ಪ್ರವಾದಿಯವರ(ಸ) ಪರವಾಗಿ ನೀಡಿದರು. ಬಳಿಕ ರಾಜನ ಆಸ್ಥಾನದಲ್ಲಿ ಮಕ್ಕಾದಿಂದ ಬಂದ ಸತ್ಯವಿಶ್ವಾಸಿಗಳ ಉಪಸ್ಥಿತಿಯಲ್ಲಿ ವಿವಾಹ ನಡೆಯಿತು. ನಜ್ಜಾಶಿ ರಾಜ ಉಮ್ಮು ಹಬೀಬಾ(ರ)ರಿಗೆ ಕೆಲವು ಉಡುಗೊರೆಗಳನ್ನು ನೀಡಿದರು. ಜೊತೆಗೆ ಅವರು ಉಮ್ಮು ಹಬೀಬಾ(ರ)ರನ್ನು ಬಶೀರ್ ಹಬೀಲ್ ಬಿನ್ ಹಸನ್‌ರ ಜೊತೆ ಮದೀನಕ್ಕೆ ಕಳುಹಿಸಿಕೊಟ್ಟರು. ಇದು ಹಿಜರಿ 7ನೇ ವರ್ಷದಲ್ಲಿ ನಡೆಯಿತು.

ಮಗಳ ವಿವಾಹದ ಸುದ್ದಿಯನ್ನು ತಿಳಿದಾಗ ಇಸ್ಲಾಮಿನ ಕಡುವೈರಿಯಾಗಿದ್ದ ಅಬೂ ಸೂಫಿಯಾನ್ ಅದು ಪ್ರವಾದಿಯವರ(ಸ) ಐದನೇ ವಿವಾಹ ಎಂದು ತಿಳಿದಿದ್ದೂ ಹೀಗೆ ಪ್ರತಿಕ್ರಿಯೆ ನೀಡಿದರು, "ಅದೇನಿದ್ದರೂ ಮುಹಮ್ಮದ್ ಬಹಳ ಒಳ್ಳೆಯ ಮನುಷ್ಯ ಮತ್ತು ಅತ್ಯುತ್ತಮ ಪತಿ."

ಈ ವಿವಾಹವು ಅಬೂಸುಫಿಯಾನರ ಮನ ಪರಿವರ್ತನೆಗೆ ಕಾರಣವಾಯಿತು. ಉಮ್ಮು ಹಬೀಬಾ(ರ) ಮತ್ತು ಪ್ರವಾದಿಯವರ(ಸ) ಮಧ್ಯೆ ವಿವಾಹ ಏಕಾಯಿತು ಎಂಬುದನ್ನು ಇವೆಲ್ಲವೂ ಸ್ಪಷ್ಟಪಡಿಸುತ್ತದೆ. ಸಹೋದರ ಮುಆವಿಯರ ಆಡಳಿತ ಸಮಯದಲ್ಲಿ ಹಿಜರಿ 44ರಲ್ಲಿ ಉಮ್ಮು ಹಬೀಬಾ(ರ) ತನ್ನ 73ನೇ ವಯಸ್ಸಿನಲ್ಲಿ ನಿಧನರಾದರು.

❖ ❖ ❖ ❖

ಅಧ್ಯಾಯ 6

ವೈಧವ್ಯ ಕೊನೆಗಾಣಿಸಲು!

ಕೇವಲ ಮೂರು ತಿಂಗಳು ಮಾತ್ರ ಪ್ರವಾದಿಯವರೊಂದಿಗೆ(ಸ) ಬಾಳುವ ಭಾಗ್ಯ ದೊರೆತ ಮಹಾ ಮಹಿಳೆ ಝೈನಬ್(ರ). ಹಿಲಾಲ್ ಗೋತ್ರಕ್ಕೆ ಸೇರಿದವರು. ಖುಝೈಮ ಬಿನ್ ಹಾರಿಸ್ ಮತ್ತು ಹಿಂದ್ ಬಿಂತು ಔಫ್ ದಂಪತಿಗಳ ಪುತ್ರಿ.

ಪ್ರವಾದಿಯವರು(ಸ) ವಿವಾಹ ಮಾಡುವುದಕ್ಕಿಂತ ಮೊದಲು ಮೂರು ಬಾರಿ ಅವರು ವಿವಾಹವಾಗಿದ್ದರು. ಪ್ರಥಮ ಪತಿ ಅಬ್ದುಲ್ ಮುತ್ತಲಿಬ್‌ರ ಮೊಮ್ಮಗ ತುಫೈಲ್ ಆಗಿದ್ದರು. ಅವರು ವಿವಾಹ ವಿಚ್ಛೇದನ ಮಾಡಿದ ಬಳಿಕ ಹಾರಿಸ್‌ರ ಮಗ ಉಬೈದ್ ಅವರನ್ನು ವಿವಾಹ ಮಾಡಿದರು. ಬಳಿಕ ಜಹಶ್‌ರ ಮಗ ಅಬ್ದುಲ್ಲ ಅವರನ್ನು ವಿವಾಹ ಮಾಡಿಕೊಂಡರು. ಅವರು ಉಹುದ್ ಯುದ್ಧದಲ್ಲಿ ಹುತಾತ್ಮರಾದರು. ವಿಧವೆಯಾಗಿದ್ದ ಝೈನಬ್(ರ)ರಿಗೆ ಯಾರು ಆಶ್ರಯದಾತರಿರಲಿಲ್ಲ. ಸಂಬಂಧಿಕರೆಲ್ಲರೂ ತೀರಾ ಬಡವರಾಗಿದ್ದರು.

ಉಹುದ್ ಯುದ್ಧದಲ್ಲಿ 70 ಸಹಾಬಿಗಳು ಹುತಾತ್ಮರಾಗಿದ್ದರು. ಆದ್ದರಿಂದ ಅವರ ಪತ್ನಿಯರು ವಿಧವೆಯರಾದರು. ಅವರನ್ನು ಪುನರ್ವಿವಾಹ ಮಾಡಿಸಬೇಕಿತ್ತು. ಪ್ರವಾದಿ ಮುಹಮ್ಮದರು ಝೈನಬ್(ರ)ರನ್ನು ವಿವಾಹ ಮಾಡಿಕೊಳ್ಳುವ ಮೂಲಕ, ಈ ವಿಷಯದಲ್ಲಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡಿದರು. ಪ್ರವಾದಿಯವರ(ಸ) ಮಾದರಿಯನ್ನು ಸಹಾಬಿಗಳು ಅನುಸರಿಸಿದರು.

ಝೈನಬ್(ರ)ರ ಹೃದಯವು ಕರುಣೆ ಮತ್ತು ಅನುಕಂಪದಿಂದ ತುಂಬಿತ್ತು. ಬಡಜನರ, ದೀನದಲಿತರ ಬಗ್ಗೆ ಅವರು ತೋರುತ್ತಿದ್ದ ಅದಮ್ಯ ಕಳಕಳಿಯಿಂದಾಗಿಯೇ ಅವರು 'ಉಮ್ಮುಲ್ ಮಸಾಕೀನ್' (ಬಡವರ ಮಾತೆ) ಎಂಬ ಕೀರ್ತಿಗೆ ಪಾತ್ರರಾದರು.

ಪ್ರವಾದಿಯವರನ್ನು(ಸ) ವಿವಾಹವಾದ ಬಳಿಕ ಕೇವಲ ಮೂರು ತಿಂಗಳು ಮಾತ್ರ ಝೈನಬ್(ರ)ರಿಗೆ ಅವರೊಂದಿಗೆ ಬಾಳುವ ಸೌಭಾಗ್ಯ ದೊರೆತಿತ್ತು. ಅವರು ತಮ್ಮ 30ನೇ ವರ್ಷದ ಸಣ್ಣ ಪ್ರಾಯದಲ್ಲಿ ನಿಧನರಾದರು.

ಖದಿಜಾ(ರ)ರ ಬಳಿಕ ಪ್ರವಾದಿಯವರ(ಸ) ಜೀವನ ಅವಧಿಯಲ್ಲಿ ನಿಧನರಾದ

ಪತ್ನಿಯರಲ್ಲಿ ಝೈನಬ್(ರ) ಒಬ್ಬರು. ಪ್ರವಾದಿಯವರು(ಸ) ಝೈನಬ್(ರ)ರನ್ನು ವಿವಾಹವಾಗಲಿಕ್ಕೆ ಪ್ರೇರೇಪಿಸಿದ್ದು, ಅವರನ್ನು ವೈಧವ್ಯದ ಸಂಕಷ್ಟಗಳಿಂದ ಸಂರಕ್ಷಿಸುವುದು ಮಾತ್ರವಾಗಿತ್ತು ಎಂಬುದು ಯಾವುದೇ ವಿವರಣೆಗಳಿಲ್ಲದ ರೀತಿಯಲ್ಲಿ ಸ್ಪಷ್ಟವಾಗಿದೆ. ಪ್ರವಾದಿಯವರ(ಸ) ಈ ಮಾದರಿಯನ್ನು ಅನುಸರಿಸಿ ಅನೇಕರು ಉಹುದ್ ಯುದ್ಧ ದಲ್ಲಿ ಹುತಾತ್ಮರಾದ ವ್ಯಕ್ತಿಗಳ ವಿಧವೆಯರನ್ನು ವಿವಾಹವಾಗಿ ಅವರನ್ನು ಸಂರಕ್ಷಿಸಿದರು.

ಅರ್ಹವಾದ ಉಡುಗೊರೆ

ಪ್ರವಾದಿಯವರು(ಸ) ಎಂಟನೆಯದಾಗಿ ಉಮ್ಮು ಸಲಮ(ರ)ರನ್ನು ವಿವಾಹ ವಾದರು. ಅವರ ನಿಜವಾದ ಹೆಸರು ಹಿಂದ್ ಆಗಿತ್ತು. ಅವರು ಕುರೈಶ್ ಕುಟುಂಬದ ಬನೂ ಮಖ್ಝೂಮ್ ಗೋತ್ರದಲ್ಲಿ ಜನಿಸಿದರು. ತಂದೆ ಮುಗೀರಾ ಅಬೂ ಉಮಯ್ಯರ ಮಗ. ತಾಯಿ ಆಮಿರ್‌ರ ಮಗಳು ಆತಿಕ.

ಉಮ್ಮು ಸಲಮ(ರ)ರ 13ನೇ ವಯಸ್ಸಿನಲ್ಲಿ ಪ್ರಥಮ ವಿವಾಹವಾಯಿತು. ಚಿಕ್ಕಪ್ಪ ಅಬ್ದುಲ್ ಅಝೀಝ್‌ರ ಮಗ ಅಬ್ದುಲ್ಲ ವರನಾಗಿದ್ದರು.

ಇಸ್ಲಾಮಿನ ಕುರಿತು ಅರಿತ ಕೂಡಲೇ ಇಬ್ಬರು ಇಸ್ಲಾಮ್ ಧರ್ಮ ಪ್ರವೇಶಿಸಿದರು. ವೈರಿಗಳು ಇಸ್ಲಾಮ್ ಸ್ವೀಕರಿಸಿದವರನ್ನು ಕಠೋರವಾಗಿ ಹಿಂಸಿಸುತ್ತಿದ್ದ ಕಾಲವಾಗಿತ್ತದು. ಹಿಂದ್ ಮತ್ತು ಅಬ್ದುಲ್ಲ ದಂಪತಿಗಳು ಕ್ರೂರ ಮರ್ದನಗಳನ್ನು ಅನುಭವಿಸಬೇಕಾಗಿ ಬಂತು. ವೈರಿಗಳ ಮರ್ದನವು ಉತ್ತುಂಗಕ್ಕೇರಿದಾಗ ಪ್ರವಾದಿ ಯವರ(ಸ) ಆದೇಶದಂತೆ ಅವರು ಅಬಿಸೀನಿಯಕ್ಕೆ ವಲಸೆ ಹೋದರು. ಅಬಿಸೀನಿಯಾ ದಲ್ಲಿ ಅವರಿಗೆ ಪ್ರಥಮ ಮಗು ಜನಿಸಿತು. ಅದಕ್ಕೆ ಸಲಮ ಎಂದು ನಾಮಕರಣ ಮಾಡಿದರು. ಹೀಗೆ ಅಬ್ದುಲ್ಲಾರು ಅಬೂ ಸಲಮ(ರ) ಮತ್ತು ಹಿಂದ್ ಉಮ್ಮು ಸಲಮ(ರ) ಆದರು.

ಈ ಮಧ್ಯೆ ಕುರೈಶರು ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸಿರುವರೆಂಬ ವದಂತಿ ಹಬ್ಬಿದಾಗ, ಅದನ್ನು ನಂಬಿ ಉಮ್ಮು ಸಲಮ(ರ) ಮತ್ತು ಅಬೂ ಸಲಮ(ರ) ಇತರರಂತೆ ಮಕ್ಕಾಗೆ ಮರಳಿದರು. ಮಕ್ಕಾ ತಲುಪಿದ ಬಳಿಕ ಅದು ವದಂತಿ ಎಂಬುದು ಮನವರಿಕೆಯಾಯಿತು. ಹೀಗೆ ಅವರು ಪುನಃ ಶತ್ರುಗಳ ಕ್ರೂರ ಮರ್ದನಕ್ಕೆ ಒಳಗಾಗಬೇಕಾಯಿತು.

ಮದೀನಾಕ್ಕೆ ವಲಸೆ ಹೋಗಲು ಅನುಮತಿ ಲಭಿಸಿದಾಗ, ಅಬೂ ಸಲಮ(ರ) ಮತ್ತು ಉಮ್ಮು ಸಲಮ(ರ) ತಮ್ಮ ಮಗುವಿನೊಂದಿಗೆ ಮದೀನಾಕ್ಕೆ ಹೊರಟರು. ಈ ಸುದ್ದಿಯನ್ನು ಅರಿತ ಉಮ್ಮು ಸಲಮ(ರ)ರ ಮಖ್ಝೂಮ್ ಗೋತ್ರದ ಸಂಬಂಧಿಕರು ಅವರನ್ನು ಒತ್ತಾಯಪೂರ್ವಕ ಒಂಟೆಯಿಂದ ಕೆಳಗಿಳಿಸಿದರು. ಮಗುವನ್ನು ತಂದೆಯ

ಕುಟುಂಬದವರು ಹಿಡಿದಿಟ್ಟುಕೊಂಡರು. ಹೀಗೆ ಪತಿ ಮತ್ತು ಮಗುವನ್ನು ಕಳೆದುಕೊಂಡ ಉಮ್ಮು ಸಲಮ(ರ) ಅತೀವ ದುಃಖಿತರಾದರು. ಸಹಿಸಲಾಗದ ಮನೋವೇದನೆಯಿಂದ ಪ್ರತಿದಿನ ಬೆಳಿಗ್ಗೆ ಪತಿಯಿಂದ ಬೇರ್ಪಟ್ಟ ಸ್ಥಳಕ್ಕೆ ಹೋಗಿ ಅಳುತ್ತಿದ್ದರು. ಇದು ಅವರ ದಿನಚರಿಯಾಯಿತು. ಸಾಯಂಕಾಲವಾಗುವಾಗ ದುಃಖತಪ್ತ ಕಣ್ಣುಗಳೊಂದಿಗೆ ಹಿಂದಿರುಗುತ್ತಿದ್ದರು. ಅದೊಂದು ದಿನ ಅವರ ಶೋಚನೀಯಾವಸ್ಥೆಯನ್ನು ಕಂಡ ಓರ್ವ ಬಂಧುವಿಗೆ ಅವರ ಮೇಲೆ ಕರುಣೆ ಬಂತು. ಅವರು ಸಂಬಂಧಿಕರನ್ನೆಲ್ಲ ಕರೆಸಿ ಉಮ್ಮು ಸಲಮ(ರ)ರಿಗೆ ಪತಿಯ ಬಳಿಗೆ ಹೋಗಲು ಒಪ್ಪಿಗೆಯನ್ನು ನೀಡಲು ಮನವಿ ಮಾಡಿಕೊಂಡರು. ಹೀಗೆ ಅವರು ಒಪ್ಪಿಗೆ ನೀಡಿದ ಬಳಿಕ ಉಮ್ಮು ಸಲಮ ಪತಿಯ ಬಳಿ ಮದೀನಾಕ್ಕೆ ಹಿಂದಿರುಗಿದರು. ಪತಿಯನ್ನು ಮರಳಿ ಗಳಿಸಲು ಸಾಧ್ಯವಾದುದ್ದಕ್ಕಾಗಿ ಅವರು ಅತೀವ ಸಂತೋಷಪಟ್ಟರು.

ಹಿಜರಿ ಎರಡನೇ ವರ್ಷದಲ್ಲಿ ನಡೆದ ಬದ್ರ್ ಯುದ್ಧ ಮತ್ತು ಮೂರನೇ ವರ್ಷದಲ್ಲಿ ನಡೆದ ಉಹುದ್ ಯುದ್ಧದಲ್ಲಿ ಅಬೂ ಸಲಮ(ರ) ವೀರಾವೇಶದಿಂದ ಹೋರಾಡಿದರು. ಅವರು ಸುಪ್ರಸಿದ್ಧ ಕುದುರೆ ಸವಾರ ಹಾಗೂ ಧೀರ ಪರಾಕ್ರಮಿಯಾಗಿದ್ದರು. ಉಹುದ್ ಯುದ್ಧದಲ್ಲಿ ಮಾರಕವಾಗಿ ಗಾಯಗೊಂಡ ಅಬೂ ಸಲಮ(ರ) ಕೆಲವು ತಿಂಗಳ ಬಳಿಕ ನಿಧನರಾದರು.

ವಿಧವೆಯಾದ ಉಮ್ಮು ಸಲಮ(ರ)ರಿಗೆ ನಾಲ್ಕು ಮಕ್ಕಳನ್ನು ಪೋಷಣೆ ಮಾಡಬೇಕಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿತ್ತು. ಅವರ ಸಂಕಷ್ಟವನ್ನು, ಅಸಹಾಯಕತೆಯನ್ನು ಅರ್ಥ ಮಾಡಿಕೊಂಡ ಪ್ರವಾದಿವರ್ಯರು(ಸ) ಅವರನ್ನು ವಿವಾಹ ಮಾಡಿಕೊಂಡರು. ಹೀಗೆ ಅವರ ನಾಲ್ಕು ಮಕ್ಕಳ ಪಾಲನೆಯ ಜವಾಬ್ದಾರಿಯನ್ನು ಕೂಡ ಪ್ರವಾದಿಯವರು(ಸ) ವಹಿಸಿಕೊಂಡರು. ಹಿಜರಿ ನಾಲ್ಕನೇ ವರ್ಷದಲ್ಲಿ ಇದು ನಡೆಯಿತು.

ಉಮ್ಮು ಸಲಮ(ರ) ಮದೀನಕ್ಕೆ ವಲಸೆ ಹೋದ ಪ್ರಥಮ ಮುಸ್ಲಿಮ್ ಮಹಿಳೆ. ಅವರು 300 ಕಿಲೋಮೀಟರ್‌ಗೂ ಮಿಕ್ಕಿ ಒಂಟಿಯಾಗಿ ಸಂಚರಿಸಿ ಮದೀನಾ ತಲುಪಿದ್ದರು.

ಆಯಿಶಾ(ರ)ರನ್ನು ಹೊರತುಪಡಿಸಿದರೆ ಅತಿ ಹೆಚ್ಚು ಪ್ರವಾದಿ ವಚನಗಳನ್ನು ವರದಿ ಮಾಡಿದ ಪ್ರವಾದಿ ಪತ್ನಿ ಉಮ್ಮು ಸಲಮ(ರ) ಆಗಿದ್ದಾರೆ. 378 ಪ್ರವಾದಿ ವಚನಗಳು ಅವರಿಂದ ವರದಿಯಾಗಿವೆ. ಪ್ರವಾದಿ ಮುಹಮ್ಮದ್(ಸ)ರ ನಿಧನಾನಂತರ ಸಹಾಬಿಗಳು ಸಂಶಯಗಳ ನಿವಾರಣೆಗೆ ಉಮ್ಮು ಸಲಮ(ರ)ರನ್ನು ಸಂಪರ್ಕಿಸುತ್ತಿದ್ದರು.

ಪ್ರವಾದಿಯವರ(ಸ) ಪತ್ನಿಯರ ಪೈಕಿ ಕೊನೆಯದಾಗಿ ಇಹಲೋಕಕ್ಕೆ ವಿದಾಯ

ಕೋರಿದವರು ಕೂಡ ಉಮ್ಮು ಸಲಮ(ರ) ಆಗಿದ್ದರು. ಹಿಜರಿ 61 ರಲ್ಲಿ ತಮ್ಮ 84 ವರ್ಷ ಪ್ರಾಯದಲ್ಲಿ ಅವರು ಇಹಲೋಕ ಯಾತ್ರೆ ಮುಗಿಸಿದರು.

ಪ್ರವಾದಿಯವರ(ಸ) ಪ್ರವಾದಿತ್ವ ನಿರ್ವಹಣೆಯಲ್ಲಿ ಬಹಳ ಉಪಕಾರಪ್ರದವಾದ ಉಮ್ಮು ಸಲಮ(ರ)ರೊಂದಿಗಿನ ವಿವಾಹದ ಬಗ್ಗೆ ಇಸ್ಲಾಮನ್ನು ಟೀಕಿಸುವವರು ಕೂಡ ಆಕ್ಷೇಪವೆತ್ತುವುದಿಲ್ಲ.

❖ ❖ ❖ ❖

ಅಧ್ಯಾಯ 7

ಕಾನೂನು ಸುಧಾರಣೆಯ ಪ್ರಾಯೋಗಿಕ ಮಾದರಿ

ಇಸ್ಲಾಮಿನ ವಿಮರ್ಶಕರು ಪ್ರವಾದಿ ಮುಹಮ್ಮದ್(ಸ)ರನ್ನು ಟೀಕಿಸಲು ಅತಿ ಹೆಚ್ಚಾಗಿ ಝೈನಬ್(ರ)ರ ವಿವಾಹವನ್ನು ಉಪಯೋಗಿಸುತ್ತಾರೆ.

ಝೈನಬ್(ರ)ರ ತಂದೆ ಜಹಶ್. ತಾಯಿ ಅಬ್ದುಲ್ ಮುತ್ತಲಿಬ್‌ರ ಮಗಳು ಉಮೈಮ. ಆದ ಕಾರಣ ಅವರು ಪ್ರವಾದಿಯವರ ಪಿತೃಸಹೋದರಿಯ ಮಗಳು. ಶೈಶವ, ಬಾಲ್ಯ, ಯೌವ್ವನದಲ್ಲಿ ಅವರು ಪರಸ್ಪರ ಹತ್ತಿರದಿಂದ ಬಲ್ಲವ ರಾಗಿದ್ದರು. ಅವರ ಮಧ್ಯೆ ಅಪರಿಚಿತ ಭಾವನೆ ಇರಲಿಲ್ಲ. ಝೈನಬ್(ರ)ರ ಸೌಂದರ್ಯವು ಪ್ರವಾದಿಯವರು(ಸ) ಅವರನ್ನು ವಿವಾಹವಾಗಲು ಕಾರಣವಾಗಿರುವುದಾಗಿದ್ದರೆ, ಕನ್ಯೆಯಾಗಿರುವಾಗಲೇ ಪ್ರವಾದಿಯವರಿಗೆ(ಸ) ಅವರನ್ನು ಜೀವನ ಸಂಗಾತಿಯಾಗಿ ಸ್ವೀಕರಿಸಲು ಯಾವುದೇ ಅಡ್ಡಿಯಿರಲಿಲ್ಲ. ಆದರೆ ಪ್ರವಾದಿಯವರು(ಸ) ಅವರನ್ನು ಪತ್ನಿಯಾಗಿ ಸ್ವೀಕರಿಸಲು ಎಂದೂ ಆಶಿಸಿರಲಿಲ್ಲ. ಆದುದರಿಂದ ಅವರು ಸ್ವತಃ ಮುಂದೆ ನಿಂತು ಝೈನಬ್(ರ) ಮತ್ತು ಝೈದ್(ರ)ರ ವಿವಾಹವನ್ನು ನಡೆಸಿಕೊಟ್ಟಿದ್ದರು.

ಝೈದ್, ಖದೀಜಾ(ರ)ರ ಗುಲಾಮರಾಗಿದ್ದರು. ಖದೀಜಾ ಪ್ರವಾದಿಯವರನ್ನು ವಿವಾಹವಾದ ಬಳಿಕ ಪ್ರವಾದಿಯವರಿಗೆ ಅವರನ್ನು ನೀಡಿದರು. ಸ್ವಲ್ಪ ಸಮಯದ ಬಳಿಕ ಪ್ರವಾದಿಯವರು ಅವರನ್ನು ಸ್ವತಂತ್ರಗೊಳಿಸಿದರು. ಮುಂದೆ ಅವರನ್ನು ದತ್ತು ಪುತ್ರನಾಗಿ ಸ್ವೀಕರಿಸುವುದಾಗಿ ಬಹಿರಂಗವಾಗಿ ಘೋಷಿಸಿದರು. ದತ್ತು ಪುತ್ರ ಎಂಬ ನೆಲೆಯಲ್ಲಿ ಅವರು ಝೈದ್ ಬಿನ್ ಮುಹಮ್ಮದ್ ಅಥವಾ ಮುಹಮ್ಮದರ ಮಗ ಝೈದ್ ಎಂದು ಕರೆಯಲ್ಪಟ್ಟರು. ಪ್ರವಾದಿತ್ವ ಲಭಿಸಿದ ಬಳಿಕ ಆರಂಭ ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದ ವ್ಯಕ್ತಿಗಳ ಪೈಕಿ ಝೈದ್(ರ) ಕೂಡ ಒಬ್ಬರು.

ಜಗತ್ತಿನ ಇತರ ಭಾಗಗಳಲ್ಲಿ ಇದ್ದಂತೆಯೇ ಅರೇಬಿಯಾದಲ್ಲಿಯೂ ಅಂದು ಸಮಾಜದಲ್ಲಿ ಉಚ್ಚನೀಚತೆ, ಅಸಮಾನತೆ ಅಸ್ತಿತ್ವದಲ್ಲಿತ್ತು. ಇಸ್ಲಾಮ್ ಸಾಮಾಜಿಕ ಅಸಮಾನತೆಯನ್ನು ಇಲ್ಲವಾಗಿಸಿತು. ಕುಲಮಹಿಮೆ, ಗೋತ್ರ ಮಹಿಮೆ ಹೆಚ್ಚು ಪ್ರಭಾವ ಬೀರುವ ವೈವಾಹಿಕ ಜೀವನದಲ್ಲಿ ಸಮಗ್ರವಾದ ಬದಲಾವಣೆಗಳು

ಉಂಟಾಗಬೇಕು ಎಂದು ಪ್ರವಾದಿಯವರು(ಸ) ತೀರ್ಮಾನಿಸಿದರು. ಅದಕ್ಕಾಗಿ ಅವರು ತಮ್ಮ ಪಿತೃ ಸಹೋದರಿಯ ಮಗಳು ಝೈನಬ್(ರ)ರನ್ನು ಈ ಮೊದಲು ಗುಲಾಮರಾಗಿದ್ದ ಝೈದ್(ರ)ರಿಗಾಗಿ ಆಯ್ಕೆ ಮಾಡಿಕೊಂಡರು. ಕುರೈಶಿ ಗೋತ್ರಕ್ಕೆ ಸೇರಿದ ಹಾಶಿಮ್ ಕುಟುಂಬದ ತನ್ನ ಸಹೋದರಿಯನ್ನು ಝೈದ್(ರ)ರಿಗೆ ವಿವಾಹ ಮಾಡಲು ಅಬ್ದುಲ್ಲ ಬಿನ್ ಜಹಶ್ ನಿರಾಕರಿಸಿದರು. ಕುಟುಂಬದ ಒಟ್ಟು ಅಭಿಪ್ರಾಯವೂ ಅದುವೇ ಆಗಿತ್ತು. ಝೈನಬ್(ರ) ಕೂಡ ಈ ವಿವಾಹವನ್ನು ಇಷ್ಟಪಟ್ಟಿರಲಿಲ್ಲ. "ಅವರನ್ನು ಪತಿಯಾಗಿ ಸ್ವೀಕರಿಸಲು ನನಗಿಷ್ಟವಿಲ್ಲ. ನಾನು ಕುಲೀನೆಯಾದ ಓರ್ವ ಕುರೈಶಿ ಹೆಣ್ಣಲ್ಲವೇ?" ಎಂದಿದ್ದರು.

ಸಹೋದರ ಮತ್ತು ಕುಟುಂಬದ ಇತರ ಸದಸ್ಯರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದು ಬಹಳ ಸ್ವಾಭಾವಿಕವಾದಂತಹ ಪ್ರತಿಕ್ರಿಯೆಯಾಗಿತ್ತು. ಸ್ವತಂತ್ರಗೊಳಿಸಲ್ಪಟ್ಟ ಒಬ್ಬ ಗುಲಾಮನೊಂದಿಗೆ ಉನ್ನತ ಕುಲಮಹಿಮೆಯುಳ್ಳ ಹೆಣ್ಣು ವಿವಾಹ ಮಾಡಿಕೊಳ್ಳುವುದು ಆ ಕಾಲದಲ್ಲಿ ಎಂದಲ್ಲ, ಎಲ್ಲ ಕಾಲದಲ್ಲಿಯೂ ಯೋಚಿಸಲು ಸಾಧ್ಯವಿಲ್ಲದ ವಿಷಯವಾಗಿತ್ತು. ಅದರ ಜೊತೆಗೆ ಗೋತ್ರ ಮಹಿಮೆ, ಕುಲ ಮಹಿಮೆ ಹೆಸರಿನಲ್ಲಿ ಇರುವ ಸಂಪ್ರದಾಯವನ್ನು ಕೊನೆಗಾಣಿಸಲು ನನ್ನ ಕುಟುಂಬದ ಸದಸ್ಯರು ಮುಂದೆ ಬಂದು ಸಮಾಜಕ್ಕೆ ಮಾದರಿಯಾಗಬೇಕು ಎಂದು ಪ್ರವಾದಿಯವರು ತೀರ್ಮಾನಿಸಿದರು. ಆದುದರಿಂದಾಗಿ ಝೈದ್(ರ)ರನ್ನು ವಿವಾಹವಾಗಲಿಕ್ಕೆ ಝೈನಬ್(ರ)ರನ್ನು, ಸಹೋದರನನ್ನು ಒತ್ತಾಯಪಡಿಸಿದರು.

ಕೊನೆಗೆ ಝೈನಬ್(ರ) ಮತ್ತು ಅವರ ಕುಟುಂಬದವರು ಪ್ರವಾದಿಯವರ(ಸ) ಇಂಗಿತಕ್ಕೆ ತಲೆಬಾಗಿದರು. ಪ್ರವಾದಿಯವರ(ಸ) ಆದೇಶವನ್ನು ಪಾಲಿಸಿದರು. ಹೀಗೆ ಪ್ರವಾದಿಯವರು(ಸ) ಸ್ವತಃ ವಿವಾಹದ ನೇತೃತ್ವವನ್ನು ವಹಿಸಿದರು. ಝೈದ್(ರ)ರಿಗಾಗಿ ಮಹರ್ ನೀಡಲು ಹತ್ತು ದೀನಾರ್ ಮತ್ತು ಅರವತ್ತು ದಿರ್ಹಮ್‌ಗಳನ್ನು ನೀಡಿದರು. ವಿವಾಹದ ವಸ್ತ್ರಗಳನ್ನು, ಮನೆಯ ಸಾಮಗ್ರಿಗಳನ್ನು ತೆಗೆದುಕೊಟ್ಟರು. ಹಿಜರಿ ನಾಲ್ಕನೇ ವರ್ಷದಲ್ಲಿ ಇದು ನಡೆಯಿತು.

ಝೈದ್-ಝೈನಬ್‌ರ ದಾಂಪತ್ಯ ಜೀವನದಲ್ಲಿ ವಿರಸ ಭುಗಿಲೇಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಝೈದ್(ರ)ರ ಕೀಳರಿಮೆ ಮತ್ತು ಝೈನಬ್(ರ)ರ ಕುಲೀನತೆಯ ಗುಂಗು ಅವರ ದಾಂಪತ್ಯ ಜೀವನವನ್ನು ಹದಗೆಡಿಸಿತು. ಆದರೂ ಯಾವ ರೀತಿಯಿಂದಲಾದರೂ ದಾಂಪತ್ಯ ಜೀವನವನ್ನು ಮುಂದುವರಿಸಲು ಗರಿಷ್ಠ ಪ್ರಯತ್ನ ಪಟ್ಟರು. ಪ್ರವಾದಿಯವರು(ಸ) ನಡೆಸಿಕೊಟ್ಟ ವಿವಾಹವಲ್ಲವೇ ಎಂಬುದು ಇಬ್ಬರ ಮನಸ್ಸಿನಲ್ಲಿಯೂ ಇದ್ದಿತು. ಆದರೆ ಈ ಪ್ರಯತ್ನ ವಿಫಲವಾಯಿತು.

ಝೈದ್(ರ) ವಿವಾಹ ವಿಚ್ಛೇದನ ನೀಡುವುದಾದರೆ ವಿಚ್ಛೇದಿತೆಯಾದ

ಝೈನಬ್(ರ)ರ ಸಂರಕ್ಷಣೆಯನ್ನು ವಹಿಸಿಕೊಳ್ಳುವುದು ಪ್ರವಾದಿಯವರ(ಸ) ಜವಾಬ್ದಾರಿಯಾಗಿತ್ತು. ಏಕೆಂದರೆ ಯಶಸ್ವಿಯಾಗಿ ಮುಂದುವರಿಯದ ಆ ವಿವಾಹ ನಡೆದದ್ದು ಪ್ರವಾದಿಯವರ(ಸ) ಪ್ರೇರಣೆಯಿಂದಾಗಿತ್ತು.

ಈ ಮಧ್ಯೆ ಮಕ್ಕಳನ್ನು ದತ್ತು ತೆಗೆಯುವ ಸಂಪ್ರದಾಯವನ್ನು ಇಸ್ಲಾಮ್ ಕೊನೆಗಾಣಿಸಿತು. ಪ್ರತಿಯೊಬ್ಬರನ್ನು ಸ್ವಂತ ತಂದೆ ತಾಯಿಗಳಿಗೆ ಜೋಡಿಸಿ ಪರಿಚಯ ಪಡಿಸಬೇಕೆಂದು ಕಲಿಸಿಕೊಟ್ಟಿತು. ಅವರೊಂದಿಗೆ ಸೇರಿಸಿ ಹೇಳಬೇಕು ಎಂದಿತು. ಪವಿತ್ರ ಕುರ್‌ಆನ್‌ನ 33ನೇ ಅಧ್ಯಾಯದ ನಾಲ್ಕು ಮತ್ತು ಐದನೇ ವಚನಗಳಲ್ಲಿ ಈ ವಿಷಯವನ್ನು ಯಾವುದೇ ಸಂಶಯಕ್ಕೆಡೆಯಿಲ್ಲದಂತೆ ಸ್ಪಷ್ಟಪಡಿಸಲಾಗಿದೆ.

ದತ್ತುಪುತ್ರರನ್ನು ವಾರೀಸು ಹಕ್ಕಿನ ಸಹಿತ ಎಲ್ಲ ವಿಷಯಗಳಲ್ಲಿಯೂ ಸ್ವಂತ ಮಕ್ಕಳಂತೆ ಪರಿಗಣಿಸಲಾಗುತ್ತಿತ್ತು ಹಾಗೂ ಅವರು ವಿಚ್ಛೇದನಗೊಳಿಸಿದ ಸ್ತ್ರೀಯರನ್ನು ದತ್ತು ಸ್ವೀಕರಿಸಿದ ತಂದೆಯಂದಿರು ವಿವಾಹ ಮಾಡಿಕೊಳ್ಳುವುದನ್ನು ನೀಚ ಮತ್ತು ನಿಕೃಷ್ಟ ಕೆಲಸವಾಗಿ ಅಂದಿನ ಸಮಾಜದಲ್ಲಿ ಕಾಣಲಾಗುತ್ತಿತ್ತು. ಇದನ್ನು ಆಮೂಲಾಗ್ರವಾಗಿ ಕಾನೂನು ಮುಖಾಂತರ ಸುಧಾರಿಸುವ ಮತ್ತು ಸಾಮಾಜಿಕ ಸುಧಾರಣೆಗೆ ಮಾದರಿಯಾಗಬೇಕಾದ ಹೊಣೆ ಪ್ರವಾದಿಯವರ(ಸ) ಮೇಲಿತ್ತು. ಈ ಕಾರಣಕ್ಕಾಗಿ ಝೈನಬ್(ರ)ರನ್ನು ಝೈದ್(ರ) ವಿವಾಹ ವಿಚ್ಛೇದನ ಮಾಡಿದರೆ ಪ್ರವಾದಿಯವರೇ ಅವರನ್ನು ವಿವಾಹ ಮಾಡಿಕೊಳ್ಳಬೇಕಿತ್ತು. ಈ ವಿಷಯವನ್ನು ಸ್ವತಃ ಅಲ್ಲಾಹನೇ ಅವರಿಗೆ ಮುಂದಾಗಿ ತಿಳಿಸಿಕೊಟ್ಟಿದ್ದನು.

ಆದುದರಿಂದಲೇ ಝೈದ್(ರ)ರು ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡುವಂತೆ ಪ್ರವಾದಿಯವರನ್ನು ಕೋರಿದರು. ಪ್ರವಾದಿಯುವರು(ಸ) ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ವಿವಾಹ ವಿಚ್ಛೇದನ ನೀಡಬೇಡವೆಂದು ಪ್ರವಾದಿಯವರು(ಸ) ಝೈದ್(ರ)ರಿಗೆ ಬುದ್ಧಿ ಹೇಳಿದರು. ಝೈದ್‌ರ ವಿವಾಹ ವಿಚ್ಛೇದನವಾದರೆ, ಝೈನಬ್(ರ)ರನ್ನು ತಾನೇ ವಿವಾಹವಾಗಬೇಕಾದೀತು ಮತ್ತು ಅದು ಸಮಾಜದಲ್ಲಿ ಬಹಳ ದೊಡ್ಡ ಟೀಕೆ ಮತ್ತು ವಿಮರ್ಶೆಗೆ, ನಿಂದನೆ ಮತ್ತು ಅಪಹಾಸ್ಯಕ್ಕೆ ದಾರಿ ಮಾಡಿಕೊಡಬಹುದು ಎಂಬ ಆತಂಕವು ಇದಕ್ಕೆ ಮುಖ್ಯ ಕಾರಣವಾಗಿತ್ತು. ದತ್ತುಪುತ್ರರು ಸ್ವಂತ ಮಕ್ಕಳಂತೆಯೇ ಎಂದು ಪರಿಗಣಿಸುತ್ತಿದ್ದ ಸಮಾಜದಲ್ಲಿ ಮಗನ ವಿಚ್ಛೇದಿತ ಪತ್ನಿಯನ್ನು ವಿವಾಹವಾದನೆಂಬ ಟೀಕೆಗೆ ಗುರಿಯಾಗುವುದು ಸ್ಪಷ್ಟವಾಗಿತ್ತು.

ಹಾಗಿದ್ದರೂ ಝೈದ್(ರ)ರ ಒತ್ತಾಯದ ಜೊತೆಗೆ ಝೈನಬ್(ರ)ರ ತೀರ್ಮಾನವು ದೃಢವಾದಾಗ ಪ್ರವಾದಿಯವರು(ಸ) ವಿಚ್ಛೇದನಕ್ಕೆ ಅನುಮತಿ ನೀಡಬೇಕಾಗಿ ಬಂತು. ಹೀಗೆ ಝೈದ್(ರ) ಅವರನ್ನು ವಿಚ್ಛೇದಿಸಿದರು. ಮುಂದೆ ಅಲ್ಲಾಹನ ಆಜ್ಞೆ ಪ್ರಕಾರ

ಪ್ರವಾದಿ ಮುಹಮ್ಮದ್(ಸ)ರು ಝೈನಬ್(ರ)ರನ್ನು ವಿವಾಹವಾದರು.

ಇದರ ಬಗ್ಗೆ ಪವಿತ್ರ ಕುರ್‌ಆನ್ ಈ ರೀತಿ ಹೇಳಿದೆ, "ಪೈಗಂಬರರೇ, ಅಲ್ಲಾಹನೂ ನೀವೂ ಯಾರಿಗೆ ಉಪಕಾರ ಮಾಡಿದ್ದಿರೋ ಆ ವ್ಯಕ್ತಿಯೊಡನೆ ನೀವು, 'ನಿನ್ನ ಪತ್ನಿಯನ್ನು ಬಿಡಬೇಡ ಮತ್ತು ಅಲ್ಲಾಹನನ್ನು ಭಯಪಡು' ಎಂದು ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ಆ ವೇಳೆ ಅಲ್ಲಾಹ್ ಬಹಿರಂಗಗೊಳಿಸಲು ಇಚ್ಛಿಸಿದ್ದ ವಿಷಯವನ್ನು ನೀವು ನಿಮ್ಮ ಹೃದಯದೊಳಗೆ ಬಚ್ಚಿಟ್ಟಿದ್ದಿರಿ. ನೀವು ಜನರಿಗೆ ಹೆದರುತ್ತಿದ್ದಿರಿ. ನಿಜವಾಗಿ ಭಯಪಡಲು ಅಲ್ಲಾಹ್ ಅಧಿಕ ಹಕ್ಕುದಾರನಾಗಿದ್ದಾನೆ. ತರುವಾಯ ಝೈದ್ ಅವಳಿಂದ ತನ್ನ ಅಪೇಕ್ಷೆಯನ್ನು ಪೂರ್ತಿಗೊಳಿಸಿಕೊಂಡ ಬಳಿಕ ನಾವು ಅವಳ ವಿವಾಹವನ್ನು ನಿಮ್ಮೊಂದಿಗೆ ಮಾಡಿದೆವು. (ಇದು) ದತ್ತು ಪುತ್ರರು ತಮ್ಮ ಪತ್ನಿಯರೊಂದಿಗೆ ತಮ್ಮ ಅಪೇಕ್ಷೆ ಪೂರ್ತಿಗೊಳಿಸಿಕೊಂಡ ಬಳಿಕ ಅವರ (ವಿಚ್ಛೇದಿತೆಯರ) ವಿಷಯದಲ್ಲಿ ಸತ್ಯವಿಶ್ವಾಸಿಗಳಿಗೆ ಯಾವುದೇ ಅಡಚಣೆ ಇಲ್ಲದಂತಾಗಲಿಕ್ಕಾಗಿ (ಆಗಿದೆ). ಅಲ್ಲಾಹನ ಆಜ್ಞೆಯಂತು ಜಾರಿಗೆ ಬಂದೇ ತೀರಬೇಕಿತ್ತು." **(ಪವಿತ್ರ ಕುರ್‌ಆನ್: 33: 37)**

ತನ್ನ ಅಭಿಮಾನಕ್ಕೆ ಕುಂದುಂಟಾಗಬಹುದು ಎಂದು ಭಯಪಡದೆ, ದೇವನ ಆದೇಶವನ್ನು ಶಿರಸಾ ವಹಿಸಿಕೊಂಡು ಸಮಾಜದಲ್ಲಿ ಸಾಮಾಜಿಕ ಪರಿವರ್ತನೆಗೆ ಉಜ್ವಲವಾದ ಎರಡು ಮಾದರಿಗಳನ್ನು ನೀಡಿದ ಈ ಘಟನೆಯನ್ನೇ ಪ್ರವಾದಿಯವರನ್ನು ಅವಮಾನಿಸಲು ಬಳಸುವುದು ಅತ್ಯಂತ ಹೇಯ ಮತ್ತು ನಾಚಿಕೆಗೇಡಿನ ಸಂಗತಿ.

ಪ್ರವಾದಿಯವರು(ಸ) ಝೈನಬ್(ರ)ರನ್ನು ಆಕಸ್ಮಿಕವಾಗಿ ಭೇಟಿಯಾದರು ಮತ್ತು ಅವರಲ್ಲಿ ಆಕರ್ಷಿತರಾಗಿ ಝೈದ್(ರ)ರೊಂದಿಗೆ ಅವರನ್ನು ವಿವಾಹ ವಿಚ್ಛೇದನಗೊಳಿಸಲು ಒತ್ತಾಯಿಸಿದರೆಂಬುದು ಇಸ್ಲಾಮಿನ ವಿಮರ್ಶಕರು ರಚಿಸಿದ ಕಟ್ಟುಕತೆಯಾಗಿದೆ. ಝೈದ್(ರ) ಪತ್ನಿಗೆ ವಿಚ್ಛೇದನ ನೀಡಬೇಕೆಂದು ಪ್ರವಾದಿಯವರು(ಸ) ಬಯಸಿದ್ದರು ಮತ್ತು ಅದನ್ನು ಅಡಗಿಸಿಟ್ಟು ಬೇರೆ ರೀತಿಯಲ್ಲಿ ಹೇಳಿದರು ಎಂಬುದಾಗಿ ಅವರು ಪ್ರಚಾರ ಮಾಡುತ್ತಾರೆ. ಇಸ್ರೇಲಿಗಳು ಸೃಷ್ಟಿಸಿದ ಕಟ್ಟುಕಥೆಗಳನ್ನು ಅದೇ ರೀತಿಯಲ್ಲಿ ಪ್ರಚಾರ ಮಾಡಿದ ಕೆಲವು ಕುರ್‌ಆನ್ ವ್ಯಾಖ್ಯಾನ ಗ್ರಂಥಗಳನ್ನು ಪಾಶ್ಚಾತ್ಯರು ಉಲ್ಲೇಖಕ್ಕಾಗಿ ಬಳಸಿಕೊಳ್ಳುತ್ತಾರೆ. ಅದನ್ನೇ ಪುನರಾವರ್ತಿಸುವ ಕೆಲಸವನ್ನು ಇಲ್ಲಿನ ಇಸ್ಲಾಮಿನ ವಿಮರ್ಶಕರು ಮಾಡುತ್ತಾರೆ. ನೂರಾರು ವರ್ಷಗಳ ಹಿಂದೆಯೇ ಅವೆಲ್ಲವೂ ಸಂಪೂರ್ಣ ಕಟ್ಟುಕಥೆಗಳು ಎಂಬುದಾಗಿ ಪ್ರಮುಖ ವಿದ್ವಾಂಸರು, ಕುರ್‌ಆನಿನ ವ್ಯಾಖ್ಯಾನಕಾರರು ಆದ ಇಬ್ನು ಕಸೀರ್, ಹದೀಸ್ ಪಂಡಿತರಾದ ಇಬ್ನು ಹಜರುಲ್ ಅಸ್ಕಲಾನಿ ಮುಂತಾದವರು ತರ್ಕಬದ್ಧವಾಗಿ ಮತ್ತು ಪ್ರಬಲವಾಗಿ ಸಾಬೀತು ಪಡಿಸಿದ್ದಾರೆ.

ಝೈನಬ್(ರ)ರನ್ನು ವಿವಾಹವಾಗಲು ಪ್ರವಾದಿಯವರಿಗೆ(ಸ) ಮನಸ್ಸಿರುತ್ತಿದ್ದರೆ,

ಅದು ಅವರು ಕನ್ಯೆಯಾಗಿರುವಾಗಲೇ ಮಾಡಿಕೊಳ್ಳಬಹುದಾಗಿತ್ತು. ಅವರು ಪರಸ್ಪರರನ್ನು ಅರಿತಿರುವ, ಅರ್ಥೈಸಿಕೊಂಡಿರುವ ಬಹಳ ಹತ್ತಿರದ ಸಂಬಂಧಿಗಳಾಗಿದ್ದರು. ಪ್ರವಾದಿಯವರಿಗೆ(ಸ) ಝೈನಬ್(ರ)ರನ್ನು ವಿವಾಹವಾಗಲು ಮನಸ್ಸಿದ್ದರೆ, ಝೈನಬ್(ರ)ರ ಕುಟುಂಬಕ್ಕೆ ಇಷ್ಟವೇ ಇಲ್ಲದಂತಹ ಝೈದ್(ರ)ರ ಜೊತೆ ಅವರ ವಿವಾಹವನ್ನು ಮಾಡಿಸಿ ಕೊಡುತ್ತಿರಲಿಲ್ಲ. ಪವಿತ್ರ ಕುರ್‌ಆನ್‌ನಲ್ಲಿ ಹೃದಯದಲ್ಲಿ ಬಚ್ಚಿಟ್ಟುಕೊಂಡದ್ದನ್ನು ಎಂದು ಹೇಳಿರುವುದು, ಝೈನಬ್(ರ)ರನ್ನು ವಿವಾಹ ಮಾಡಬೇಕೆಂದು ಹೇಳಿರುವ ದೇವನ ಆದೇಶದ ಕುರಿತಾಗಿದೆ. ಝೈದ್(ರ)ರು ಅವರಿಗೆ ವಿಚ್ಛೇದನ ನೀಡುತ್ತಾರೆ ಎಂಬ ಸೂಚನೆಯು ಅದರಲ್ಲಿತ್ತು. ಕುರ್‌ಆನಿನಲ್ಲಿ ಅಲ್ಲಾಹನು ತಿಳಿಸಿದ ಪ್ರಕಾರ ಅವನು ಬಹಿರಂಗಪಡಿಸಿದ ವಿಷಯ ಕೂಡ ಇದುವೇ ಆಗಿತ್ತು.

ಇತರ ಅನೇಕ ವಿಷಯಗಳಂತೆ ದತ್ತು ಸಂಪ್ರದಾಯ ಮತ್ತು ಅದಕ್ಕೆ ಸಂಬಂಧಿಸಿದ ಆಚಾರ ಸಂಪ್ರದಾಯಗಳನ್ನು ಕೊನೆಗೊಳಿಸುವ, ಮಹತ್ವಪೂರ್ಣವಾದ ಸಮಾಜ ಸುಧಾರಣೆಗೆ ಪ್ರವಾದಿಯವರು(ಸ) ಸ್ವತಃ ಮಾದರಿಯನ್ನು ಒದಗಿಸಿದರು ಅಥವಾ ಅಲ್ಲಾಹನು ಅವರ ಮೂಲಕ ಅದಕ್ಕಾಗಿ ಒಂದು ಮಾದರಿಯನ್ನು ಸೃಷ್ಟಿಸಿದನು.

❖ ❖ ❖ ❖

ಅಧ್ಯಾಯ 8

ಪತ್ನಿಯ ಪದವಿಗೇರಿದ ಶತ್ರುವಿನ ಪುತ್ರಿ

ಮದೀನ ವಾಸಿಯಾಗಿದ್ದ ಹುಯಯ್ಯ್ ಬಿನ್ ಅಖ್ತಬ್ ಖೈಬರ್‌ನ ನಾಯಕರಾಗಿದ್ದರು. ಅವರು ಆ ನಾಡಿನ ನಾಯಕತ್ವ ತನಗೆ ಸಿಗಬೇಕು ಎಂದು ಬಯಸಿದ್ದರು. ಪ್ರವಾದಿ ಮಹಮ್ಮದ್(ಸ)ರು ಅದಕ್ಕೆ ಅಡ್ಡಿಯಾಗುತ್ತಾರೆ ಎಂಬುದು ಅವರಿಗೆ ಮನವರಿಕೆಯಾಯಿತು. ಆದುದರಿಂದ ಹೇಗಾದರೂ ಮಾಡಿ ಮುಹಮ್ಮದ್(ಸ)ರನ್ನು ಕೊಂದು ಬಿಡಬೇಕು ಎಂದು ನಿರ್ಧರಿಸಿದರು. ಅದಕ್ಕಾಗಿ ಮಕ್ಕಾಗೆ ಹೋಗಿ ಅಬೂ ಸುಫಿಯಾನ್‌ರನ್ನು ಭೇಟಿಯಾದರು. ಪರಸ್ಪರ ಸಮಾಲೋಚನೆ ನಡೆಸಿ ಪ್ರವಾದಿ ಮುಹಮ್ಮದ್(ಸ)ರನ್ನು ಕೊಲ್ಲಲು ಜೊತೆಯಾಗಿ ಮುಂದುವರಿಯಬೇಕೆಂದು ತೀರ್ಮಾನಿಸಿದರು. ಆ ಬಳಿಕ ಮದೀನಕ್ಕೆ ಹಿಂದಿರುಗಿ ಅಲ್ಲಿ ಆಂತರಿಕ ಸಮಸ್ಯೆಗಳನ್ನು ಸೃಷ್ಟಿಸಲು ಪ್ರಯತ್ನಿಸಿದರು. ಅಲ್ಲಿನ ವಿವಿಧ ಗೋತ್ರಗಳನ್ನು ಸಂಘಟಿಸಿದರು. ಮುಸ್ಲಿಮರ ವಿರುದ್ಧ ಯುದ್ಧ ಮಾಡುವುದಿಲ್ಲ ಮತ್ತು ಶತ್ರುಗಳಿಗೆ ಸಹಾಯ ಮಾಡುವುದಿಲ್ಲ ಎಂದು ಒಪ್ಪಂದ ಮಾಡಿಕೊಂಡು ಖೈಬರ್‌ಗೆ ಗಡಿಪಾರು ಮಾಡಲ್ಪಟ್ಟ ಬನೂ ನದೀರ್ ಗೋತ್ರದವರೂ ಅದರಲ್ಲಿದ್ದರು.

ಕರಾರನ್ನು ಉಲ್ಲಂಘಿಸಿ ಅವರು ಕೂಡ ಹುಯಯ್ಯ್ ಜೊತೆ ಸೇರಿಕೊಂಡು ಮದೀನಾದ ಮೇಲೆ ಆಕ್ರಮಣ ಮಾಡಲು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿದರು. ಖೈಬರ್ ವಾದಿಕುರಾದಲ್ಲಿ ವಾಸಿಸುತ್ತಿದ್ದ ಯಹೂದಿ ಗೋತ್ರಗಳಾದ ಬನೂ ನದೀರ್, ಬನೂ ಕೈನುಕಾ ಉತ್ತರದಿಂದಲೂ ಗತ್ಫಾನ್ ಗೋತ್ರದವರು ಪೂರ್ವದಿಂದಲೂ ಮದೀನಾದೆಡೆಗೆ ಹೊರಟರು. ಎಲ್ಲರನ್ನು ಒಟ್ಟು ಸೇರಿಸಿ ಅವರು ಮುಂದೆ ಹೊರಟಿದ್ದರು. ದಕ್ಷಿಣದಿಂದ ಕುರೈಶರು ಮದೀನಾದ ಮೇಲೆ ಆಕ್ರಮಣ ನಡೆಸಲು ಹೊರಟರು. ಎಲ್ಲವನ್ನೂ ಮುಂದಾಲೋಚನೆಯಿಂದ ಅರಿತುಕೊಂಡ ಪ್ರವಾದಿಯವರು ಕಂದಕವನ್ನು ಅಗೆಯುವ, ಮತ್ತಿತರ ಸಿದ್ಧತೆಗಳನ್ನು ಮಾಡಿಕೊಂಡು ಮದೀನಾವನ್ನು ರಕ್ಷಿಸಿದರು. ಇದನ್ನು ಎದುರಿಸಲು ಬನೂ ನದೀರ್ ಗೋತ್ರ ಪ್ರಮುಖ ಹುಯಯ್ಯ್ ಬಿನ್ ಅಖ್ತಬ್ ಯಹೂದಿ ಗೋತ್ರವಾದ ಖುರೈಝಾವನ್ನು ಸಮೀಪಿಸಿ, ಪ್ರವಾದಿಯವರೊಂದಿಗೆ ಮಾಡಿಕೊಂಡ ಕರಾರನ್ನು ಉಲ್ಲಂಘಿಸಿ ಯುದ್ಧದಲ್ಲಿ ಸೇರಿಕೊಳ್ಳುವಂತೆ

ಆಹ್ವಾನಿಸಿದರು. ಹೀಗೆ ಅವರು ಮದೀನಾದ ವಿರುದ್ಧ ತಿರುಗಿ ಬಿದ್ದರು. ಹಾಗಿದ್ದೂ ಪ್ರವಾದಿಯವರ(ಸ) ಅತಿ ಸಮರ್ಥವಾದ ಯುದ್ಧತಂತ್ರ ಮತ್ತು ಅಲ್ಲಾಹನ ವಿಶೇಷ ಸಹಾಯದ ಕಾರಣದಿಂದಾಗಿ ವಿರೋಧಿಗಳು ಆಕ್ರಮಣ ಮುಂದುವರಿಸಲಾಗದೆ ಮರಳಬೇಕಾಗಿ ಬಂತು. ಹೀಗೆ ಅವರಿಗೆ ಹಲವು ರೀತಿಯ ಕಷ್ಟ ನಷ್ಟಗಳು ಸಂಭವಿಸಿದವು. ಇದು ಹಿಜರಿ ಐದನೇ ವರ್ಷದ ಶವ್ವಾಲ್ ತಿಂಗಳಲ್ಲಿ ನಡೆಯಿತು.

ಕರಾರನ್ನು ಉಲ್ಲಂಘಿಸಿ, ಬಹಳ ದೊಡ್ಡ ಅನ್ಯಾಯವನ್ನು ಮಾಡಿದ ಶತ್ರುಗಳೊಂದಿಗೆ ಸೇರಿ ಮದೀನಾವನ್ನು ಆಕ್ರಮಿಸಲು ಪ್ರಯತ್ನಿಸಿದ, ವಿಶ್ವಾಸಘಾತಕತನವನ್ನು ತೋರಿದ ಬನೂ ಕುರೈಝಾ ಗೋತ್ರಕ್ಕೆ ಮತ್ತು ಅವರನ್ನು ಅದಕ್ಕೆ ಪ್ರೇರೇಪಿಸಿದ ಹುಯಯ್ಯ್ ವಿರುದ್ಧ ಅಲ್ಲಾಹನ ಆದೇಶದ ಪ್ರಕಾರ ಕಠಿಣ ಕ್ರಮ ಕೈಗೊಳ್ಳಲು ಪ್ರವಾದಿಯವರು(ಸ) ತೀರ್ಮಾನಿಸಿದರು. ಹೀಗೆ ಹರ್ಝುತ್ ಅಲಿಯವರ ನೇತೃತ್ವದಲ್ಲಿ ಒಂದು ಸೈನ್ಯವನ್ನು ಖೈಬರ್‌ನಲ್ಲಿ ನಿಯೋಗಿಸಿದರು.

ಯಹೂದಿ ಗೋತ್ರಗಳು ತಮ್ಮ ಧಿಕ್ಕಾರ, ವಂಚನೆ, ಕರಾರು ಉಲ್ಲಂಘನೆಯನ್ನು ಮುಂದುವರಿಸಿದ ಕಾರಣ, ಪ್ರವಾದಿಯವರು(ಸ) ನಿಯೋಗಿಸಿದ ಸೈನ್ಯ ಖೈಬರ್ ಮೇಲೆ ಮುತ್ತಿಗೆ ಹಾಕಿತು. ಕೊನೆಗೆ ಅವರೇ ಆಯ್ಕೆ ಮಾಡಿದ ಮಧ್ಯವರ್ತಿಯ ತೀರ್ಮಾನದಂತೆ ಅವರನ್ನು ಮರಣದಂಡನೆಗೆ ಗುರಿಪಡಿಸಲಾಯಿತು. ಮರಣದಂಡನೆಗೆ ಒಳಗಾದವರಲ್ಲಿ ಇವುಗಳಿಗೆಲ್ಲ ನೇತೃತ್ವವನ್ನು ನೀಡಿದ ಹುಯಯ್ಯ್ ಬಿನ್ ಅಖ್ತಬ್, ಅವರ ಮಗ ಮತ್ತು ಮಗಳ ಪತಿಯೂ ಇದ್ದರು.

ಸಫಿಯ್ಯ(ರ)

ಸಫಿಯ್ಯ(ರ) ಹುಯಯ್ಯ್ ಬಿನ್ ಅಖ್ತಬ್‌ರ ಮಗಳು. ಅವರ ತಾಯಿ ಬನೂ ಕುರೈಝಾ ಗೋತ್ರದ ನಾಯಕ ಸಮೂಈಲ್‌ರ ಮಗಳು ಬರ್‍ರಃ. ಕ್ರಿಸ್ತ ಶಕ 610ರಲ್ಲಿ ಯಸ್ರಿಬ್‌ನಲ್ಲಿ ಸಫಿಯ್ಯ ಜನಿಸಿದರು. ಬಹಳ ಸುಂದರಿಯೂ ಬುದ್ಧಿವಂತೆಯೂ ಕುಟುಂಬದ ಕಣ್ಮಣಿಯೂ ಆಗಿದ್ದರು. 14ನೇ ವಯಸ್ಸಿನಲ್ಲಿ ಸಫಿಯ್ಯ(ರ)ರನ್ನು ವಿವಾಹ ಮಾಡಿಕೊಟ್ಟರು. ಯುವಕವಿ ಮತ್ತು ಪರಾಕ್ರಮಿಯಾಗಿದ್ದ ಸಲಾಮ್ ಬಿನ್ ಮಶ್ಕ್ ಅವರ ಪತಿ. ಆದರೆ ಆ ದಾಂಪತ್ಯ ಜೀವನವು ಹೆಚ್ಚು ಕಾಲ ಮುಂದುವರಿಯಲಿಲ್ಲ. ವಿರಸವು ಹೆಚ್ಚಿ, ವಿವಾಹ ವಿಚ್ಛೇದನ ಮಾಡಿಕೊಂಡರು. ಬಳಿಕ ಹುಯಯ್ಯ್ ತನ್ನ ಮಗಳನ್ನು ಕಿನಾನ್ ಬಿನ್ ಅಬಿಲ್ ಹಖೈಖ್‌ರಿಗೆ ವಿವಾಹ ಮಾಡಿಕೊಟ್ಟರು. ಅವರು ಖೈಬರ್ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಸಫಿಯ್ಯ(ರ)ರ ಸಹೋದರ ಕೂಡ ಅದೇ ಯುದ್ಧದಲ್ಲಿ ಕೊಲ್ಲಲ್ಪಟ್ಟರು.

ಖೈಬರ್‌ನಲ್ಲಿ ಬಂಧಿಸಲ್ಪಟ್ಟ ಕೈದಿಗಳಲ್ಲಿ ಸಫಿಯ್ಯ(ರ) ಕೂಡ ಇದ್ದರು.

ಕೈದಿಗಳನ್ನೆಲ್ಲ ಒಂದೆಡೆ ಒಟ್ಟು ಸೇರಿಸಲಾಗಿತ್ತು. ನಿಯಮ ಪ್ರಕಾರ ಅವರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಯೋಧರ ಮಧ್ಯೆ ವಿಭಜಿಸಿ ನೀಡಬೇಕಾಗಿತ್ತು. ಆಗ ದಹ್ಯತುಲ್ ಕಲ್ಬ್ ಎಂಬ ವ್ಯಕ್ತಿ ಪ್ರವಾದಿಯವರ(ಸ) ಬಳಿ ಬಂದು ಯುದ್ಧ ಕೈದಿಗಳಲ್ಲಿ ಓರ್ವಳನ್ನು ತನಗೆ ನೀಡಬೇಕೆಂದು ವಿನಂತಿಸಿದರು. ಅವರ ಪೈಕಿ ಯಾರಾದರೂ ಒಬ್ಬರನ್ನು ಸ್ವೀಕರಿಸುವಂತೆ ಪ್ರವಾದಿಯವರು(ಸ) ಒಪ್ಪಿಗೆ ನೀಡಿದರು. ಅವರು ಸಫಿಯ್ಯ(ರ)ರನ್ನು ಆರಿಸಿದರು. ಆದರೆ ಅದು ಆ ಸಮಯದ ಸಂಪ್ರದಾಯದ ಅಂಗೀಕೃತ ನಿಯಮಕ್ಕೆ ವಿರುದ್ಧವಾಗಿತ್ತು. ಯಾವುದಾದರೂ ನಾಯಕ ವಧಿಸಲ್ಪಟ್ಟರೆ, ಅವನ ಮಗಳನ್ನು ಸಂರಕ್ಷಿಸುವುದು ವಿಜಯಿ ಪಕ್ಷದ ನಾಯಕನ ಹೊಣೆಗಾರಿಕೆಯಾಗಿತ್ತು. ಇಲ್ಲದಿದ್ದರೆ ಅಂತಹ ವಿವಾಹವು ಯಶಸ್ವಿ ಆಗುವುದಿಲ್ಲ. ಅದರ ಜೊತೆಗೆ ಅದು ಪರಾಜಿತ ಶತ್ರು ನಾಯಕನನ್ನು ನಿಂದಿಸಿದಂತೆ ಎಂದು ಪರಿಗಣಿಸಲಾಗುತ್ತಿತ್ತು.

ಆದುದರಿಂದಲೇ ಪ್ರವಾದಿಯವರ(ಸ) ಅನುಯಾಯಿಗಳ ಪೈಕಿ ಕೆಲವರು ಅವರ ಬಳಿ ಬಂದು ಹೀಗೆ ಹೇಳಿದರು, "ಸಫಿಯ್ಯ(ರ) ನದೀರ್ ಗೋತ್ರದ ನಾಯಕನ ಮಗಳಾಗಿರುವುದರಿಂದ, ತಮ್ಮ ಹೊರತು ಅನ್ಯರಿಗೆ ಅವರು ಯೋಗ್ಯರಲ್ಲ."

ಅನುಯಾಯಿಗಳೆಲ್ಲಾ ಒತ್ತಾಯಿಸಿದ ಕಾರಣ ಪ್ರವಾದಿಯವರು(ಸ) ಸಫಿಯ್ಯ(ರ) ರನ್ನು ತಮ್ಮ ಮುಂದೆ ಹಾಜರುಗೊಳಿಸಲು ಆದೇಶಿಸಿದರು. ಯುದ್ಧ ಕೈದಿ ಎಂಬ ನೆಲೆಯಲ್ಲಿ ಬಂಧಿತರಾಗಿ ಹಾಜರುಗೊಳಿಸಲ್ಪಟ್ಟ ಸಫಿಯ್ಯ(ರ)ರನ್ನು ಸ್ವತಂತ್ರಗೊಳಿಸಲು ದಹಿಯತ್‌ನೊಂದಿಗೆ ಆದೇಶಿಸಿದರು. ಅವರಿಗೆ ಬೇರೊಬ್ಬ ಕೈದಿಯನ್ನು ನೀಡಿದರು.

ಮುಂದೆ ಪ್ರವಾದಿಯವರು(ಸ) ಸಫಿಯ್ಯ(ಸ)ರಿಗೆ, ಅವರ ಗೋತ್ರದವರು ಸೇರಿದಂತೆ ಯಹೂದಿಯರು ಮಾಡಿದ ಅಕ್ರಮಗಳನ್ನು ಒಂದೊಂದಾಗಿ ವಿವರಿಸಿದರು. ಅವರು ಮಾಡಿದ ದೊಡ್ಡ ವಂಚನೆ, ಸಂಚುಗಳನ್ನು ಕರಾರುವಕ್ಕಾಗಿ ವಿವರಿಸಿದರು. ಅವರ ತಂದೆ, ಪತಿ ಮತ್ತು ಸಹೋದರನನ್ನು ವಧಿಸುವ ತೀರ್ಮಾನವನ್ನು ತೆಗೆದುಕೊಂಡದ್ದು ನ್ಯಾಯಬದ್ಧವಾದ ಕಾರಣಗಳಿಗಾಗಿತ್ತು ಎಂಬುದನ್ನು ಮನವರಿಕೆ ಮಾಡಿಸಿದರು. ಹೀಗೆ ಅವರಿಗೆ ಇಸ್ಲಾಮಿನೊಂದಿಗೆ, ಪ್ರವಾದಿಯವರೊಂದಿಗೆ, ಮುಸ್ಲಿಮರೊಂದಿಗಿದ್ದ ಎಲ್ಲ ರೀತಿಯ ದ್ವೇಷ ಮತ್ತು ವಿರೋಧವು ಸಂಪೂರ್ಣವಾಗಿ ಇಲ್ಲವಾಯಿತು.

ಪ್ರವಾದಿಯವರು(ಸ) ಅವರೊಂದಿಗೆ ಹೀಗೆ ಹೇಳಿದರು, "ನಿನಗೆ ಬೇಕಿದ್ದರೆ ಇಸ್ಲಾಮ್ ಸ್ವೀಕರಿಸಬಹುದು. ಹಾಗೆ ಮಾಡಿದರೆ ಸ್ವತಂತ್ರಳಾಗಿ ನನ್ನ ಜೀವನ ಸಂಗಾತಿಯಾಗಬಹುದು. ಇಲ್ಲದಿದ್ದರೆ ನಿನ್ನನ್ನು ನಾನು ಸ್ವತಂತ್ರಗೊಳಿಸುತ್ತೇನೆ. ಯಹೂದಿ ಧರ್ಮದಲ್ಲಿಯೇ ಇದ್ದುಕೊಂಡು ಊರಿಗೆ ಹೋಗಿ ನಿನ್ನ ಸ್ವಂತ

ಜನರೊಂದಿಗೆ ಸೇರಿಕೊಳ್ಳಬಹುದು." ಇದನ್ನು ಆಲಿಸಿದ ಸಫಿಯ್ಯ(ರ) ಹೀಗೆಂದರು, "ಅಲ್ಲಾಹನ ಪ್ರವಾದಿಗಳೇ, ನಾನು ಸತ್ಯವಿಶ್ವಾಸವನ್ನು ಸ್ವೀಕರಿಸುತ್ತೇನೆ. ತಾವು ನನ್ನನ್ನು ಆಹ್ವಾನಿಸುವುದಕ್ಕಿಂತ ಮೊದಲೇ ನಾನು ತಮ್ಮನ್ನು ದೇವನ ಸಂದೇಶವಾಹಕರೆಂದು ಸಾಕ್ಷಿ ನುಡಿದಿದ್ದೆ. ನನ್ನ ಸ್ವಂತ ಜನರ ನಾಡಿಗೆ ಮರಳುವುದಕ್ಕಿಂತ ಮತ್ತು ಇತರೆಲ್ಲದಕ್ಕಿಂತ ನಾನು ಅಲ್ಲಾಹನನ್ನು, ಅವನ ಪ್ರವಾದಿಯನ್ನು ಆಯ್ಕೆ ಮಾಡುವುದನ್ನು ಇಷ್ಟಪಡುತ್ತೇನೆ. ಅಲ್ಲಾಹ್ ಮತ್ತು ಅವನ ಪ್ರವಾದಿಗಳು ನನಗೆ ಹೆಚ್ಚು ಪ್ರೀತಿಪಾತ್ರ ರಾಗಿದ್ದಾರೆ."

ಇದು ಸಫಿಯ್ಯ(ರ)ರ ನಿಲುವಾಗಿತ್ತು. ಇದಕ್ಕೆ ಪ್ರೇರೇಪಿಸಿದ ಘಟನೆಯು ಈ ರೀತಿ ಉಲ್ಲೇಖಿತವಿದೆ: ಸಫಿಯ್ಯ(ರ)ರ ಮುಖದಲ್ಲಿ ಕೆಲವು ಕಲೆಗಳಿದ್ದವು. ಪ್ರವಾದಿ ಯವರು ಆ ಬಗ್ಗೆ ವಿಚಾರಿಸಿದಾಗ ಸಫಿಯ್ಯ(ರ) ಹೀಗೆ ಹೇಳಿದರು, "ಮದೀನಾದಿಂದ ಪೂರ್ಣಚಂದ್ರ ನನ್ನ ಕಡೆಗೆ ನೇರವಾಗಿ ಬರುತ್ತಿರುವುದನ್ನು, ಅದು ನನ್ನ ಮಡಿಲಿಗೆ ಬಂದು ಬಿದ್ದ ಸ್ವಪ್ನವನ್ನು ಕಂಡಿದ್ದೆ. ನಾನು ಅದನ್ನು ಪತಿಗೆ ತಿಳಿಸಿದೆ. ಆಗ ಅವರಿಗೆ ತುಂಬಾ ಕೋಪ ಬಂತು. 'ನಿನಗೆ ಅರಬರ ರಾಣಿಯಾಗಿ ಲೋಕದಲ್ಲಿ ಮೆರೆಯುವ ಬಯಕೆಯೇ?' ಎನ್ನುತ್ತಾ ನನ್ನ ಮುಖಕ್ಕೆ ಬಲವಾಗಿ ಹೊಡೆದರು. ಇದು ಆ ಗಾಯದ ಕಲೆ."

ಸಫಿಯ್ಯ(ರ) ಸತ್ಯವಿಶ್ವಾಸ ಸ್ವೀಕರಿಸಿದರು ಮತ್ತು ಪ್ರವಾದಿಯವರ(ಸ) ಪತ್ನಿಯ ಪದವಿಯನ್ನು ಕೂಡ ಬಹಳ ಸಂತೋಷದಿಂದ ಸ್ವೀಕರಿಸಿದರು. ಇದು ಹಿಜರಿ ಏಳರಲ್ಲಿ ನಡೆಯಿತು.

ಖೈಬರಿನ ಬಳಿ 'ಸಹಬಾ' ಎಂಬ ಪ್ರದೇಶದಕ್ಕೆ ತಲುಪಿದ ಬಳಿಕ ಪ್ರವಾದಿಯವರು(ಸ) ಅವರೊಂದಿಗೆ ದಾಂಪತ್ಯ ಜೀವನ ಆರಂಭಿಸಿದರು.

ಮುಆವಿಯಾರ(ರ) ಆಡಳಿತ ಕಾಲದಲ್ಲಿ ಹಿಜರಿ 50ರ ರಮಝಾನ್ ತಿಂಗಳಲ್ಲಿ, ಕ್ರಿಸ್ತ ಶಕ 670ರಲ್ಲಿ ಇಹಲೋಕ ಜೀವನ ಮುಗಿಸಿದರು. ಮರ್ವಾನ್ ಬಿನ್ ಹಕಮ್(ರ)ರವರು ಅವರ ಜನಾಝಾ ನಮಾಝ್‌ನ ನೇತೃತ್ವವನ್ನು ವಹಿಸಿದರು.

ಸಫಿಯ್ಯ(ರ) 10 ಪ್ರವಾದಿ ವಚನಗಳನ್ನು ವರದಿ ಮಾಡಿದ್ದಾರೆ. ಅದರಲ್ಲಿ ಒಂದು ಬುಖಾರಿ ಮತ್ತು ಮುಸ್ಲಿಮ್‌ನಲ್ಲಿ ಉಲ್ಲೇಖಗೊಂಡಿದೆ.

ಸುಳ್ಳಾರೋಪಗಳು

ಇಸ್ಲಾಮನ್ನು ವಿಮರ್ಶಿಸುವವರು ಪ್ರವಾದಿಯವರು ಸಫಿಯ್ಯ(ರ)ರನ್ನು ವಿವಾಹವಾದುದರ ಕುರಿತು ಅನೇಕ ಆರೋಪಗಳನ್ನು ಹೊರಿಸುತ್ತಾರೆ. ಅವುಗಳೆಲ್ಲ

ಸುಳ್ಳು ಎಂಬುದು ಅಧಿಕೃತ ಹದೀಸ್‌ಗಳನ್ನು ಮತ್ತು ಚರಿತ್ರೆಯನ್ನು ಪರಿಶೀಲಿಸುವ ಎಲ್ಲರಿಗೂ ಬಹಳ ಸರಳವಾಗಿ ಮನವರಿಕೆಯಾಗುತ್ತದೆ. ಅವರು ಹೊರಿಸುವ ಬಹಳ ಮುಖ್ಯ ಆರೋಪಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಆರೋಪ 1: "ಸಫಿಯ್ಯ(ರ)ರ ಸೌಂದರ್ಯವನ್ನು ಕಂಡು ಆಕರ್ಷಿತರಾದ ಪ್ರವಾದಿಯವರು(ಸ) ಅವರನ್ನು ವಿವಾಹವಾಗಲಿಕ್ಕಾಗಿ, ಅವರ ತಂದೆ ಪತಿ ಮತ್ತು ಸಹೋದರನನ್ನು ಕೊಂದರು."

ಸ್ಪಷ್ಟೀಕರಣ: ಇದು ವಾಸ್ತವಿಕತೆಗೆ ಬಹಳ ವಿರುದ್ಧವಾದ ಆರೋಪವಾಗಿದೆ. ಯುದ್ಧವು ಕೊನೆಗೊಂಡು ಯುದ್ಧ ಕೈದಿಗಳ ಸಂರಕ್ಷಣೆಯ ಹೊಣೆಗಾರಿಕೆಯನ್ನು ತಮ್ಮ ಅನುಯಾಯಿಗಳಿಗೆ ವಹಿಸಿಕೊಟ್ಟು ಸಫಿಯ್ಯ(ರ)ರ ಸಂರಕ್ಷಣೆಯನ್ನು ಬೇರೆಯವರಿಗೆ ವಹಿಸಿಕೊಟ್ಟ ಬಳಿಕ, ಆ ವಿಷಯದಲ್ಲಿ ದೂರುಗಳು ಬರುವ ವರೆಗೆ ಸಫಿಯ್ಯ(ರ) ಎಂಬ ಒಬ್ಬ ಸ್ತ್ರೀ ಇದ್ದಾಳೆ ಎಂಬ ಬಗ್ಗೆ ಕೂಡ ಪ್ರವಾದಿಯವರಿಗೆ(ಸ) ತಿಳಿದಿರಲಿಲ್ಲ. ಈ ವಿಷಯವು ಹದೀಸ್ ಗ್ರಂಥಗಳಲ್ಲಿ, ಪ್ರಮುಖ ಇತಿಹಾಸ ಗ್ರಂಥಗಳಲ್ಲಿ ಯಾವುದೇ ಸಂಶಯಕ್ಕೆಡೆ ಇಲ್ಲದಂತೆ ಸ್ಪಷ್ಟವಾಗಿ ಉಲ್ಲೇಖವಾಗಿದೆ.
(ನಸಾಈ, ಇಮಾಮ್ ಸುದ್ದೀಯವರ ವ್ಯಾಖ್ಯಾನ www.alukah.net)

ಆರೋಪ 2: "ಸಫಿಯ್ಯ(ರ)ರ ಸೌಂದರ್ಯದಿಂದ ಆಕರ್ಷಿತರಾದ ಪ್ರವಾದಿಯವರು(ಸ) ಅವರನ್ನು ದಹ್ಯತುಲ್ ಕಲ್ಬ್(ರ)ರಿಂದ ವಶಪಡಿಸಿಕೊಂಡರು."

ಸ್ಪಷ್ಟೀಕರಣ: ಯಹೂದಿ ಗೋತ್ರದ ನಾಯಕರಾದ ಹುಯಯ್ಯ್‌ರ ಮಗಳಾದ ಸಫಿಯ್ಯ(ರ)ರನ್ನು ಓರ್ವ ಸಾಮಾನ್ಯ ಸೈನಿಕನಿಗೆ ಉಡುಗೊರೆಯಾಗಿ ನೀಡುವುದು ಸರಿಯಲ್ಲವೆಂದು, ಪ್ರವಾದಿಯವರು(ಸ) ಅವರನ್ನು ಸ್ವೀಕರಿಸಬೇಕೆಂದು ಅನುಯಾಯಿಗಳು ಬಂದು ನಿವೇದಿಸುವ ವರೆಗೆ ಸಫಿಯ್ಯ(ರ)ರ ಬಗ್ಗೆ ಪ್ರವಾದಿಯವರಿಗೆ(ಸ) ತಿಳಿದಿರಲಿಲ್ಲ. ಅವರನ್ನು ನೋಡಿರಲೂ ಇಲ್ಲ. ಪ್ರವಾದಿಯವರು(ಸ) ಅವರನ್ನು ವಿವಾಹವಾಗಿದ್ದು ಅನುಯಾಯಿಗಳ ಬೇಡಿಕೆ ನ್ಯಾಯ ಸಮ್ಮತವೆಂದೂ ಪರಿಗಣನೆಗೆ ಅರ್ಹವೆಂದೂ ಮನವರಿಕೆಯಾದ ಬಳಿಕವಾಗಿತ್ತು. ಎಲ್ಲಾ ಹದೀಸ್ ಗ್ರಂಥಗಳಲ್ಲಿಯೂ ಈ ಘಟನೆಯ ಬಗ್ಗೆ ಹೀಗೆಯೇ ಉಲ್ಲೇಖವಿದೆ.

ಆರೋಪ 3: "ಪ್ರವಾದಿಯವರು ಸಫಿಯ್ಯ(ರ)ರನ್ನು ಬಲವಂತ ಪಡಿಸಿ ಇಸ್ಲಾಮ್ ಸ್ವೀಕರಿಸುವಂತೆ ಮಾಡಿದರು ಮತ್ತು ಅವರನ್ನು ಬಲಾತ್ಕಾರವಾಗಿ ಪತ್ನಿಯಾಗಿ ಇಟ್ಟುಕೊಂಡರು."

ಸ್ಪಷ್ಟೀಕರಣ: ಇದು ವಾಸ್ತವಿಕತೆಗೆ ಸಂಪೂರ್ಣ ವಿರುದ್ಧವಾಗಿದೆ. ಪ್ರವಾದಿಯವರು(ಸ) ಅವರಿಗೆ ಯಹೂದಿ ಧರ್ಮದಲ್ಲಿ ಮುಂದುವರಿಯಲು, ತಮ್ಮ ಸ್ವಂತ

ನಾಡಿಗೆ ಹೋಗಿ ಅಲ್ಲಿ ತನ್ನ ಗೋತ್ರದೊಂದಿಗೆ ಸೇರಿ ಜೀವಿಸಲು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದರು. ಹಾಗಿದ್ದರೂ ಯಾವುದೇ ರೀತಿಯ ಒತ್ತಾಯವಿಲ್ಲದೆ, ಸ್ವ-ಇಚ್ಛೆಯಿಂದ ಅವರು ಸತ್ಯವಿಶ್ವಾಸ ಸ್ವೀಕರಿಸಿದರು. ಪ್ರವಾದಿಯವರನ್ನು(ಸ) ಜೀವನ ಸಂಗಾತಿಯಾಗಿ ಲಭಿಸಿದ ವಿಷಯದಲ್ಲಿ ಬಹಳ ಸಂತೋಷ ಪಟ್ಟರು ಮತ್ತು ಆ ಬಗ್ಗೆ ಅವರಿಗೆ ಬಹಳ ಹೆಮ್ಮೆ ಇತ್ತು. (ಮುಗ್ನಿ, ಇಬ್ನು ಖುದಾಮ)

ಆರೋಪ 4: "ಸಫಿಯ್ಯ(ರ)ರ ತಂದೆ ಪತಿ, ಮತ್ತು ಸಹೋದರನನ್ನು ಕೊಂದ ಮರುದಿನವೇ ಪ್ರವಾದಿಯವರು ಅವರನ್ನು ವಿವಾಹವಾಗಲು ಆತುರಪಟ್ಟರು."

ಸ್ಪಷ್ಟೀಕರಣ: ಇದು ಕೂಡ ಶುದ್ಧ ಸುಳ್ಳಾರೋಪವಾಗಿದೆ. ಯುದ್ಧ ಕೈದಿಗಳ ಸಂರಕ್ಷಣೆಯ ಹೊಣೆಗಾರಿಕೆಯನ್ನು ಅನುಯಾಯಿಗಳಿಗೆ ವಹಿಸಿಕೊಟ್ಟ ಬಳಿಕ, ಪ್ರವಾದಿಯವರ(ಸ) ಅನುಯಾಯಿಗಳು, ಸಫಿಯ್ಯ(ರ)ರನ್ನು ತಾವೇ ವಿವಾಹವಾಗ ಬೇಕೆಂದು ಮನವಿ ಮಾಡಿ ಕೊಂಡ ಬಳಿಕ ಪ್ರವಾದಿಯವರು(ಸ) ಅವರನ್ನು ವಿವಾಹ ವಾದರು. ಇದ್ದತ್ ಅವಧಿ ಕಳೆದ ಬಳಿಕ ಮಾತ್ರ ಅವರೊಂದಿಗೆ ದಾಂಪತ್ಯ ಜೀವನ ವನ್ನು ಆರಂಭಿಸಲು ತೀರ್ಮಾನಿಸಿದರು. **(ಬುಖಾರಿ)**

ಅನಸ್(ರ)ರ ತಾಯಿ ಉಮ್ಮು ಸುಲೈಮ್(ರ)ರವರ ಮನೆಯಲ್ಲಿ ಸಫಿಯ್ಯ(ರ) ತಮ್ಮ ಇದ್ದತ್ ಸಮಯವನ್ನು ಕಳೆದರು. ಯುದ್ಧ ಕೈದಿಗಳ ಇದ್ದತ್ ಅವಧಿಯು ಒಂದು ಋತುಸ್ರಾವವು ಕಳೆದು ಶುದ್ಧಿಯಾಗುವ ವರೆಗೆ ಆಗಿದೆ.

ಆರೋಪ 5: "ತಂದೆ, ಪತಿ ಮತ್ತು ಸಹೋದರನನ್ನು ಕೊಲ್ಲುವುದಕ್ಕೆ ನೇತೃತ್ವ ನೀಡಿದ ಕಾರಣಕ್ಕಾಗಿ ಪ್ರವಾದಿಯವರೊಂದಿಗೆ(ಸ) ಜೀವನ ಸಂಗಾತಿಯಾಗಲು ಇಷ್ಟಪಡದ ಸಫಿಯ್ಯ, 'ಸದ್ದ್ ರೌಹಾ' ಎಂಬಲ್ಲಿ ಒಟ್ಟಿಗೆ ಜೀವಿಸಲು ಒಪ್ಪಿಕೊಳ್ಳಲಿಲ್ಲ.

ಸ್ಪಷ್ಟೀಕರಣ: ಇದು ಕೂಡ ಸುಳ್ಳಾರೋಪವಾಗಿದೆ. ಸಫಿಯ್ಯ(ರ)ರವರೇ ಸ್ವತಃ ಇದರ ಹಿಂದಿರುವ ಕಾರಣವನ್ನು ಸ್ಪಷ್ಟಪಡಿಸಿದ್ದಾರೆ. ಖೈಬರ್‌ಗೆ ಬಹಳ ಸಮೀಪದ ಪ್ರದೇಶವಾಗಿರುವ ಕಾರಣ, ತನ್ನ ಪ್ರಿಯ ಪತಿ ಪ್ರವಾದಿಯವರ(ಸ) ವಿರುದ್ಧ ಯಹೂದಿಗಳ ಕಡೆಯಿಂದ ಆಕ್ರಮಣ ನಡೆಯಬಹುದು ಎಂಬ ಭೀತಿಯಿಂದ ಅವರು ಹಾಗೆ ಮಾಡಿದ್ದರು. **(www.alukah.net)**

ಆರೋಪ 6: "ಸಫಿಯ್ಯ(ರ)ರ ಅತ್ಯಂತ ನಿಕಟವರ್ತಿಗಳನ್ನು ವಧಿಸಿ ಬಳಿಕ ಅವರನ್ನೇ ವಿವಾಹ ಮಾಡಿಕೊಂಡ ಕಾರಣಕ್ಕಾಗಿ ತನ್ನೊಂದಿಗೆ ಪ್ರತೀಕಾರ ತೀರಿಸಬಹುದು ಎಂದು ಹೆದರಿ ಪ್ರವಾದಿಯವರು(ಸ) ತನ್ನ ಅನುಯಾಯಿಗಳನ್ನು ತಾನು ವಾಸಿಸುವ ಡೇರೆಯ ಹೊರಗೆ ಕಾವಲು ನಿಲ್ಲಿಸುತ್ತಿದ್ದರು."

ಸ್ಪಷ್ಟೀಕರಣ: ಇದು ಕೂಡ ಕಪೋಲ ಕಲ್ಪಿತ ಆರೋಪವಾಗಿದೆ. ಪ್ರವಾದಿಯವರು

ಯಾರನ್ನೂ ಕಾವಲು ನಿಲ್ಲಿಸಲಿಲ್ಲ. ಯಾರಾದರೂ ಅನುಯಾಯಿ ಕಾವಲು ನಿಂತಿದ್ದರೆ, ಅದು ಶತ್ರುಗಳು ರಾತ್ರಿ ವೇಳೆ ಡೇರೆಯನ್ನು ಆಕ್ರಮಿಸುವ ಸಾಧ್ಯತೆ ಇರುವ ಕಾರಣದಿಂದಾಗಿತ್ತು. ಪ್ರವಾದಿಯವರು(ಸ) ಜೀವನ ಸಂಗಾತಿಯಾಗಿ ಲಭಿಸಿದ ವಿಷಯದಲ್ಲಿ ಸಫಿಯ್ಯ(ರ) ಬಹಳ ಸಂತೃಪ್ತರಾಗಿದ್ದರು.

ಆರೋಪ 7: "ತನ್ನ ಸಮೀಪದ ಬಂಧುಗಳನ್ನು ವಧಿಸುವುದಕ್ಕೆ ನೇತೃತ್ವ ನೀಡಿದ ಪ್ರವಾದಿಯವರು(ಸ) ಸಫಿಯ್ಯ(ರ)ರನ್ನು ವಿವಾಹವಾಗುವ ಮೂಲಕ ಕೇವಲ ಅವರನ್ನು ಮಾತ್ರವಲ್ಲ, ಇಡೀ ಯಹೂದಿ ಸಮುದಾಯವನ್ನೇ ಅಪಮಾನಿಸಿದರು ಮತ್ತು ನೋವುಂಟು ಮಾಡಿದರು."

ಸ್ಪಷ್ಟೀಕರಣ: ಈ ಆರೋಪವನ್ನು ಕೂಡ ಚಾರಿತ್ರಿಕ ವಾಸ್ತವಿಕತೆಗಳು ಸಂಪೂರ್ಣ ವಾಗಿ ಅಲ್ಲಗಳೆಯುತ್ತವೆ. ದೇವನ ಅಂತಿಮ ಸಂದೇಶವಾಹಕ ತನ್ನ ಜೀವನ ಸಂಗಾತಿಯಾಗಿ ಸ್ವೀಕರಿಸುವ ಮೂಲಕ ನನ್ನನ್ನು ಅತಿ ಹೆಚ್ಚಾಗಿ ಗೌರವಿಸಿದ್ದಾರೆ ಮತ್ತು ಪರಿಗಣಿಸಿದ್ದಾರೆ ಎಂಬುದರ ಬಗ್ಗೆ ಸರಿಯಾದ ಪ್ರಜ್ಞೆ ಮತ್ತು ದೃಢತೆ ಸಫಿಯ್ಯ(ರ)ರಿಗಿತ್ತು. ಪ್ರವಾದಿಯವರೊಂದಿಗಿನ ಅವರ ದಾಂಪತ್ಯ ಜೀವನವು ಬಹಳ ಪ್ರೀತಿ ವಿಶ್ವಾಸದಿಂದ ಕೂಡಿತ್ತು. ಮರಣಾಸನ್ನರಾದ, ರೋಗಪೀಡಿತರಾಗಿದ್ದ ಪ್ರವಾದಿಯವರು(ಸ) ಸಂಕಷ್ಟ ಪಡುವುದನ್ನು ಕಂಡು ಅವರು ಹೀಗೆ ಹೇಳಿದ್ದರು, "ತಾವು ಅನುಭವಿಸುವ ನೋವನ್ನು ತಮ್ಮಿಂದ ನನಗೆ ಪಡೆದುಕೊಳ್ಳಲಿಕ್ಕೆ ಸಾಧ್ಯವಾಗಿದ್ದರೆ ಚೆನ್ನಾಗಿತ್ತು ಎಂಬುದಾಗಿ ನಾನಂದುಕೊಳ್ಳುತ್ತಿದ್ದೇನೆ." ಅವರ ಈ ಹೇಳಿಕೆಯನ್ನು ಪ್ರವಾದಿಯವರು(ಸ) ಮನಃಪೂರ್ವಕವಾಗಿ ಸ್ವೀಕರಿಸಿದರು ಮತ್ತು ಅವರ ಪ್ರಾಮಾಣಿಕತೆಯನ್ನು ಎತ್ತಿ ಹೇಳಿದರು. **(ಉಲ್ಲೇಖ: ಇಬ್ನು ಹಜರುಲ್ ಅಸ್ಖಲಾನಿ)**

ಪ್ರವಾದಿ ಮತ್ತು ಸಫಿಯ್ಯ(ರ)ರ ಪರಸ್ಪರ ಸಂಬಂಧ ಎಷ್ಟು ಸುದೃಢವಾಗಿತ್ತು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಇಸ್ಲಾಮ್ ಸ್ವೀಕರಿಸಿದ ಬಳಿಕದ ಸಫಿಯ್ಯ(ರ)ರ ಜೀವನದ ಅನುಭವಗಳು ಮತ್ತು ಅವರು ನೀಡಿದ ಕೊಡುಗೆಗಳು ಅವರೊಂದಿಗಿನ ವಿವಾಹದ ಹೆಸರಿನಲ್ಲಿ ಪ್ರವಾದಿಯವರನ್ನು(ಸ) ವಿಮರ್ಶಿಸುವವರು ಹೊರಿಸುವ ಎಲ್ಲಾ ಆರೋಪಗಳನ್ನು ತೊಡೆದು ಹಾಕುತ್ತವೆ.

ಪ್ರವಾದಿಯವರ(ಸ) ಸಫಿಯ್ಯ(ರ)ರೊಂದಿಗಿನ ವಿವಾಹವು ಯಹೂದಿ ಗೋತ್ರ ಗಳೊಂದಿಗಿನ ಸಂಬಂಧ ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿತು. ಇಸ್ಲಾಮಿನೊಂದಿಗೆ ಅವರಿಗಿದ್ದ ಹಗೆತನ ಕಡಿಮೆಯಾಗಲು ಮತ್ತು ಅವರ ಪೈಕಿ ಅನೇಕರು ಸನ್ಮಾರ್ಗದೆಡೆಗೆ ಬರಲು ಇದು ಕಾರಣವಾಯಿತು. ಇದರ ಜೊತೆಗೆ

ಇಸ್ಲಾಮಿ ಸಮಾಜಕ್ಕೆ ಮಹತ್ತರ ಕೊಡುಗೆಗಳನ್ನು ನೀಡಲು ಸಫಿಯ್ಯ(ರ)ರಿಗೆ ಸಾಧ್ಯವಾಯಿತು. ಚರಿತ್ರೆಯಲ್ಲಿ ಬಹಳ ದೊಡ್ಡ ಹೊಣೆಗಾರಿಕೆಯನ್ನು ನಿರ್ವಹಿಸಲು ಅವರಿಗೆ ಅವಕಾಶ ಲಭಿಸಿತು. ಮೂರನೆಯ ಖಲೀಫಾ ಉಸ್ಮಾನ್ ಬಿನ್ ಅಫ್ಫಾನ್(ರ)ರಿಗೆ ಮುತ್ತಿಗೆ ಹಾಕಲ್ಪಟ್ಟಾಗ ಅವರಿಗೆ ಹಸನ್ ಬಿನ್ ಅಲಿಯವರ(ರ) ಮೂಲಕ ಆಹಾರವನ್ನು ತಲುಪಿಸಿಕೊಟ್ಟರು. ಅವರ ಹೃದಯ ವೈಶಾಲ್ಯತೆ, ಸತ್ಯಸಂಧತೆ, ನ್ಯಾಯ ಪ್ರಿಯತೆ, ವಿನಯ, ಪ್ರಾಮಾಣಿಕತೆ, ಆತ್ಮ ನಿಯಂತ್ರಣ ಮುಂತಾದ ಗುಣಗಳು ಇಸ್ಲಾಮಿ ಸಮಾಜಕ್ಕೆ ಮಹಾ ಕೊಡುಗೆಗಳನ್ನು ನೀಡಿತು. ಅವರು ಬುದ್ಧಿಶಕ್ತಿಯಲ್ಲಿ ಎಲ್ಲರನ್ನು ಮೀರಿಸಿದ್ದರು. ಆದುದರಿಂದಾಗಿಯೇ ಇಸ್ಲಾಮಿನ ಕುರಿತು ಇರುವಂತಹ ಸಂಶಯಗಳನ್ನು ನಿವಾರಿಸಲಿಕ್ಕಾಗಿ ಪ್ರಮುಖ ವ್ಯಕ್ತಿಗಳು ಕೂಡ ಅವರನ್ನು ಭೇಟಿಯಾಗುತ್ತಿದ್ದರು. ಹೀಗೆ ಇಸ್ಲಾಮ್ ಮತ್ತು ಇಸ್ಲಾಮೀ ಸಮಾಜಕ್ಕೆ ಮಹತ್ತರವಾದ ಕೊಡುಗೆಗಳನ್ನು ನೀಡಲು ಪ್ರವಾದಿಯವರ(ಸ) ಸಫಿಯ್ಯ(ರ)ರೊಂದಿಗಿನ ವಿವಾಹವು ಕಾರಣವಾಯಿತು. ಅವರು ಸತ್ಯವಿಶ್ವಾಸಿಗಳ ಮಾತೆ ಎಂಬ ನೆಲೆಯಲ್ಲಿ ಚರಿತ್ರೆಯಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದರು. ಪರಲೋಕದಲ್ಲಿ ಅಲ್ಲಾಹನ ಪ್ರೀತಿಪಾತ್ರರಿಗೆ ಸಿಗುವಂತಹ ಪ್ರತಿಫಲಕ್ಕೂ ಅರ್ಹರಾದರು.

❖ ❖ ❖ ❖

ಅಧ್ಯಾಯ 9

ಶತ್ರುಗಳನ್ನು ಮಿತ್ರರನ್ನಾಗಿಸಿದ ವಿವಾಹಗಳು

ಪ್ರವಾದಿಯವರು ಒಂಬತ್ತನೆಯದಾಗಿ ವಿವಾಹವಾದುದು ಬನೂ ಮುಸ್ತಲಿಕ್ ಗೋತ್ರದ ಹಾರಿಸ್‌ರ ಮಗಳು ಜುವೈರಿಯಾ(ರ)ರನ್ನು.

ಬನೂ ಮುಸ್ತಲಿಕ್ ಮದೀನಾವನ್ನು ಆಕ್ರಮಿಸುವ ಸನ್ನಾಹದಲ್ಲಿದ್ದಾರೆ, ಪರಿಸರದ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಒಂದುಗೂಡಿಸುತ್ತಿದ್ದಾರೆ ಎಂಬ ಸುದ್ದಿಯು ಪ್ರವಾದಿಯವರಿಗೆ(ಸ) ತಲುಪಿತು. ಆಗ ಅವರು(ಸ) ಅನುಯಾಯಿಗಳನ್ನು ಸೇರಿಸಿ ಕೊಂಡು ಬನೂ ಮುಸ್ತಲಿಕರ ಗೂಢತಂತ್ರವನ್ನು ವಿಫಲಗೊಳಿಸಲು ಸೇನಾ ಕಾರ್ಯಾಚರಣೆ ನಡೆಸಿದರು. ಮುರೈಸಿಅ ಜಲಾಶಯದ ಸಮೀಪ ಮುಸ್ಲಿಮರು ವೈರಿಗಳನ್ನು ಎದುರಿಸಿದರು. ಮುಸ್ಲಿಮರೊಡನೆ ಹೆಚ್ಚು ಕಾಲ ಹೋರಾಡಲು ವೈರಿಗಳಿಗೆ ಸಾಧ್ಯವಾಗಲಿಲ್ಲ. ಯುದ್ಧದಲ್ಲಿ ಬಂಧಿಗಳಾದ 600 ಕೈದಿಗಳ ಪೈಕಿ ಜುವೈರಿಯಾ(ರ) ಒಬ್ಬರಾಗಿದ್ದರು. ಅವರ ಪತಿ ಮುಸಾಫಿ ಬಿನ್ ಸಫ್ವಾನ್ ಯುದ್ಧದಲ್ಲಿ ಹತರಾದರು.

ಮಗಳು ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ವಿಷಯ ತಿಳಿದ ತಂದೆ ಹಾರಿಸ್ ಪ್ರವಾದಿಯವರ(ಸ) ಬಳಿ ಬಂದು ಹೀಗೆಂದರು, "ನನ್ನ ಮಗಳಿಗೆ ದಾಸಿಯಾಗಿ ಜೀವಿಸಲು ಸಾಧ್ಯವಿಲ್ಲ. ಅದು ನಮ್ಮ ಕುಲಗೌರವಕ್ಕೆ ಭೂಷಣವಲ್ಲ. ಆದ್ದರಿಂದ ಮಗಳನ್ನು ಬಿಡುಗಡೆ ಮಾಡಿ ನನ್ನ ಸಂಗಡ ಕಳುಹಿಸಿರಿ. ಅದಕ್ಕೆ ಎಷ್ಟು ಬೇಕಾದರೂ ಪರಿಹಾರ ಧನವನ್ನು ನೀಡಬಲ್ಲೆ."

ಪ್ರವಾದಿಯವರು(ಸ) ಯಾವ ಪರಿಹಾರಧನವನ್ನೂ ಸ್ವೀಕರಿಸದೆ ಜುವೈರಿಯಾ(ರ) ರನ್ನು ಸ್ವತಂತ್ರಗೊಳಿಸಿದರು. ಅವರ ಈ ಸೌಜನ್ಯದ ವರ್ತನೆಯಿಂದ ಆಕರ್ಷಿತರಾಗಿ ಹಾರಿಸ್ ತನ್ನ ಇಬ್ಬರು ಮಕ್ಕಳೊಂದಿಗೆ ಇಸ್ಲಾಮ್ ಸ್ವೀಕರಿಸಿದರು. ಬಳಿಕ ಜುವೈರಿಯಾ(ರ)ರನ್ನು ಪ್ರವಾದಿಯವರಿಗೆ(ಸ) ವಿವಾಹ ಮಾಡಿಕೊಟ್ಟರು. ಈಗಾಗಲೇ ಏಳು ಪತ್ನಿಯರನ್ನು ಹೊಂದಿರುವ ವ್ಯಕ್ತಿ ಎಂಟನೆಯವರಾಗಿ ತನ್ನ ಮಗಳನ್ನು ವಿವಾಹವಾದುದು ಹಾರಿಸ್‌ರಿಗೆ ಬಹಳ ಸಂತೃಪ್ತಿಯ ವಿಷಯವೇ ಆಗಿತ್ತು. ಜುವೈರಿಯಾ(ರ)ರವರೇ ವಿವಾಹ ಪ್ರಸ್ತಾಪವನ್ನು ಪ್ರವಾದಿಯವರ(ಸ) ಮುಂದಿರಿಸಿದ್ದರೆಂಬ

ಐತಿಹಾಸಿಕ ಉಲ್ಲೇಖಗಳೂ ಇವೆ.

ಯುದ್ಧಕೈದಿಗಳಾಗಿ ಸಿಕ್ಕಿದ ಸ್ತ್ರೀಯರನ್ನು ದಾಸಿಯರನ್ನಾಗಿ ಇಟ್ಟುಕೊಳ್ಳುವ ಸಂಪ್ರದಾಯ ಅಂದು ಜಾರಿಯಲ್ಲಿತ್ತು. ಅಂದಿನ ಕಾಲದಲ್ಲಿ ಅಪರಿಚಿತವಾಗಿದ್ದ ಈ ಉದಾರವಾದ ನೀತಿಯನ್ನು ಅವರ ಅನುಯಾಯಿಗಳು ಕೂಡ ಅನುಸರಿಸಿದರು. ಹೀಗೆ ಅವರ ವಶದಲ್ಲಿದ್ದ ನೂರಾರು ಯುದ್ಧ ಕೈದಿಗಳನ್ನು ಸ್ವತಂತ್ರಗೊಳಿಸಿದರು. ಆದುದರಿಂದ ಪ್ರವಾದಿಯವರ(ಸ) ಪತ್ನಿ ಆಯಿಶಾ(ರ)ರವರು ಅವರ ಬಗ್ಗೆ ಈ ರೀತಿ ಹೇಳುತ್ತಾರೆ, "ಸ್ವಗೋತ್ರಕ್ಕೆ ಜುವೈರಿಯರಷ್ಟು ಅನುಗ್ರಹೀತರಾದ ಬೇರೆ ಹೆಣ್ಣು ಇರಲಿಕ್ಕಿಲ್ಲ. ಅವರ ಕಾರಣದಿಂದಾಗಿ ನೂರರಷ್ಟು ಕುಟುಂಬಗಳು ಸ್ವತಂತ್ರವಾದವು." ಇಸ್ಲಾಮ್ ಮತ್ತು ಇಸ್ಲಾಮೀ ಸಮಾಜಕ್ಕೆ ಬಹಳ ಮಹತ್ವಪೂರ್ಣವಾದ ಕೊಡುಗೆಗಳನ್ನು ನೀಡಲು ಇದು ಕಾರಣವಾಯಿತು. ಬನೂ ಮುಸ್ತಲಿಕ್ ಗೋತ್ರದ ಹೆಚ್ಚಿನ ಜನರು ಇಸ್ಲಾಮ್ ಸ್ವೀಕರಿಸಿದರು.

ಮದೀನಾ ಪರಿಸರ ಪ್ರದೇಶದಲ್ಲಿ ವಾಸವಾಗಿದ್ದ ವಿರೋಧಿಗಳು ಪ್ರವಾದಿಯವರ(ಸ) ಅನುಯಾಯಿಗಳಾಗಿ ಮಾರ್ಪಟ್ಟ ಕಾರಣ, ಇಸ್ಲಾಮೀ ಸಮಾಜ ಮತ್ತು ರಾಜಕೀಯ ವ್ಯವಸ್ಥೆ ಸಬಲೀಕರಣಗೊಂಡಿತು. ಇದು ಸುರಕ್ಷೆ ಮತ್ತು ಅಭಿವೃದ್ಧಿಗೆ ಕಾರಣವಾಯಿತು.

ಒಂದು ಗೋತ್ರದ ನಾಯಕನ ಮಗಳಾಗಿ ಜನಿಸಿ ಘನತೆಯ ಜೀವನವನ್ನು ಸಾಗಿಸಿದ್ದ ಜುವೈರಿಯಾ(ರ), ಇಸ್ಲಾಮ್ ಸ್ವೀಕರಿಸಿದ ಬಳಿಕ ಬಹಳ ಸಾತ್ವಿಕರಾಗಿ ಮಾರ್ಪಟ್ಟರು. ಪ್ರಾರ್ಥನೆಗಳಲ್ಲಿ, ಆರಾಧನೆಗಳಲ್ಲಿ, ದೇವನಾಮಸ್ಮರಣೆಯಲ್ಲಿ ತಲ್ಲೀನರಾಗಿರುತ್ತಿದ್ದರು. ಹಿಜರಿ 55ರಲ್ಲಿ ತಮ್ಮ 65ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಜುವೈರಿಯಾ(ರ)ರನ್ನು ಅವರ ತಂದೆಯವರ ಒಪ್ಪಿಗೆಯ ಮೇರೆಗೆ ಪ್ರವಾದಿಯವರು(ಸ) ವಿವಾಹ ಮಾಡಿ ಕೊಂಡಿದ್ದರು ಎಂಬುದು ವಿವರಣೆಯ ಅಗತ್ಯವಿಲ್ಲದ ರೀತಿಯಲ್ಲಿ ಸ್ಪಷ್ಟವಿದೆ.

ಕುರೈಶರನ್ನು ಆಕರ್ಷಿಸಿದ ವಿವಾಹ ಸಂಬಂಧ

ಪ್ರವಾದಿಯವರು 11ನೆಯದಾಗಿ ಮೈಮೂನ(ರ)ರನ್ನು ವಿವಾಹವಾದರು. ಅವರ ಮೊದಲ ಹೆಸರು ಬರ್ರ ಎಂದಾಗಿತ್ತು. ವಿವಾಹವಾದ ಬಳಿಕ ಪ್ರವಾದಿಯವರು ಅವರ ಹೆಸರನ್ನು ಬದಲಾಯಿಸಿದರು. ತಂದೆಯ ಹೆಸರು ಹಾರಿಸ್, ಹಿಲಾಲ್ ಗೋತ್ರದ ವ್ಯಕ್ತಿ. ಪ್ರಮುಖ ಗೋತ್ರಕ್ಕೆ ಸೇರಿದ ತಾಯಿಯ ಹೆಸರು ಹಿಂದ್. ಹಾರಿಸ್‌ಗೆ ಒಟ್ಟು 16 ಹೆಣ್ಣು ಮಕ್ಕಳಿದ್ದರು. ಪ್ರವಾದಿಯವರ(ಸ) ಚಿಕ್ಕಪ್ಪಂದಿರಾದ ಅಬ್ಬಾಸ್(ರ) ಮತ್ತು ಹಂಝ(ರ)ರವರು ಮೈಮೂನ(ರ)ರ ಸೋದರಿಯರನ್ನು ವಿವಾಹವಾಗಿದ್ದರು.

ಪ್ರವಾದಿತ್ವಕ್ಕಿಂತ ಆರು ವರ್ಷ ಮೊದಲು ಮೈಮೂನಾ(ರ) ಜನಿಸಿದರು.

ಮೈಮೂನ(ರ)ರ ಪ್ರಥಮ ವಿವಾಹವು ಅಮ್ರ್‌ರ ಮಗ ಮಸ್‌ಊದ್‌ರೊಂದಿಗೆ ನಡೆಯಿತು. ಅವರ ಮರಣಾನಂತರ ಅಬೂ ರಹಮ್ ಎಂಬವರೊಂದಿಗೆ ವಿವಾಹ ವಾಯಿತು. ಅಬೂ ರಹಮ್ ನಿಧನರಾದಾಗ ಮೈಮೂನ(ರ)ರನ್ನು ಪ್ರವಾದಿ ಮುಹಮ್ಮದ್(ಸ)ರಿಗೆ ವಿವಾಹ ಮಾಡಿ ಕೊಡಬೇಕೆಂದು ಅವರ ಕುಟುಂಬದವರು ಆಗ್ರಹಿಸಿದರು. ಪ್ರವಾದಿಯವರ(ಸ) ಚಿಕ್ಕಪ್ಪ ಮತ್ತು ಮೈಮೂನ(ರ)ರ ಸಹೋದರಿಯ ಪತಿಯಾದ ಅಬ್ಬಾಸ್(ರ)ರವರು ವಿವಾಹದ ವಿಷಯವನ್ನು ಪ್ರವಾದಿಯವರ(ಸ) ಮುಂದಿಟ್ಟರು.

ಪ್ರವಾದಿಯವರು(ಸ) ಅದಕ್ಕೆ ಒಪ್ಪಿಗೆಯನ್ನು ನೀಡಿದರು. ಖೈಬರ್ ಯುದ್ಧ ಆಸನ್ನವಾದ ಕಾರಣದಿಂದಾಗಿ ವಿವಾಹವನ್ನು ಮುಂದೂಡಲಾಯಿತು. ಹುದೈಬಿಯಾ ಒಪ್ಪಂದದ ಶರತ್ತಿನಂತೆ ಹಿಜರಿ 7ನೇ ವರ್ಷ ಪ್ರವಾದಿ(ಸ) ಮತ್ತು ಸಹಾಬಿಗಳು ಉಮ್ರ ನಿರ್ವಹಿಸಲಿಕ್ಕಾಗಿ ಮಕ್ಕಾಗೆ ಹೊರಟರು. ಮಕ್ಕಾದಲ್ಲಿ ಪ್ರವಾದಿಯವರು ಮೈಮುನರನ್ನು ವಿವಾಹವಾದರು. ಸರೀಫ್‌ನಲ್ಲಿ ಅವರನ್ನು ಭೇಟಿಯಾದರು. ಬಳಿಕ ಪ್ರವಾದಿಯವರು(ಸ) ಮೈಮೂನ(ರ)ರನ್ನು ಸಂಗಡ ಕರೆದುಕೊಂಡು ಮದೀನಾಕ್ಕೆ ಮರಳಿದರು.

ಮೈಮೂನ(ರ)ರನ್ನು ವಿವಾಹವಾದ ಬಳಿಕ ಕುರೈಶರ ಇಸ್ಲಾಮಿನೊಂದಿಗಿನ ವಿರೋಧವು ಕಡಿಮೆಯಾಯಿತು. ಅದರ ಬಳಿಕ ಅವರ ಸಹೋದರಿ ಪುತ್ರ ಮತ್ತು ಪ್ರಖ್ಯಾತ ಯೋಧ ಖಾಲಿದ್ ಬಿನ್ ವಲೀದ್(ರ) ಇಸ್ಲಾಮ್ ಸ್ವೀಕರಿಸಿದರು.

ಮೈಮೂನ(ರ)ರಿಗೆ ಇಸ್ಲಾಮಿನ ಬಗ್ಗೆ ಅಪಾರ ಜ್ಞಾನವಿತ್ತು. ಆದುದರಿಂದಾಗಿ ಒಮ್ಮೆ ಪ್ರಮುಖ ಸಹಾಬಿ ಇಬ್ನು ಅಬ್ಬಾಸ್(ರ)ರನ್ನು ಕೂಡ ತಿದ್ದಲು ಅವರಿಗೆ ಸಾಧ್ಯವಾಯಿತು. ಸದಾ ಯಾವುದಾದರೂ ಕೆಲಸದಲ್ಲಿ ತಲ್ಲೀನರಾಗಿರುತ್ತಿದ್ದ ಮೈಮೂನ(ರ)ರನ್ನು ಸಹಾಬಿಗಳು ತಮ್ಮ ಸಂಶಯ ನಿವಾರಣೆಗಾಗಿ ಸಮೀಪಿಸುತ್ತಿದ್ದರು. 46 ಪ್ರವಾದಿ ವಚನಗಳನ್ನು ಇವರು ವರದಿ ಮಾಡಿರುತ್ತಾರೆ.

ಹಿಜರಿ 51ನೇ ವರ್ಷದಲ್ಲಿ ಮೈಮೂನ(ರ)ರ ಇಹಲೋಕ ವಾಸ ಕೊನೆಗೊಂಡಿತು. ವಿವಾಹದ ಬಳಿಕ ಪ್ರವಾದಿಯವರನ್ನು(ಸ) ಪ್ರಥಮವಾಗಿ ಭೇಟಿಯಾದ ಸರೀಫ್‌ನಲ್ಲಿಯೇ ಮೈಮುನಾ ನಿಧನರಾದರು. ಇಬ್ನು ಅಬ್ಬಾಸ್(ರ)ರು ಜನಾಝು ನಮಾಝ್‌ನ ನೇತೃತ್ವ ವಹಿಸಿದರು.

ಮಕ್ಕಾದಲ್ಲಿ ಶತ್ರುಗಳ ವಿರೋಧವು ತೀವ್ರವಾದಾಗ ಅದನ್ನು ಕಡಿಮೆಗೊಳಿಸಲು ಪ್ರವಾದಿಯವರು(ಸ) ಮೈಮೂನ(ರ)ರನ್ನು ವಿವಾಹವಾದುದು ಬಹಳ ಸಹಕಾರಿ

ಯಾಯಿತು. ಈ ಉದ್ದೇಶವೂ ಪ್ರಸ್ತುತ ವಿವಾಹದ ಹಿಂದಿತ್ತು. ಎರಡು ಬಾರಿ ವಿವಾಹವಾಗಿ ವಿಧವೆಯಾಗಿದ್ದ ಅವರ ಸಂಕಷ್ಟವನ್ನು ದೂರ ಮಾಡುವುದು ಮತ್ತು ಆ ಮೂಲಕ ಅವರ ಸಹೋದರಿಯರ ಪತಿಯಂದಿರು ಮತ್ತು ತಮ್ಮ ಇಬ್ಬರು ಚಿಕ್ಕಪಂದಿರ ಕಷ್ಟವನ್ನು ದೂರಿಕರಿಸಲು ಅವರಿಗೆ ಸಾಧ್ಯವಾಯಿತು. ಜೊತೆಗೆ ಹೊಸ ತಲೆಮಾರಿಗೆ ಇಸ್ಲಾಮಿನ ಜ್ಞಾನವನ್ನು ಪ್ರಚಾರ ಮಾಡಲು ಮೈಮೂನ(ರ)ರಿಗೆ ಪ್ರವಾದಿ ಪತ್ನಿಯ ಪದವಿಯು ಬಹಳ ಪ್ರಯೋಜನಕಾರಿಯಾಯಿತು. ಈ ಎಲ್ಲಾ ಕಾರಣಗಳಿಂದ ವಿರೋಧಿಗಳಿಗೂ ಕೂಡ ಈ ವಿವಾಹದ ಕುರಿತು ಯಾವುದೇ ಆರೋಪವನ್ನು ಮಾಡಲು ಸಾಧ್ಯವಾಗಲಿಲ್ಲ.

❖ ❖ ❖ ❖

ಅಧ್ಯಾಯ 10

ಮುಕೌಕಿಸ್‌ರ ಉಡುಗೊರೆ

ಪ್ರವಾದಿಯವರು(ಸ) ತಮ್ಮೊಂದಿಗೆ ಗುಲಾಮ ಸ್ತ್ರೀಯರನ್ನು ಇರಿಸಿಕೊಂಡಿದ್ದರು ಎಂಬುದಕ್ಕೆ ಉದಾಹರಣೆಯಾಗಿ ಮಾರಿಯ ಕಿಬ್ತಿಯ(ರ)ರನ್ನು ವಿಮರ್ಶಕರು ಉಲ್ಲೇಖಿಸುತ್ತಾರೆ. ಆ ಕಾಲದಲ್ಲಿ ಗುಲಾಮ ಸ್ತ್ರೀಯನ್ನು ಇರಿಸಿಕೊಳ್ಳುವುದು ಅಸಹಜ, ಆಕ್ಷೇಪಾರ್ಹ, ಖಂಡನೀಯ ಅಥವಾ ಅಶ್ಲೀಲ ವಿಷಯವಾಗಿರಲಿಲ್ಲ.

ಸಮಾಜದಲ್ಲಿ ಎಲ್ಲ ಪ್ರಮುಖ ವ್ಯಕ್ತಿಗಳು ದಾಸಿಯರನ್ನು ಇಟ್ಟುಕೊಂಡಿದ್ದರು. ಆದರೆ ಪ್ರವಾದಿ ಮುಹಮ್ಮದ್(ಸ)ರು ಮಾರಿಯ ಕಿಬ್ತಿಯ(ರ)ರನ್ನು ವಿವಾಹ ಮಾಡಿ ಕೊಂಡ ಬಳಿಕ ಮಾತ್ರ ತಮ್ಮ ಜತೆ ಇರಿಸಿಕೊಂಡರು. ವಿವಾಹವು ಸಾಧಾರಣ ರೀತಿಗಿಂತ ಭಿನ್ನವಾಗಿತ್ತು. ಮುಖೌಕಿಸ್ ರಾಜನು ಅವರಿಗೆ ಉಡುಗೊರೆಯಾಗಿ ಮಾರಿಯ ಕಿಬ್ತಿಯ(ರ)ರನ್ನು ನೀಡಿದಾಗ ಅದು ವಿವಾಹ ಮಾಡಿಕೊಟ್ಟಂತೆ ಆಯಿತು. ಪ್ರವಾದಿಯವರು(ಸ) ಅವರನ್ನು ಸ್ವೀಕರಿಸುವುದರೊಂದಿಗೆ ವಿವಾಹ ಕರ್ಮವು ಪೂರ್ತಿಯಾಯಿತು. ಸಾಂಕೇತಿಕ ಭಾಷೆಯಲ್ಲಿ ಹೇಳುವುದಾದರೆ ಈಜಾಬ್ ಮತ್ತು ಕುಬೂಲ್.

ಮಾರಿಯ(ರ)ರ ತಂದೆ ಕಾಪ್ಟಿಕ್ ಕ್ರಿಶ್ಚಿಯನ್. ಮಾತೆ ಗ್ರೀಕ್ ಮಹಿಳೆ. ಅವರು ಸಣ್ಣಪ್ರಾಯದಲ್ಲಿಯೇ ಈಜಿಪ್ಟಿನ ಚಕ್ರವರ್ತಿ ಮುಖೌಕಿಸರ ಅರಮನೆಯಲ್ಲಿ ಬೆಳೆದಿದ್ದರು. ಮುಖೌಕಿಸ್ ಚಕ್ರವರ್ತಿ ಪ್ರವಾದಿಯವರಿಗೆ(ಸ) ಮಾರಿಯ ಕಿಬ್ತಿಯ(ರ)ರನ್ನು ಉಡುಗೊರೆಯಾಗಿ ನೀಡಿದರು. ಆ ಕಾಲದಲ್ಲಿ ಹೀಗೆ ಉಡುಗೊರೆಯಾಗಿ ಸಿಕ್ಕಿದ ಹೆಣ್ಣು ಮಕ್ಕಳನ್ನು ಗುಲಾಮರಾಗಿ ಉಪಯೋಗಿಸುವುದು ಸಂಪ್ರದಾಯವಾಗಿತ್ತು. ಆದರೆ ಪ್ರವಾದಿಯವರು(ಸ) ಅವರನ್ನು ಪತ್ನಿಯಾಗಿ ಸ್ವೀಕರಿಸಿದರು. ಹಿಜರಿ 9ನೇ ವರ್ಷದಲ್ಲಿ ಪ್ರವಾದಿಯವರಿಗೆ ಮಾರಿಯಾರಿಂದ ಇಬ್ರಾಹೀಮ್ ಎಂಬ ಮಗು ಜನಿಸಿತು.

ಪ್ರವಾದಿಯವರಿಗೆ(ಸ) ಖದೀಜ(ರ)ರಿಂದಲ್ಲದೆ ಮಗು ಜನಿಸಿದ್ದು ಮಾರಿಯ(ರ) ರಿಂದ ಮಾತ್ರ. ಪುತ್ರನ ಜನನವು ಪ್ರವಾದಿಯವರನ್ನು ಬಹಳ ಸಂತೋಷಪಡಿಸಿತು.

ಆದರೆ ಆ ಸಂತೋಷ ಬಹಳ ಕಾಲ ಉಳಿಯಲಿಲ್ಲ. ಎಂಟು ತಿಂಗಳು ಪ್ರಾಯವಾದಾಗ ಮಾರಕವಾದ ರೋಗ ಬಂದು ಇಬ್ರಾಹೀಮ್ ಮರಣ ಹೊಂದಿದರು. ಅಂದು ಸೂರ್ಯಗ್ರಹಣವು ಸಂಭವಿಸಿದ್ದು, ಮರಣದ ಕಾರಣದಿಂದಾಗಿತ್ತು ಎಂಬುದಾಗಿ ಕೆಲವರು ತಪ್ಪು ಕಲ್ಪನೆಗೊಳಗಾದರು. ಪ್ರವಾದಿಯವರು(ಸ) ಕೂಡಲೇ ಅದನ್ನು ತಿದ್ದಿ ಸರಿಪಡಿಸಿದರು.

ತನಗೆ ಮಗುವನ್ನು ನೀಡಿದ ಮಾರಿಯ ಕಿಬ್ತಿಯ(ರ)ರನ್ನು ಪ್ರವಾದಿಯವರು(ಸ) ತುಂಬಾ ಪ್ರೀತಿಸುತ್ತಿದ್ದರು. ಗೌರವಿಸುತ್ತಿದ್ದರು. ಸತ್ಯ ವಿಶ್ವಾಸಿಗಳ ಆ ಮಾತೆಯನ್ನು ಅವರ ಅನುಯಾಯಿಗಳು ಕೂಡ ಬಹಳ ಗೌರವಾದರದಿಂದ ಕಾಣುತ್ತಿದ್ದರು.

ಮೂರು ವರ್ಷಗಳ ವರೆಗೆ ಮಾತ್ರ ಪ್ರವಾದಿಯವರೊಂದಿಗೆ(ಸ) ಜೀವಿಸುವ ಅವಕಾಶ ಅವರಿಗೆ ಲಭಿಸಿತು. ಪ್ರವಾದಿಯವರ(ಸ) ನಿಧನಾ ನಂತರ ಐದು ವರ್ಷ ಅವರು ಜೀವಿಸಿದ್ದರು. ಆ ಕಾಲದಲ್ಲೆಲ್ಲಾ ಆರಾಧನೆಗಳಲ್ಲಿ ಮುಳುಗಿ ಮನೆಯಲ್ಲಿಯೇ ಇರುತ್ತಿದ್ದರು. ಅವರ ನಿಧನಾನಂತರ ದ್ವಿತೀಯ ಖಲಿಫರಾದ ಉಮರ್ ಫಾರೂಕ್(ರ) ರವರು ಅವರ ಜನಾಝ ನಮಾಝ್ ನೇತೃತ್ವವನ್ನು ವಹಿಸಿದ್ದರು.

ವಿಮರ್ಶಕರು ಪ್ರಚಾರಪಡಿಸುತ್ತಿರುವಂತೆ ಪ್ರವಾದಿಯವರು ಅನೇಕ ದಾಸಿಯರನ್ನು ತಮ್ಮೊಂದಿಗೆ ಇಟ್ಟುಕೊಂಡಿರಲಿಲ್ಲ. ಉಡುಗೊರೆಯಾಗಿ ಲಭಿಸಿದ ಮಾರಿಯರನ್ನು ಕೂಡ ಗುಲಾಮರಾಗಿ ಇಟ್ಟುಕೊಳ್ಳಲಿಲ್ಲ. ವಿವಾಹವನ್ನು ಮಾಡಿಕೊಳ್ಳುವ ಮೂಲಕ ಜೀವನ ಸಂಗಾತಿಯನ್ನಾಗಿ ಮಾರ್ಪಡಿಸಿದರು.

❖ ❖ ❖ ❖

ಅಧ್ಯಾಯ 11

ಪ್ರವಾದಿಗೆ(ಸ) ಒಂಬತ್ತು, ಅನುಯಾಯಿಗಳಿಗೆ ನಾಲ್ಕು!

ಪ್ರವಾದಿಯವರು(ಸ) ಇಹಲೋಕಕ್ಕೆ ವಿದಾಯ ಕೋರುವಾಗ ಅವರಿಗೆ ಒಂಬತ್ತು ಪತ್ನಿಯರಿದ್ದರು. ಆದರೆ ಅವರ ಅನುಯಾಯಿಗಳಿಗೆ ಏಕಕಾಲದಲ್ಲಿ ನಾಲ್ಕಕ್ಕಿಂತ ಹೆಚ್ಚು ಪತ್ನಿಯರನ್ನು ಇಟ್ಟುಕೊಳ್ಳಲು ಅವಕಾಶವಿಲ್ಲ. ಇದು ಅನ್ಯಾಯ ಮತ್ತು ತಾರತಮ್ಯದ ನೀತಿ; ಈ ಮೂಲಕ ಪ್ರವಾದಿಯವರಿಗೆ(ಸ) ವಿಶೇಷ ಹಕ್ಕುಗಳನ್ನು ನೀಡಲಾಗಿದೆ ಎಂದು ಇಸ್ಲಾಮಿನ ವಿಮರ್ಶಕರು ಪ್ರಚಾರಪಡಿಸುತ್ತಾರೆ.

ಈ ಮೊದಲು ಪ್ರಸ್ತಾಪಿಸಿದ ಪ್ರವಾದಿಯವರ(ಸ) ವಿವಾಹಗಳನ್ನು ಅವಲೋಕಿಸಿದಾಗ, ಪ್ರವಾದಿಯವರಿಗೆ(ಸ) ವಿಶೇಷ ಹಕ್ಕುಗಳನ್ನು ನೀಡಲಾಗಿಲ್ಲ. ಬದಲಾಗಿ ಅನೇಕ ಮಹತ್ವಪೂರ್ಣ ಜವಾಬ್ದಾರಿಗಳನ್ನು ಹೊರಿಸಿರುವುದು ಕಂಡುಬರುತ್ತದೆ.

ಮುಹಮ್ಮದ್(ಸ)ರು ಪ್ರವಾದಿಯಾಗಿ ನೇಮಿಸಲ್ಪಟ್ಟಾಗ ಅರೇಬಿಯದ ಸಮಾಜದಲ್ಲಿ ಬಹುಪತ್ನಿತ್ವವು ಸರ್ವೇಸಾಮಾನ್ಯ ವಿಷಯವಾಗಿತ್ತು. ಗೋತ್ರದ ನಾಯಕರು, ಮುಖ್ಯಸ್ಥರು ಅನೇಕ ಪತ್ನಿಯರನ್ನು ಹೊಂದಿರುತ್ತಿದ್ದರು. ಪ್ರವಾದಿಯವರ(ಸ) ಅನುಯಾಯಿಗಳ ಪೈಕಿ ಪ್ರಮುಖರಾದ ಕೈಸಾನುಸ್ಸಖಫಿ ಎಂಬ ವ್ಯಕ್ತಿಗೆ ಹತ್ತು, ಹಾರಿಸ್ ಬಿನ್ ಕೈಸ್‌ರಿಗೆ ಎಂಟು ಪತ್ನಿಯರಿದ್ದರು. ಅವರು ಇಸ್ಲಾಮ್ ಸ್ವೀಕರಿಸಿದ ಬಳಿಕವೂ ಇದರಲ್ಲಿ ಏನು ಬದಲಾವಣೆ ಮಾಡಲಿಲ್ಲ. ಆದರೆ ಇಸ್ಲಾಮ್ ಬಹುಪತ್ನಿತ್ವಕ್ಕೆ ಬಹಳ ಕಠಿಣವಾದ ನಿರ್ಬಂಧ, ನಿಯಂತ್ರಣಗಳನ್ನು ಹೇರಿ ಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ಸೀಮಿತಗೊಳಿಸಿತು. ಆ ಕಾರಣದಿಂದ ನಾಲ್ಕಕ್ಕಿಂತ ಹೆಚ್ಚು ಪತ್ನಿಯರಿರುವವರು ವಿವಾಹ ವಿಚ್ಛೇದನವನ್ನು ಮಾಡಬೇಕು ಎಂದು ಪ್ರವಾದಿಯವರು(ಸ) ಅನುಯಾಯಿಗಳಿಗೆ ಸೂಚಿಸಿದರು. ಹೀಗೆ ವಿವಾಹ ವಿಚ್ಛೇದಿತರಾದವರ ಪುನರ್ ವಿವಾಹವು ಅತಿ ಸುಲಭವಾಗಿ, ಶೀಘ್ರವಾಗಿ ಮತ್ತು ಅನಾಯಾಸ ನಡೆದು ಹೋಯಿತು. ಆದರೆ ಪ್ರವಾದಿಯವರು(ಸ) ತಮ್ಮ ಪತ್ನಿಯರನ್ನು ವಿವಾಹ ವಿಚ್ಛೇದನ ಮಾಡಲಿಲ್ಲ.

ಯಾಕಾಗಿ? ಪ್ರವಾದಿಯವರ ಪತ್ನಿಯರು ಸತ್ಯವಿಶ್ವಾಸಿಗಳ ಮಾತೆಯರೆಂದು

ಪರಿಗಣಿಸಲ್ಪಡುತ್ತಾರೆ. ಅವರನ್ನು ಪ್ರವಾದಿಯವರ(ಸ) ನಿಧನಾನಂತರ ಬೇರೆ ಯಾರೂ ವಿವಾಹ ಮಾಡಿಕೊಳ್ಳುವಂತಿಲ್ಲ. ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ,

"ಸಂದೇಶವಾಹಕರಿಗೆ ಕೀಟಲೆ ಕೊಡುವುದು ನಿಮಗೆ ಎಷ್ಟು ಮಾತ್ರಕ್ಕೂ ಸೂಕ್ತವಲ್ಲ. ಅವರ ಕಾಲಾನಂತರ ಅವರ ಪತ್ನಿಯರೊಂದಿಗೆ ವಿವಾಹ ಮಾಡಿಕೊಳ್ಳುವುದು ಎಂದಿಗೂ ನಿಮಗೆ ಧರ್ಮಸಮ್ಮತವಲ್ಲ. ಇದು ಅಲ್ಲಾಹನ ಬಳಿ ಮಹಾ ಪಾಪ ಕಾರ್ಯ." (ಅಲ್ ಅಹ್‌ಝಾಬ್: 53)

ಒಂದು ವೇಳೆ ಪ್ರವಾದಿಯವರು(ಸ) ತಮ್ಮ ಪತ್ನಿಯರ ಪೈಕಿ ನಾಲ್ಕು ಮಂದಿಯನ್ನು ಮಾತ್ರ ಜೊತೆಗಿರಿಸಿ ಉಳಿದವರನ್ನು ವಿಚ್ಛೇದಿಸಿದ್ದರೆ, ಆ ಐವರು ಸ್ತ್ರೀಯರು ಜೀವನಪೂರ್ತಿ ಪತಿ ಇಲ್ಲದೆ ವಿಧವೆಯರಂತೆ ಒಂಟಿಯಾಗಿ ಜೀವಿಸಬೇಕಾಗಿ ಬರುತ್ತಿತ್ತು. ಇತರರ ಪತ್ನಿಯರು ವಿವಾಹ ವಿಚ್ಛೇದಿತರಾದರೆ, ಬಹಳ ಸುಲಭವಾಗಿ ಮರು ವಿವಾಹ ನಡೆಯುತ್ತಿತ್ತು.

ಪ್ರವಾದಿಯವರು(ಸ) ಸಮಾಜದಲ್ಲಿ ಇತರರಂತೆ ಆಗಿರಲಿಲ್ಲ. ಓರ್ವ ನಾಯಕ, ಆಡಳಿತಗಾರ, ಎಲ್ಲರಿಂದಲೂ ಸ್ವೀಕರಿಸಲ್ಪಡುವ, ಗೌರವಿಸಲ್ಪಡುವ ವ್ಯಕ್ತಿಯಾಗಿದ್ದರು. ಜೊತೆಗೆ ಅಲ್ಲಾಹನ ಅಂತಿಮ ಸಂದೇಶವಾಹಕರೂ ಪ್ರಳಯ ಕಾಲದ ವರೆಗೆ ಬರುವ ಎಲ್ಲ ಮನುಷ್ಯರಿಗೆ ಇರುವ ಅತ್ಯುತ್ತಮ ಮಾದರಿಯೂ ಆಗಿದ್ದಾರೆ. ಅದರ ಜೊತೆಗೆ ಅಲ್ಲಾಹನಿಗೆ ಅತಿ ಹೆಚ್ಚು ಪ್ರೀತಿಪಾತ್ರರು ಕೂಡ ಆಗಿದ್ದಾರೆ.

ಇಂತಹ ಮಹಾನ್ ವ್ಯಕ್ತಿತ್ವವು ತಮ್ಮ ಒಂಬತ್ತು ಪತ್ನಿಯರ ಪೈಕಿ ನಾಲ್ವರನ್ನು ಮಾತ್ರ ಜೊತೆಗಿರಿಸಿಕೊಂಡು ಉಳಿದವರನ್ನು ವಿಚ್ಛೇದಿಸುವುದು ಎಂದರೆ ಆ ವಿಚ್ಛೇದಿಸಲ್ಪಟ್ಟ ಐವರು ಅನುಭವಿಸಬಹುದಾದ ಮಾನಸಿಕ ಆಘಾತ ಮತ್ತು ಸಂಕಟ ವನ್ನು ಊಹಿಸಲು ಕೂಡ ಸಾಧ್ಯವಿಲ್ಲ. ಅಲ್ಲಾಹನ ಪ್ರವಾದಿಯು ವಿಚ್ಛೇಧಿಸಿದ ಸ್ತ್ರೀ ಎಂಬ ಕೆಟ್ಟ ಹೆಸರು ಯಾವ ಸ್ತ್ರೀಯ ಮಟ್ಟಿಗೂ ಸಹಿಸಲಸಾಧ್ಯವಾದುದಾಗಿದೆ. ಅಂತಹ ಅವಸ್ಥೆಗೆ ಅವರನ್ನು ನೂಕದಿರುವುದು ಅನಿವಾರ್ಯವಾಗಿತ್ತು. ಆದುದರಿಂದ ಅವರ ಪೈಕಿ ಯಾರನ್ನು ಕೂಡ ಪ್ರವಾದಿಯವರು(ಸ) ವಿಚ್ಛೇದಿಸಿರಲಿಲ್ಲ.

ನಂತರ ಪ್ರವಾದಿಯವರ(ಸ) ವಿವಾಹಕ್ಕೂ ಸ್ಪಷ್ಟವಾದ ನಿಯಂತ್ರಣಗಳಿದ್ದು ಹೊಸ ವಿವಾಹ ಮಾಡಿಕೊಳ್ಳುವುದಕ್ಕೆ ಅನುಮತಿ ಇರಲಿಲ್ಲ. ಮಾತ್ರವಲ್ಲ, ಉಳಿದವರಿಗೆ ಜೊತೆಗಿದ್ದ ನಾಲ್ಕು ಪತ್ನಿಯರ ಪೈಕಿ ಯಾರನ್ನಾದರೂ ಅನಿವಾರ್ಯ ಕಾರಣಗಳಿಂದ ವಿಚ್ಛೇದಿಸ ಬೇಕಾಗಿ ಬಂದರೆ ಅವರು ವಿಚ್ಛೇದಿಸಿ ಹೊಸ ವಿವಾಹವನ್ನು ಮಾಡಲು ಅನುಮತಿ ಇತ್ತು. ಆದರೆ ಪ್ರವಾದಿಯವರಿಗೆ ಒಂಬತ್ತು ಪತ್ನಿಯರ ಪೈಕಿ ಒಬ್ಬರನ್ನು ವಿಚ್ಛೇದಿಸಿ ಬೇರೆ ಯಾರನ್ನಾದರೂ ಸ್ವೀಕರಿಸಲು ಅನುಮತಿ ಇರಲಿಲ್ಲ. ಅಲ್ಲಾಹ್ ಹೇಳುತ್ತಾನೆ,

“ಇನ್ನು ಮುಂದೆ ಇತರ ಸ್ತ್ರೀಯರು ನಿಮಗೆ ಧರ್ಮಸಮ್ಮತ ಆಗಿರುವುದಿಲ್ಲ. ಇತರ ಪತ್ನಿಯರನ್ನು ಅವರ ಸೌಂದರ್ಯವು ನಿಮಗೆ ಎಷ್ಟೇ ಮೆಚ್ಚುಗೆಯಾಗಿದ್ದರೂ ಇವರ ಸ್ಥಾನದಲ್ಲಿ ತರುವ ಅನುಮತಿ ಇಲ್ಲ.” **(ಅಲ್ ಅಹ್‌ಝಾಬ್: 52)**

ಪ್ರವಾದಿಯವರ(ಸ) ಪತ್ನಿಯರಿಗೆ ಅವರ ಪತ್ನಿಯ ಪದವಿಯಲ್ಲಿ ಮುಂದುವರಿಯಲು ಅಥವಾ ಅವರನ್ನು ತೊರೆಯಲು ಅವಕಾಶವನ್ನು ನೀಡಲಾಗಿತ್ತು. ಪ್ರವಾದಿಯವರ(ಸ) ಮರಣಾ ನಂತರ ಅವರನ್ನು ಬೇರೆ ಯಾರೂ ವಿವಾಹ ಮಾಡಿಕೊಳ್ಳಬಾರದು ಎಂಬ ಆದೇಶವು ಬಂದ ಬಳಿಕ, ಈ ಸೂಕ್ತವು ಅವತೀರ್ಣವಾಯಿತು.

ಅವರಿಗೆ ಜೊತೆಗಿದ್ದ ಪತ್ನಿಯರನ್ನು ಇರಿಸಿಕೊಳ್ಳಲು ಅವಕಾಶ ಸಿಕ್ಕಿದ್ದರೂ ಅನುಯಾಯಿಗಳಿಗೆ ಇಲ್ಲದ ಶರತ್ತು ಮತ್ತು ನಿಬಂಧನೆಗಳಿಗೆ ಅವರು ವಿಧೇಯರಾಗಬೇಕಾಗಿತ್ತು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಪ್ರವಾದಿಯವರಿಗೆ(ಸ) ಒಂಬತ್ತು ಪತ್ನಿಯರನ್ನು ಒಟ್ಟಿಗೆ ಇರಿಸಿಕೊಳ್ಳಲು ಅವಕಾಶ ಸಿಕ್ಕಿರುವುದು ಬಹಳ ದೊಡ್ಡ ಹೊಣೆಗಾರಿಕೆಯಾಗಿತ್ತು ಎಂಬುದು ಸ್ಪಷ್ಟವಿದೆ. ಪ್ರವಾದಿಯವರು(ಸ) ಅವರನ್ನು ವಿವಾಹ ಮಾಡಿಕೊಂಡದ್ದು ಮತ್ತು ಜೊತೆಗಿರಿಸಿಕೊಂಡದ್ದು ಕೇವಲ ಆಸೆ ಆಕಾಂಕ್ಷೆಗಳ ಪೂರ್ತೀಕರಣಕ್ಕಾಗಿರಲಿಲ್ಲ, ಅವರ ಸಂರಕ್ಷಣೆಯ ಕಾರಣಕ್ಕಾಗಿ ಆಗಿತ್ತು ಎಂಬುದನ್ನು ಈ ಮೊದಲೇ ವಿವರಿಸಲಾಗಿದೆ.

❖ ❖ ❖ ❖

ಅಧ್ಯಾಯ 12

ತಪ್ಪು ವ್ಯಾಖ್ಯಾನಗಳು ಮತ್ತು ಸುಳ್ಳಾರೋಪಗಳು

ಪ್ರವಾದಿಯವರನ್ನು(ಸ) ನಿಂದಿಸಲು ಹೊರಟವರು ಪವಿತ್ರ ಕುರ್‌ಆನಿನ ಕೆಲವು ಸೂಕ್ತಗಳನ್ನು ಆಯ್ದುಕೊಂಡು ಅದಕ್ಕೆ ತಮ್ಮದೇ ಆದ ವ್ಯಾಖ್ಯಾನವನ್ನು ನೀಡಿ ದುರುಪಯೋಗಿಸುತ್ತಾರೆ. ಅವೆಲ್ಲವೂ ಎಷ್ಟು ಅರ್ಥಶೂನ್ಯವೆಂಬುದು ಪ್ರಾಮಾಣಿಕವಾಗಿ ಅಧ್ಯಯನ ಮಾಡುವ ಯಾರಿಗಾದರೂ ಸುಲಭದಲ್ಲಿ ಮನವರಿಕೆಯಾಗುತ್ತದೆ. ಅಂತಹ ಸೂಕ್ತಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

1. "ಪ್ರವಾದಿಯವರೇ! ನೀವು ವಿವಾಹಧನ ಕೊಟ್ಟಿರುವಂತಹ ನಿಮ್ಮ ಪತ್ನಿಯರನ್ನೂ ಅಲ್ಲಾಹನಿಂದ ಪ್ರದಾನವಾಗಿರುವ ದಾಸಿಯರ ಪೈಕಿ ನಿಮ್ಮ ಸ್ವಾಧೀನಕ್ಕೆ ಬಂದಿರುವವರನ್ನೂ ನಿಮ್ಮ ಜೊತೆ ವಲಸೆ ಬಂದಿರುವ ನಿಮ್ಮ ತಂದೆಯ ಸಹೋದರ ಸಹೋದರಿಯರ ಮತ್ತು ತಾಯಿಯ ಸಹೋದರ ಸಹೋದರಿಯರ ಪುತ್ರಿಯರನ್ನೂ ನಾವು ನಿಮಗೆ ಧರ್ಮ ಸಮ್ಮತಗೊಳಿಸಿರುತ್ತೇವೆ. ತನ್ನನ್ನು ತಾನೇ ಪ್ರವಾದಿಯವರಿಗೆ ಹಿಬಃ ರೂಪದಲ್ಲಿ (ಕೊಡುಗೆಯಾಗಿ) ಕೊಟ್ಟಿದ್ದು, ಪ್ರವಾದಿಯು ಅವಳನ್ನು ತನ್ನ ನಿಕಾಹ್‌ನಲ್ಲಿ ಸ್ವೀಕರಿಸಲು ಒಪ್ಪಿಕೊಂಡರೆ ಅಂತಹ ಸತ್ಯವಿಶ್ವಾಸಿನಿಯರನ್ನೂ ನಾವು ನಿಮಗಾಗಿ ಹಲಾಲ್(ಧರ್ಮಸಮ್ಮತ)ಗೊಳಿಸಿರುತ್ತೇವೆ. ಈ ಅನುಮತಿಯು ನಿಮಗಾಗಿ ಮಾತ್ರವಿದೆ, ಬೇರೆ ಸತ್ಯವಿಶ್ವಾಸಿಗಳಿಗೆ ಇಲ್ಲ. ನಾವು ಸಾಮಾನ್ಯ ಸತ್ಯವಿಶ್ವಾಸಿಗಳ ಮೇಲೆ ಅವರ ಪತ್ನಿಯರ ಹಾಗೂ ದಾಸಿಯರ ವಿಷಯದಲ್ಲಿ ಯಾವ ಮಿತಿಗಳನ್ನು ಹೇರಿರುತ್ತೇವೆ ಎಂಬುದು ನಮಗೆ ಗೊತ್ತಿದೆ. ನಿಮ್ಮ ಮೇಲೆ ಯಾವ ಜಟಿಲತೆಯೂ ಇರದಂತಾಗಲು (ನಾವು ನಿಮ್ಮನ್ನು ಈ ಮಿತಿ ಮೇರೆಗಳಿಂದ ಮುಕ್ತಗೊಳಿಸಿದ್ದೇವೆ). ಅಲ್ಲಾಹನು ಕ್ಷಮಾಶೀಲನೂ ಕರುಣಾಳುವೂ ಆಗಿರುತ್ತಾನೆ." **(ಅಲ್ ಅಹ್‌ಝಾಬ್: 50)**

ವಿಮರ್ಶೆಗಳು

(ಅ) ಪ್ರವಾದಿಯವರು ತಮ್ಮಿಷ್ಟದಂತೆ ಉಪ ಪತ್ನಿಯರನ್ನು ಇಟ್ಟುಕೊಂಡಿದ್ದರು. ಹೀಗೆ ಮಾಡಲು ಅನುಕೂಲವಾಗಲಿಕ್ಕಾಗಿ ಅನಿಯಂತ್ರಿತವಾಗಿ ದಾಸಿಯರನ್ನು ಇರಿಸಲು ಅನುಮತಿ ನೀಡುವ ಈ ನಿಯಮವನ್ನು ಉಂಟುಮಾಡಿದರು.

(ಆ) ಪ್ರವಾದಿಯವರು(ಸ) ಪತ್ನಿಯರೊಂದಿಗೆ ತಮ್ಮ ಸಂಬಂಧಿಗಳನ್ನು ಬೇಕಾದ ಹಾಗೆ ಬಳಸಿಕೊಳ್ಳಲು ಸ್ವಯಂ ಸೃಷ್ಟಿಸಿಕೊಂಡ ಹೇಳಿಕೆಯಿದು.

(ಇ) "ತನ್ನನ್ನು ತಾನೇ ಪ್ರವಾದಿಗೆ ಹಿಬಃ ರೂಪದಲ್ಲಿ (ಕೊಡುಗೆಯಾಗಿ) ಕೊಟ್ಟಿದ್ದು ಪ್ರವಾದಿಯು ಅವಳನ್ನು ತನ್ನ ನಿಕಾಹ್‌ನಲ್ಲಿ ಸ್ವೀಕರಿಸಲು ಒಪ್ಪಿಕೊಂಡರೆ ಅಂತಹ ಸತ್ಯವಿಶ್ವಾಸಿನಿಯರನ್ನು ನಾವು ನಿಮಗಾಗಿ ಹಲಾಲ್ ಧರ್ಮಸಮ್ಮತ ಗೊಳಿಸಿರುತ್ತೇವೆ. ಈ ಅನುಮತಿಯು ನಿಮಗಾಗಿ ಮಾತ್ರವಿದೆ. ಬೇರೆ ಸತ್ಯವಿಶ್ವಾಸಿಗಳಿಗೆ ಇಲ್ಲ."

ಅವರ ಈ ಹೇಳಿಕೆಯು ಅವರ ಪತ್ನಿಯನ್ನು ಕೂಡ ಕೋಪಿಸುವಂತೆ ಮಾಡಿತು. ಆ ಕಾರಣದಿಂದಾಗಿಯೇ ಆಯಿಶಾ(ರ) ಇದನ್ನು ಕೇಳಿ ಸಿಡಿಮಿಡಿಕೊಂಡರು ಮತ್ತು ಹೀಗೆ ಹೇಳಿದರು, "ನಿಮ್ಮ ದೇವನು ನಿಮ್ಮ ಅವಶ್ಯಕತೆಗಳನ್ನು ಪೂರೈಸಲು ಬಹಳ ಆತುರ ಪಡುತ್ತಿರುವಂತೆ ತೋರುತ್ತಿದೆ. ನಿಮ್ಮ ಇಚ್ಛೆಯ ಪ್ರಕಾರವೇ ಅಲ್ಲಾಹನು ನಿಮ್ಮೊಂದಿಗೆ ಮಾತನಾಡುತ್ತಿದ್ದಾನೆ."

ಈ ಪ್ರತಿಕ್ರಿಯೆಯು ಮುಹಮ್ಮದ್ ತನ್ನ ಹಿತಾಸಕ್ತಿಗಳನ್ನು ಪೂರೈಸಲು ಅಲ್ಲಾಹನ ಹೆಸರಿನಲ್ಲಿ ಮಾತನಾಡುತ್ತಿದ್ದಾನೆ ಎಂಬುದನ್ನು ಆಯಿಶಾ ಸಹ ಅರ್ಥ ಮಾಡಿಕೊಂಡಿದ್ದಾರೆ ಎಂದು ತೋರಿಸುತ್ತದೆ.

ಮುಹಮ್ಮದ್‌ರು ತಮಗಾಗಿ ಮಾತ್ರ ಆವಿಷ್ಕರಿಸಿದ, ವ್ಯಭಿಚಾರಕ್ಕೆ ಕಾನೂನಿನ ಅನುಮತಿ ನೀಡುವ ಈ ನಿಯಮ ಯಾವಾಗ ಬೇಕಿದ್ದರೂ ಯಾವ ಹೆಣ್ಣನ್ನು ತನ್ನ ಕಾಮಶಮನಕ್ಕಾಗಿ ಉಪಯೋಗಿಸಲು ಅನುಕೂಲವಾಗಲಿಕ್ಕಾಗಿತ್ತು. ಮುಹಮ್ಮದ್ ಇದನ್ನು ತಮಗೆ ಬೇಕಾದ ಹಾಗೆ ಉಪಯೋಗಿಸಿಕೊಂಡರು. ಮೈಮೂನ, ಉಮ್ಮು ಶರೀಕ್, ಖೌಲ, ಝೈನಬ್ ಮುಂತಾದವರೆಲ್ಲರೂ ಈ ರೀತಿಯಲ್ಲಿ ಮುಹಮ್ಮದರು ಉಪಯೋಗಿಸಿದ ಸ್ತ್ರೀಯರಾಗಿದ್ದಾರೆ.

ಕಟ್ಟುಕತೆಗಳು

(ಅ) ಪ್ರವಾದಿಯವರು(ಸ) ನಿಯುಕ್ತರಾದದ್ದು ಮತ್ತು ಪವಿತ್ರ ಕುರ್‌ಆನ್ ಅವತೀರ್ಣವಾದದ್ದು ಗುಲಾಮಗಿರಿಯ ಸಂಪ್ರದಾಯವು ಅಸ್ತಿತ್ವದಲ್ಲಿದ್ದ ಕಾಲದಲ್ಲಾಗಿತ್ತು ಎಂಬುದು ನಿರ್ವಿವಾದ ವಾಸ್ತವಿಕತೆಯಾಗಿದೆ. ಆ ಕಾಲದಲ್ಲಿ ಯಜಮಾನರು ವಿವಾಹ ಮಾಡಿಕೊಳ್ಳದೆ ಗುಲಾಮ ಸ್ತ್ರೀಯರನ್ನು ಧಾರಾಳವಾಗಿ ತಮಗಿಷ್ಟ ಬಂದಂತೆ ಉಪಯೋಗಿಸಿಕೊಳ್ಳುವ ಅವಕಾಶವಿತ್ತು. ಅದನ್ನು ಅವರು ಉಪಯೋಗಿಸುತ್ತಿದ್ದರು. ಕಾಲಕ್ರಮೇಣ ಇಸ್ಲಾಮ್ ಗುಲಾಮಗಿರಿಯ ಸಂಪ್ರದಾಯವನ್ನು ಕೊನೆಗೊಳಿಸಲು ಅಗತ್ಯವಾದ ನಿಯಮಗಳನ್ನು ಸ್ವೀಕರಿಸಿ ಸುಧಾರಣೆಗಳನ್ನು ಮಾಡಿತು. ಗುಲಾಮಗಿರಿಯ

ವ್ಯವಹಾರವು ಸಂಪೂರ್ಣವಾಗಿ ಸುಧಾರಣೆಗೊಂಡಾಗ, ಗುಲಾಮ ಸ್ತ್ರೀಯರೊಂದಿಗೆ ಮಕ್ಕಳಾದರೆ ಅವರು ಸ್ವತಂತ್ರರಾಗಿ ಮಾರ್ಪಡುತ್ತಾರೆ ಎಂಬುದನ್ನು ಕೂಡ ಅದರಲ್ಲಿ ಸೇರಿಸಲಾಯಿತು.

ಈ ಸೂಕ್ತದ ಮುಖಾಂತರ ಇತರ ಸತ್ಯವಿಶ್ವಾಸಿಗಳಂತೆಯೇ ಪ್ರವಾದಿಯವರಿಗೂ ದಾಸಿಯರನ್ನು ಜೀವನ ಸಂಗಾತಿಗಳನ್ನಾಗಿ ಮಾಡುವ ಅನುಮತಿ ನೀಡಲಾಯಿತು. ಆದರೂ ಪ್ರವಾದಿಯವರು(ಸ) ಅದನ್ನು ಬಳಸಿಕೊಳ್ಳಲಿಲ್ಲ ಎಂಬುದು ಪ್ರಬಲವಾದ ಅಭಿಪ್ರಾಯವಾಗಿದೆ. ಯುದ್ಧ ಕೈದಿಗಳ ರೂಪದಲ್ಲಿ ಪ್ರವಾದಿಯವರ(ಸ) ಬಳಿ ಬಂದು ಸೇರಿದ ದಾಸಿಯರು ಮೂರು ಮಂದಿ ಆಗಿದ್ದರು. ಬನೂ ಕುರೈಝ ಯುದ್ಧದಲ್ಲಿ ಯುದ್ಧ ಕೈದಿಯಾಗಿ ಬಂಧಿತರಾದ ರೈಹಾನ, ಬನೂ ಮುಸ್ತಲಿಕ್ ಯುದ್ಧದಲ್ಲಿ ಕೈದಿಯಾಗಿ ಬಂದ ಜುವೈರಿಯಾ, ಖೈಬರ್-ಬಂಧಿಯಾದ ಸಫಿಯ್ಯ ಇವರಾಗಿದ್ದಾರೆ. ಇವರಾರನ್ನೂ ಪ್ರವಾದಿಯವರು(ಸ) ದಾಸಿಯರಾಗಿ ಇಟ್ಟುಕೊಳ್ಳಲಿಲ್ಲ. ಜುವೈರಿಯಾ ಮತ್ತು ಸಫಿಯ್ಯರನ್ನು ಸ್ವತಂತ್ರಗೊಳಿಸಿ ವಿವಾಹ ಮಾಡಿಕೊಂಡರು. ರೈಹಾನರನ್ನು ಸ್ವತಂತ್ರಗೊಳಿಸಿದರು. ಅವರು ಇಸ್ಲಾಮ್ ಸ್ವೀಕರಿಸಿ ಸ್ವಂತ ಕುಟುಂಬದೊಂದಿಗೆ ಮರಳಿ ಹೋದರು. ರೈಹಾನ ಪ್ರವಾದಿಯವರ(ಸ) ದಾಸಿಯಾಗಿದ್ದರು ಎಂದು ಕೆಲವರು ಅಭಿಪ್ರಾಯ ಪಡುವುದೇಕೆಂದರೆ ಅವರು ಇಸ್ಲಾಮ್ ಸ್ವೀಕರಿಸಿದ್ದನ್ನು ಮತ್ತು ಸ್ವದೇಶಕ್ಕೆ ಹಿಂದಿರುಗಿ ಹೋದ ವಿಷಯವನ್ನು ಬಿಟ್ಟುಬಿಟ್ಟ ಕಾರಣದಿಂದಾಗಿದೆ.

ಪ್ರವಾದಿಯವರು(ಸ) ದಾಸಿಯರನ್ನು ಇಟ್ಟುಕೊಂಡಿದ್ದರು ಎಂಬುದಾಗಿ ವಾದಿಸುವವರು ಮಾರಿಯ ಕಿಬ್ತಿಯ(ರ)ರ ಬಗ್ಗೆ ಉಲ್ಲೇಖಿಸುತ್ತಾರೆ. ಅವರು ಯುದ್ಧದಲ್ಲಿ ಕೈದಿಯಾಗಿ ಸಿಕ್ಕಿದವರಲ್ಲ. ಈಜಿಪ್ಟಿನ ರಾಜರಾದ ಮುಕೌಕಿಸ್ ಉಡುಗೊರೆಯಾಗಿ ನೀಡಿದವರಾಗಿದ್ದಾರೆ. ಅವರು ಮಾರಿಯರ ರಕ್ಷಕರೆಂಬ ನೆಲೆಯಲ್ಲಿ ಪ್ರವಾದಿಯವರಿಗೆ(ಸ) ಅವರನ್ನು ಉಡುಗೊರೆಯಾಗಿ ನೀಡಿದ್ದರು. ಅದು ವಿವಾಹ ಮಾಡಿಕೊಟ್ಟದ್ದಕ್ಕೆ ಸಮಾನವಾಗಿತ್ತು. ಪ್ರವಾದಿಯವರು(ಸ) ಆ ಉಡುಗೊರೆಯನ್ನು ಸ್ವೀಕರಿಸುವುದರೊಂದಿಗೆ ವಿವಾಹವು ಸಂಪೂರ್ಣವಾಯಿತು. ಅವರಿಗೆ ಇಬ್ರಾಹೀಮ್ ಎಂಬ ಮಗು ಜನಿಸಿತು. ಆದುದರಿಂದ ಇಸ್ಲಾಮ್ ಪ್ರವಾದಿಯವರ(ಸ) ಇತರ ಪತ್ನಿಯರಂತೆ ಅವರನ್ನು ಕೂಡ ಸತ್ಯವಿಶ್ವಾಸಿಗಳ ಮಾತೆ ಎಂದು ವಿಶೇಷವಾಗಿ ಗೌರವಿಸಿದೆ. ಈ ವಿಷಯವನ್ನು ಈ ಮೊದಲೇ ವಿವರಿಸಲಾಗಿದೆ.

ಒಟ್ಟಿನಲ್ಲಿ ವಿವಾಹ ಮಾಡಿಕೊಳ್ಳದೆ ಯಾವ ಸ್ತ್ರೀಯೊಂದಿಗೂ ಪ್ರವಾದಿಯವರು(ಸ) ಜೀವನ ಸಾಗಿಸಲಿಲ್ಲ.

(ಆ) ಈ ಮೇಲೆ ಪ್ರಸ್ತಾಪಿಸಲಾದ ಕುರ್‌ಆನ್ ಸೂಕ್ತದಲ್ಲಿ ಪ್ರಸ್ತಾಪಿಸಲಾದ ಎಲ್ಲಾ ಸಮೀಪದ ಸಂಬಂಧಿಗಳನ್ನು ವಿವಾಹವಾಗಲು ಎಲ್ಲ ಸತ್ಯವಿಶ್ವಾಸಿಗಳಿಗೂ

ಅನುಮತಿ ಇದೆ. ಪ್ರವಾದಿಯವರನ್ನು(ಸ) ಅಭಿಸಂಬೋಧಿಸಿ ಈ ವಿಷಯವನ್ನು ಹೇಳಲಾಗಿದ್ದರೂ ಸಂಪೂರ್ಣ ಮಾನವ ಕುಲಕ್ಕೆ ಈ ನಿಯಮವು ಅನ್ವಯಿಸುತ್ತದೆ. ಇಸ್ಲಾಮಿನ ಅನೇಕ ನಿಯಮಗಳ ಪ್ರಥಮ ಅಭಿಸಂಭೋಧಿತರು ಪ್ರವಾದಿಯಾಗಿದ್ದಾರೆ. ಮುಂದುವರಿದು ಎಲ್ಲ ಮನುಷ್ಯರು ಇದರ ಅಭಿಸಂಬೋಧಿತರಾಗಿದ್ದಾರೆ.

ಈ ಕಾರಣದಿಂದಾಗಿಯೇ ಪ್ರವಾದಿಯವರು ಮತ್ತು ಅವರ ಅನುಯಾಯಿಗಳು ಈ ಪವಿತ್ರ ವಚನದಲ್ಲಿ ಉಲ್ಲೇಖಿಸಲಾದ ಸ್ತ್ರೀಯರನ್ನು ವಿವಾಹವಾದರು. ಆ ಕಾಲದಿಂದಲೇ ಈ ಸಂಪ್ರದಾಯವು ಮುಂದುವರಿಯುತ್ತಾ ಬಂದಿದೆ.

ಈ ಮೂಲಕ ಕುರ್‌ಆನ್ ಆ ಕಾಲದಲ್ಲಿ ಚಾಲ್ತಿಯಲ್ಲಿದ್ದ ಎರಡು ಅತಿರೇಕಗಳ ಮಧ್ಯೆ ಸಂತುಲನೆಯ ನಿಲುಮೆಯನ್ನು ಸ್ವೀಕರಿಸುವ ಶಿಕ್ಷಣ ಮತ್ತು ತರಬೇತಿಯನ್ನು ಸಮಾಜಕ್ಕೆ ನೀಡಿತು. ಅಂದಿನ ಕ್ರೈಸ್ತ ಧರ್ಮದ ಆಚರಣೆಯ ಪ್ರಕಾರ ಏಳು ಪಿತಾಮಹರ ಸಂತಾನ ಪರಂಪರೆಯ ಮಧ್ಯೆ ವಿವಾಹವು ನಿಷಿದ್ಧವಾಗಿತ್ತು. ಯಹೂದಿ ಧರ್ಮದಲ್ಲಿ ಸಹೋದರಿ, ಸಹೋದರನ ಮಗಳನ್ನು ವಿವಾಹ ಮಾಡಲು ಅನುಮತಿ ಇತ್ತು. ಈ ಎರಡರ ಮಧ್ಯೆ ಸಂತುಲಿತ ನಿಲುವನ್ನು ಇಸ್ಲಾಮ್ ಸ್ವೀಕರಿಸಿತು. ಸಹೋದರನ, ಸಹೋದರಿಯ ಮಗಳನ್ನು ವಿವಾಹವಾಗುವುದನ್ನು ನಿಷೇಧಿಸಿತು. ಅದೇ ವೇಳೆ ಪಿತೃ ಸಹೋದರಿ ಸಹೋದರರ, ಮಾತೃ ಸಹೋದರಿ ಸಹೋದರರ ಮಕ್ಕಳನ್ನು ವಿವಾಹ ಮಾಡುವುದಕ್ಕೆ ಅನುಮತಿ ನೀಡಿತು. ಪವಿತ್ರ ಕುರ್‌ಆನಿನ ಪ್ರಸ್ತುತ ವಚನವು ಈ ನಿಯಮದ ಸುಧಾರಣೆಯನ್ನು ಮಾಡಿತು.

(ಇ) ಯಾರಾದರೂ ಸ್ತ್ರೀ ಸ್ವತಃ ತನ್ನನ್ನು ದಾನ ಮಾಡಲು ಇಚ್ಛಿಸಿ ಮುಂದೆ ಬಂದರೆ ಅಂತಹ ಸ್ತ್ರೀಯರನ್ನು ವಿವಾಹ ಮಾಡಬಹುದು ಎಂಬ ವಿಷಯವು ಪ್ರಸ್ತುತ ಸೂಕ್ತದಲ್ಲಿ ಇದೆ. ವಿವಾಹ ಮಾಡಿಕೊಳ್ಳದೆ ಲೈಂಗಿಕ ಸಂಬಂಧದಲ್ಲಿ ಏರ್ಪಡಬೇಕೆಂದು ಇದರ ಉದ್ದೇಶವಲ್ಲ. ಆದುದರಿಂದ ವಿಮರ್ಶಕರು ಆರೋಪಿಸುವಂತೆ ವ್ಯಭಿಚಾರಕ್ಕಿರುವ ಅನುಮತಿ ಅಥವಾ ಯಾವುದಾದರೂ ಹೆಣ್ಣನ್ನು ಮನಸೋ ಇಚ್ಛೆ ಉಪಯೋಗಿಸಲಿಕ್ಕಿರುವ ಅನುಮತಿ ಅಲ್ಲ. ಕುರ್‌ಆನಿನಲ್ಲಿ ಏನಿದೆ ಎಂಬುದನ್ನು ಗಮನಿಸದೇ, ಯಾರೋ ಎಲ್ಲಿಯೋ ಬರೆದಿಟ್ಟ ವಿಷಯವನ್ನು ಅದೇ ರೀತಿಯಲ್ಲಿ ಪ್ರಚಾರ ಮಾಡುವುದು ಇಸ್ಲಾಮನ್ನು ವಿಮರ್ಶಿಸುವವರ ಮೂಲ ಸ್ವಭಾವವಾಗಿದೆ. ಇದೇ ನೀತಿಯನ್ನು ಅವರು ಈ ಆರೋಪಗಳನ್ನು ಹೊರಿಸುವಾಗಲೂ ಅನುಸರಿಸಿದ್ದಾರೆ.

ಸ್ವಯಂ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವವರು ಮತ್ತು ಬೇರೆಯವರ ಮಧ್ಯೆ ಇರುವ ವ್ಯತ್ಯಾಸವೇನು? ಸ್ವಯಂ ಸಮರ್ಪಿಸಿಕೊಳ್ಳಲು ಮುಂದೆ ಬಂದವರನ್ನು ವಿವಾಹ ಮಾಡಿಕೊಳ್ಳುವಾಗ ಮಹರ್ ನೀಡಬೇಕಾಗಿಲ್ಲ ಎಂಬ ವ್ಯತ್ಯಾಸ ಮಾತ್ರ ಎರಡರ ಮಧ್ಯೆ ಇದೆ ಎಂಬುದಾಗಿ ಇಸ್ಲಾಮಿನ ಎಲ್ಲ ವಿದ್ವಾಂಸರು ಏಕಾಭಿಪ್ರಾಯವನ್ನು

ಹೊಂದಿದ್ದಾರೆ. ಇಬ್ನು ಕಸೀರ್, ಇಬ್ನು ಜರೀರ್, ತ್ವಬರಿ ಮುಂತಾದ ಕುರ್‌ಆನ್ ವ್ಯಾಖ್ಯಾನಕಾರರು ಇದನ್ನು ಸ್ಪಷ್ಟ ಪಡಿಸಿದ್ದಾರೆ.

ಪ್ರವಾದಿಯವರಿಗೆ(ಸ) ಈ ರೀತಿ ಮಹ್ರ್ ನೀಡದೆ ವಿವಾಹವಾಗಲು ಅನುಮತಿ ಇದ್ದರೂ ಕೂಡ ಒಮ್ಮೆಯೂ ಅವರು ಅದನ್ನು ಉಪಯೋಗಿಸಲಿಲ್ಲ. ಎಲ್ಲಾ ಪತ್ನಿಯರಿಗೂ 500 ದಿರ್ಹಮ್ ಅಥವಾ ಅದಕ್ಕೆ ಸಮಾನವಾದ ವಿವಾಹಧನ ವನ್ನು ನೀಡಿದ್ದರು ಎಂದು ಇಮಾಮ್ ಮುಜಾಹಿದ್ ಮತ್ತು ಇತರ ಪಂಡಿತರು ಸ್ಪಷ್ಟೀಕರಿಸಿದ್ದಾರೆ. ಈ ಪೈಕಿ ಭಿನ್ನವಾದದ್ದು ಉಮ್ಮು ಹಬೀಬಾರೊಂದಿಗಿನ ವಿವಾಹ ಮಾತ್ರವಾಗಿತ್ತು. ಇತಿಯೋಪಿಯಾದಲ್ಲಿ ಇದ್ದ ಅವರ ವಿವಾಹಕ್ಕೆ ನೇತೃತ್ವ ನೀಡಿದ್ದು ಮತ್ತು ಮಹರ್ ನೀಡಿದ್ದು ನಜ್ಜಾಶಿ ರಾಜ. 400 ದಿರ್ಹಮ್ ಮಹ್ರನ್ನು ಅವರು ನೀಡಿದ್ದರು. ಗುಲಾಮಗಿರಿಯಿಂದ ಬಿಡುಗಡೆಗೊಳಿಸುವುದು ಸಫಿಯ್ಯಾರ ಮಹರ್ ಆಗಿತ್ತು. ಸಾಬಿತ್ ಬಿನ್ ಖೈಸ್‌ರೊಂದಿಗೆ ಮಾಡಿಕೊಂಡ ಬಿಡುಗಡೆಯ ಕರಾರಿನ ಪತ್ರ ಜುವೈರಿಯಾರ ಮಹರ್ ಆಗಿತ್ತು. ಹೀಗೆ ಮಹ್ರ್ ನೀಡದೆ ಪ್ರವಾದಿಯವರು(ಸ) ಯಾರನ್ನೂ ವಿವಾಹ ಮಾಡಿಕೊಳ್ಳಲಿಲ್ಲ.

ಪ್ರವಾದಿಯವರ ಮುಂದೆ ಸ್ವತಃ ಸಮರ್ಪಿಸಿಕೊಳ್ಳಲಿಕ್ಕಾಗಿ ಬಂದ ಸ್ತ್ರೀಯ ಕುರಿತು ಸಹಲ್ ಬಿನ್ ಸಅದ್(ರ) ಹೇಳಿದ ಘಟನೆ ಇಮಾಮ್ ಅಹ್ಮದ್ ಉಲ್ಲೇಖಿ ಸುತ್ತಾರೆ: ಓರ್ವ ಮಹಿಳೆಯು ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಹೀಗೆ ಹೇಳಿದರು, "ನಾನು ನನ್ನನ್ನು ತಮಗೆ ಸಮರ್ಪಿಸಿಕೊಳ್ಳುತ್ತಿದ್ದೇನೆ."

ಪ್ರವಾದಿಯವರು ಯಾವ ಉತ್ತರವನ್ನು ನೀಡದೆ ಮೌನರಾದರು. ಆ ಸ್ತ್ರೀ ದೀರ್ಘಕಾಲ ಅಲ್ಲಿಯೇ ನಿಂತರು. ಆಗ ಅಲ್ಲಿ ಇದ್ದ ಒಬ್ಬ ವ್ಯಕ್ತಿ ಪ್ರವಾದಿ ಯವರೊಂದಿಗೆ(ಸ) ಹೀಗೆ ಹೇಳಿದರು, "ತಮಗೆ ಆಸಕ್ತಿ ಇಲ್ಲದಿದ್ದರೆ ನಾನು ಇವರನ್ನು ವಿವಾಹ ಮಾಡಿಕೊಳ್ಳುತ್ತೇನೆ." ಆ ಸ್ತ್ರೀಯ ಅನುಮತಿಯೊಂದಿಗೆ ಪ್ರವಾದಿ ಯವರು ಅವರನ್ನು ಆ ವ್ಯಕ್ತಿಯೊಂದಿಗೆ ವಿವಾಹ ಮಾಡಿಕೊಟ್ಟರು.

ಹಾರಿಸ್‌ರ ಮಗಳು ಮೈಮೂನ(ರ), ಅಸದ್ ಗೋತ್ರದ ಉಮ್ಮು ಶರೀಕ್(ರ), ಉಮ್ಮುಲ್ ಮಸಾಕೀನ್ ಎಂದು ಗುರುತಿಸಲ್ಪಡುವ ಝೈನಬ್ ಬಿಂತಿ ಖುಝೈಮ(ರ), ಬನೂ ಸುಲೈಮ್ ಗೋತ್ರದ ಹಕೀಮ್‌ರ ಮಗಳು ಖೌಲ(ರ)ರಂತಹ ಕೆಲವರು ತಮ್ಮನ್ನು ಸ್ವಯಂ ಪ್ರವಾದಿಯವರಿಗೆ(ಸ) ಸಮರ್ಪಿಸಿಕೊಳ್ಳಲಿಕ್ಕಾಗಿ ಮುಂದೆ ಬಂದಿದ್ದರು ಎಂದು ವರದಿಯಾಗಿದೆ ಎಂದು ವಿಚಾರವಾದಿಗಳು ಅವರೆಲ್ಲರನ್ನು ಪ್ರವಾದಿ ಯವರೊಂದಿಗೆ(ಸ) ಸೇರಿಸಿ ಹೇಳುತ್ತಾರೆ. ಆದರೆ ಮೈಮೂನ(ರ), ಉಮ್ಮುಲ್ ಮಸಾಕೀನ್ ಝೈನಬ್(ರ) ಪ್ರವಾದಿಯವರ(ಸ) ಪತ್ನಿಯರಾಗಿದ್ದರು. ವಿವಾಹ ಮಾಡಿಕೊಳ್ಳದೆ ಸ್ವಯಂ ಸಮರ್ಪಿಸಿಕೊಂಡ ಯಾರನ್ನೂ ಪ್ರವಾದಿಯವರು(ಸ)

ಸ್ವೀಕರಿಸಿರಲಿಲ್ಲ ಎಂದು ಇಬ್ನು ಅಬ್ಬಾಸ್ ಹೇಳಿರುವುದಾಗಿ ಇಬ್ನು ಅಬೀ ಹಾತಿಮ್ ವರದಿ ಮಾಡಿರುತ್ತಾರೆ. ಇದೇ ವಿಷಯವನ್ನು ಯೂನುಸ್ ಬಿನ್ ಬುಖೈರರಿಂದ ಇಬ್ನು ಜರೀರ್ ಉಲ್ಲೇಖಿಸಿರುತ್ತಾರೆ. ಇದೇ ಅಭಿಪ್ರಾಯಕ್ಕೆ ಇಮಾಮ್ ಮುಜಾಹಿದ್ ಮಹತ್ವ ನೀಡಿರುತ್ತಾರೆ. ಪತ್ನಿಯರೊಂದಿಗಲ್ಲದೆ ಇತರ ಯಾರೊಂದಿಗೂ ಪ್ರವಾದಿ ಯವರು(ಸ) ಜೀವನ ಹಂಚಿಕೊಂಡಿಲ್ಲ. ಪ್ರಾಮಾಣಿಕವಾದ ಐತಿಹಾಸಿಕ ಬರಹಗಳಲ್ಲಿ ಅಂತಹ ಸಂಭವ ಕಂಡುಬರುವುದಿಲ್ಲ. ಮಾತ್ರವಲ್ಲ ಅಂತಹ ಒಂದು ಉಲ್ಲೇಖ ಕೂಡ ಇಲ್ಲ. ಪ್ರವಾದಿಯವರ(ಸ) ಹೆಸರಿನಲ್ಲಿ ಇಂತಹ ಕಟ್ಟುಕಥೆಗಳನ್ನು ರಚಿಸುವ ಇಸ್ಲಾಮಿನ ವಿಮರ್ಶಕರು ಹೀನ ಕೃತ್ಯಗಳಲ್ಲಿ ಆಸಕ್ತಿ ಇರುವವರಾಗಿದ್ದಾರೆ. ತನ್ನನ್ನು ವಿವಾಹ ಮಾಡಿಕೊಳ್ಳುವಂತೆ ಪ್ರವಾದಿಯವರೊಂದಿಗೆ(ಸ) ವಿನಂತಿಸಿದ ಮೈಮೂನ(ರ) ರನ್ನು ಸಂಬಂಧಿಸಿ ಈ ಮೇಲಿನ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಪ್ರವಾದಿಯವರ(ಸ) ಚಿಕ್ಕಪ್ಪ ಅಬ್ಬಾಸ್(ರ) ರವರು ಅವರ ವಿವಾಹವನ್ನು ಮಾಡಿಕೊಡಲು ಮುಂದೆ ಬಂದರು ಮತ್ತು ಮಹ್ರನ್ನು ಕೂಡ ನೀಡಿದರು. ವಾಸ್ತವಿಕತೆಗಳು ಹೀಗಿರುವಾಗ ಈ ಸೂಕ್ತದ ಉದ್ದೇಶವೇನು?

ಏಕಕಾಲದಲ್ಲಿ ನಾಲ್ಕು ಪತ್ನಿಯರನ್ನು ಮಾತ್ರ ಹೊಂದಿರಬಹುದು ಎಂಬ ನಿಯಮದಿಂದ ಪ್ರವಾದಿಯವರಿಗೆ(ಸ) ವಿನಾಯಿತಿ ನೀಡುವುದು ಈ ಸೂಕ್ತದ ಉದ್ದೇಶವೆಂದು ಪ್ರಮುಖ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆ ಸಂದರ್ಭದಲ್ಲಿ ಅವರೊಂದಿಗಿದ್ದ 9 ಮಂದಿಯ ಪೈಕಿ ಯಾರನ್ನಾದರೂ ವಿಚ್ಛೇದಿಸಿದರೆ ಈ ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ವಿಚ್ಛೇದಿತರಿಗೆ ಮತ್ತು ಆ ಮೂಲಕ ಪ್ರವಾದಿಯವರಿಗೆ ಬಹಳ ನೋವುಂಟಾಗುತ್ತಿತ್ತು ಎಂಬ ಕಾರಣದಿಂದ ಈ ವಿನಾಯಿತಿಯನ್ನು ನೀಡಲಾಗಿದೆ. ಆದುದರಿಂದ ನಿಮ್ಮ ಮೇಲೆ ಯಾವ ಜಟಿಲತೆಯು ಇಲ್ಲದಂತಾಗಲು (ನಾವು ನಿಮ್ಮನ್ನು ಈ ಮಿತಿ ಮೇರೆಗಳಿಂದ ಮುಕ್ತಗೊಳಿಸಿದ್ದೇವೆ) ಎಂದು ಕುರ್‌ಆನ್ ಪ್ರತ್ಯೇಕವಾಗಿ ಹೇಳಿದೆ.

ಆರೋಪ: ಈ ಸೂಕ್ತವನ್ನು ಆಲಿಸಿದ ಪ್ರವಾದಿ ಪತ್ನಿ ಆಯಿಶಾ(ರ) ಹೀಗೆ ಹೇಳಿದರು, "ತಮ್ಮ ಪ್ರಭು ತಮ್ಮ ಇಚ್ಛೆಗಳನ್ನು ಪೂರ್ತಿಕರಿಸಲಿಕ್ಕಾಗಿ ಬಹಳ ಆತುರ ತೋರಿಸುವಂತೆ ನನಗನಿಸುತ್ತಿದೆ."

ಸ್ಪಷ್ಟೀಕರಣ: ಪ್ರವಾದಿ ಮತ್ತು ಆಯಿಶಾ(ರ)ರ ಮಧ್ಯೆ ಇದ್ದ ಗಾಢವಾದ ಸಂಬಂಧ, ಆಳವಾದ ಪ್ರೀತಿಯ ಕುರಿತು ಸಾಮಾನ್ಯ ಜ್ಞಾನವನ್ನು ಹೊಂದಿದ ಯಾರಿಗೂ ಇದು ಪ್ರವಾದಿಯವರ(ಸ) ಪತ್ನಿ ತಮಾಷೆಗಾಗಿ ಹೇಳಿದ ಮಾತು ಎಂಬುದನ್ನು ಅರ್ಥ ಮಾಡಿಕೊಳ್ಳಲು ಯಾವುದೇ ಸಮಸ್ಯೆಯಾಗುವುದಿಲ್ಲ. ಪ್ರವಾದಿ ಯವರು(ಸ) ಆಯಿಶಾ(ರ)ರೊಂದಿಗೆ ಓಟದ ಸ್ಪರ್ಧೆ ನಡೆಸುತ್ತಾ, ಅವರ ಹೆಗಲ

ಮೇಲೆ ತಲೆ ಇಟ್ಟು ಆಟೋಟವನ್ನು ಕಂಡು ಆಸ್ವಾದಿಸುವ ಅವಕಾಶ ಒದಗಿಸುತ್ತಿದ್ದ, ಸದಾ ತಮಾಷೆಯ ಮಾತುಗಳನ್ನಾಡಿ ನಗಿಸುತ್ತಿದ್ದ ಪ್ರೀತಿಯ ಪತಿಯಾಗಿದ್ದರು. ಹೀಗಿದ್ದೂ ಅವರ ಸ್ನೇಹಮಯವಾದ, ತಮಾಷೆಯಿಂದ ಕೂಡಿದ ಮಾತುಗಳನ್ನು ಅಲ್ಲಾಹನ ಮತ್ತು ಪ್ರವಾದಿಯ ಕರ್ಣಪರದೆಗಳಿಗಿರುವ ಏಟಿನಂತೆ ಕಾಣುವವರು, ಶಾರೀರಿಕ ಆವಶ್ಯಕತೆಗಳಾಚೆ ದಾಂಪತ್ಯ ಜೀವನದಲ್ಲಿ ಇರುವ ನಿಷ್ಕಲ್ಮಶವಾದ ಪ್ರೀತಿ, ಸ್ನೇಹ, ಸರಸಸಲ್ಲಾಪಗಳ ಬಗ್ಗೆ ಏನನ್ನೂ ಅರಿಯದ ಅಥವಾ ಅರಿತಿದ್ದು ಅಸಭ್ಯ ವಿಷಯಗಳಲ್ಲಿ ಸಂತೋಷವನ್ನು ಅನುಭವಿಸುವ ಕಿಡಿಗೇಡಿಗಳೇ ಆಗಿರಬೇಕು.

ವಾಸ್ತವದಲ್ಲಿ ಆಯಿಶಾ(ರ)ರವರು ಪ್ರವಾದಿಯವರೊಂದಿಗೆ(ಸ) ಈ ರೀತಿ ಹೇಳಿದ್ದು ಈ ವಚನವು ಅವತೀರ್ಣಗೊಂಡ ಸಂದರ್ಭದಲ್ಲಿ ಅಲ್ಲ. ಬದಲಾಗಿ 33ನೇ ಅಧ್ಯಾಯದ 51ನೇ ಸೂಕ್ತ ಅವತೀರ್ಣವಾದ ಸಂದರ್ಭದಲ್ಲಿ ಆಗಿತ್ತು ಎಂಬ ಅಭಿಪ್ರಾಯವೂ ಇದೆ. ಪ್ರಸ್ತುತ ಸೂಕ್ತ ಈ ರೀತಿ ಇದೆ:

"ನಿಮ್ಮ ಪತ್ನಿಯರ ಪೈಕಿ ನಿಮಗೆ ಇಷ್ಟವಿದ್ದವರನ್ನು ನಿಮ್ಮಿಂದ ದೂರಿಕರಿಸಲಿಕ್ಕೂ ನಿಮಗೆ ಇಷ್ಟ ಬಂದವರನ್ನು ಜೊತೆ ಇಟ್ಟುಕೊಳ್ಳಲಿಕ್ಕೂ ದೂರವಿರಿಸಿದ ಬಳಿಕ ನಿಮಗೆ ಇಷ್ಟವಿದ್ದವರನ್ನು ನಿಮ್ಮ ಬಳಿಗೆ ಕರೆಸಿಕೊಳ್ಳಲಿಕ್ಕೂ ನಿಮಗೆ ಅಧಿಕಾರ ಕೊಡಲಾಗುತ್ತದೆ. ಈ ವಿಷಯದಲ್ಲಿ ನಿಮಗೇನೂ ಆತಂಕವಿಲ್ಲ. ಇದರಿಂದ ಅವರ ಕಣ್ಣುಗಳು ತಣಿದಿರುವುದೆಂದೂ ಅವರು ಬೇಸರಿಸಲಾರರೆಂದೂ ನಿರೀಕ್ಷೆ ಇದೆ ಮತ್ತು ನೀವು ಅವರಿಗೆ ಕೊಟ್ಟುದರಲ್ಲಿ ಅವರೆಲ್ಲರೂ ತೃಪ್ತಿ ಪಟ್ಟುಕೊಂಡಿರುವರು. ನಿಮ್ಮ ಹೃದಯಗಳಲ್ಲಿ ಇರುವುದೆಲ್ಲವನ್ನು ಅಲ್ಲಾಹ್ ಅರಿಯುತ್ತಾನೆ ಮತ್ತು ಅಲ್ಲಾಹ್ ಸರ್ವಜ್ಞನೂ ಸಹನ ಶೀಲನೂ ಆಗಿರುತ್ತಾನೆ." **(ಅಲ್ ಅಹ್‌ಝಾಬ್: 51)**

ಏನಿದ್ದರೂ ಆಯಿಶಾ(ರ) ಪ್ರೀತಿಯಿಂದ ತನ್ನ ಪತಿಯೊಂದಿಗೆ ತಮಾಷೆಗಾಗಿ ಹೇಳಿದ ಮಾತಿದು. ಪ್ರವಾದಿಯವರು(ಸ) ಕೂಡ ಇದನ್ನು ಯಾವುದೇ ಕಲಬೆರಕೆ ಇಲ್ಲದ ನಿಷ್ಕಲ್ಮಶವಾದ ಸಂಬಂಧದ ಸ್ನೇಹದ ಅಭಿವ್ಯಕ್ತಿ ಎಂದು ಪರಿಗಣಿಸಿದರು. ವಿಮರ್ಶಕರು ಆರೋಪಿಸುವಂತೆ ಆಗಿರುತ್ತಿದ್ದರೆ ಕನಿಷ್ಠ ತನ್ನ ಅಸಹನೆಯನ್ನಾದರೂ ಪ್ರವಾದಿಯವರು(ಸ) ಪ್ರಕಟಿಸುತ್ತಿದ್ದರು. ಅಂತಹ ಯಾವ ಘಟನೆ ನಡೆದ ಬಗ್ಗೆ ವಿಮರ್ಶಕರು ಕೂಡ ಆರೋಪಿಸುವುದಿಲ್ಲ.

ಪ್ರವಾದಿ ಮುಹಮ್ಮದ್(ಸ)ರು ತಮ್ಮ ಇಚ್ಛೆಗಳನ್ನು ಅಲ್ಲಾಹನ ಹೆಸರಿನಲ್ಲಿ ಹೊರಡಿಸುತ್ತಿದ್ದರೆಂಬುದಾಗಿ ಆಯಿಶಾ(ರ) ಕೂಡ ನಂಬಿದ್ದರು ಎಂಬ ವಿಚಾರವಾದಿಗಳ ಆರೋಪವು ಎಷ್ಟು ಅಸಂಬದ್ಧವಾಗಿದೆ; ಅಂದರೆ ಅದು ವಿಶ್ಲೇಷಣೆಗೆ ಅರ್ಹವಾಗಿಲ್ಲ ಎಂಬುದನ್ನು ಸಾಮಾನ್ಯ ಬುದ್ಧಿಯುಳ್ಳವರು ಕೂಡ ಅರ್ಥಮಾಡಿಕೊಳ್ಳಬಹುದು. ಅಂತಹ ಅಭಿಪ್ರಾಯ ಅವರದ್ದಾಗಿದ್ದರೆ, ಕುರ್‌ಆನಿನ ನಿರ್ದೇಶನ ಪ್ರಕಾರ ಸುದೀರ್ಘವಾದ

48 ವರ್ಷಗಳನ್ನು ಅವರು ವಿಧವೆಯಾಗಿ ಕಳೆಯುತ್ತಿರಲಿಲ್ಲ. ಪ್ರವಾದಿಯವರು(ಸ) ನಿಧನರಾಗುವಾಗ ಯುವತಿಯಾಗಿದ್ದ ಅಸಾಧಾರಣ ಪ್ರತಿಭೆ ಮತ್ತು ಪಾಂಡಿತ್ಯವನ್ನೂ ಸೌಂದರ್ಯವನ್ನೂ ಹೊಂದಿದ್ದ ಅವರಿಗೆ ಬಹಳ ಸುಲಭದಲ್ಲಿ ಮತ್ತು ಬಹಳ ಶೀಘ್ರ ವಾಗಿ ಮರುವಿವಾಹವನ್ನು ಮಾಡಿಕೊಳ್ಳಬಹುದಾಗಿತ್ತು. ತನ್ನ ಸೃಷ್ಟಿಕರ್ತ ಮತ್ತು ಸಂರಕ್ಷಕ ಅಲ್ಲಾಹನು ಮಾತ್ರವಾಗಿದ್ದಾನೆ ಎಂಬ ದೃಢವಾದ ನಂಬಿಕೆ ಇದ್ದ ಕಾರಣ ದಿಂದ ಮಾತ್ರ ಕುರ್‌ಆನಿನ ನಿರ್ದೇಶನದ ಪ್ರಕಾರ ಹೀಗೆ ಬಾಳಲು ಅವರಿಗೆ ಸಾಧ್ಯವಾಯಿತು ಎಂಬುದು ಎಲ್ಲರಿಗೂ ಸುಲಭದಲ್ಲಿ ಮನವರಿಕೆಯಾಗುತ್ತದೆ.

2. ಪ್ರವಾದಿಯವರನ್ನು(ಸ) ಮತ್ತು ಅವರ ಪತ್ನಿಯರನ್ನು ನಿಂದಿಸಲಿಕ್ಕಾಗಿ ಇಸ್ಲಾಮಿನ ವಿಮರ್ಶಕರು ಉಪಯೋಗಿಸಿರುವ ಇನ್ನೊಂದು ಕುರ್‌ಆನ್ ಸೂಕ್ತವು ಇದಾಗಿದೆ: "ಸತ್ಯವಿಶ್ವಾಸಿಗಳೇ, ಪ್ರವಾದಿಯ ಮನೆಗಳೊಳಗೆ ಅನುಮತಿ ಇಲ್ಲದೆ ಪ್ರವೇಶಿಸಬೇಡಿರಿ. ಊಟದ ಸಮಯವನ್ನು ಕಾದುಕೊಂಡಿರಲೂ ಬೇಡಿರಿ. ನಿಮ್ಮನ್ನು ಊಟಕ್ಕೆ ಕರೆದರೆ ಖಂಡಿತ ಹೋಗಿರಿ. ಆದರೆ ಊಟ ಮಾಡಿಯಾದೊಡನೆ ಚದುರಿ ಬಿಡಿರಿ. ಮಾತನಾಡುತ್ತಾ ಕುಳಿತಿರಬೇಡಿರಿ. ನಿಮ್ಮ ಈ ವರ್ತನೆಗಳು ಪ್ರವಾದಿಗೆ ತೊಂದರೆ ಕೊಡುತ್ತಿವೆ. ಆದರೆ ಅವರು ಸಂಕೋಚದಿಂದ ಏನೂ ಹೇಳುವುದಿಲ್ಲ ಮತ್ತು ಅಲ್ಲಾಹ್ ಸತ್ಯ ಸಂಗತಿಯನ್ನು ಹೇಳಲು ನಾಚುವುದಿಲ್ಲ. ಪ್ರವಾದಿಯವರ ಪತ್ನಿಯರಿಂದ ನಿಮಗೇನಾದರೂ ವಸ್ತುವನ್ನು ಕೇಳಬೇಕಿದ್ದರೆ ತೆರೆಯ ಹಿಂದಿನಿಂದ ಕೇಳಿ ಪಡೆದುಕೊಳ್ಳಿ. ಇದು ನಿಮ್ಮ ಹಾಗೂ ಅವರ ಹೃದಯಗಳ ಶುದ್ಧಿಗೆ ಹೆಚ್ಚು ಸೂಕ್ತವಾದ ಕ್ರಮವಾಗಿದೆ. ಅಲ್ಲಾಹನ ಸಂದೇಶವಾಹಕರಿಗೆ ಕೀಟಲೆ ಕೊಡುವುದು ಎಷ್ಟು ಮಾತ್ರಕ್ಕೂ ಸೂಕ್ತವಲ್ಲ. ಅವರ ಕಾಲಾನಂತರ ಅವರ ಪತ್ನಿಯರೊಂದಿಗೆ ವಿವಾಹ ಮಾಡಿಕೊಳುವುದು ಎಂದೆಂದಿಗೂ ನಿಮಗೆ ಧರ್ಮಸಮ್ಮತವಾದುದಲ್ಲ. ಇದು ಅಲ್ಲಾಹನ ಬಳಿ ಮಹಾ ಪಾಪ ಕಾರ್ಯ." **(ಅಲ್ ಅಹ್‌ಝಾಬ್: 53)**

ವಿಮರ್ಶೆಗಳು

ಪ್ರವಾದಿಯವರಿಗೆ(ಸ) ವಾರ್ಧಕ್ಯದ ಕಾರಣದಿಂದಾಗಿ ಅನೇಕ ಪತ್ನಿಯರನ್ನು ಜೊತೆಗಿರಿಸಿಕೊಂಡು ಅವರನ್ನು ತೃಪ್ತಿಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಈ ವಿಷಯದಲ್ಲಿ ಪ್ರವಾದಿಯವರಿಗೆ ತನ್ನ ಪತ್ನಿಯರ ಕುರಿತು ಭಯವಿತ್ತು. ಆದ ಕಾರಣದಿಂದಾಗಿ ಅವರು ಇಂತಹ ಕಠಿಣವಾದ ಶರತ್ತುಗಳನ್ನು ವಿಧಿಸಿದರು.

ಸುಳ್ಳಾರೋಪಗಳು

ಈ ಮೇಲಿನ ಸೂಕ್ತದಲ್ಲಿರುವುದು ಸಮಾಜದಲ್ಲಿ ನೈತಿಕ ಪಾವಿತ್ರ್ಯತೆ ಮತ್ತು ಧಾರ್ಮಿಕ ಮೌಲ್ಯಗಳನ್ನು ನೆಲೆಗೊಳಿಸಲಿಕ್ಕಾಗಿ ಸಕಲ ಮನುಷ್ಯರಿಗಾಗಿ ನೀಡಲ್ಪಟ್ಟ

ನಿರ್ದೇಶನಗಳಾಗಿವೆ. ಪ್ರವಾದಿಯವರ(ಸ) ಕಾಲಾನಂತರ ಅವರ ಪತ್ನಿಯರನ್ನು ವಿವಾಹ ಮಾಡಬಾರದು ಎಂಬ ಒಂದು ನಿರ್ದೇಶನ ಮಾತ್ರ ಇದಕ್ಕೆ ಹೊರತಾಗಿದೆ. ಇದು ಪ್ರವಾದಿಯವರ(ಸ) ಜೀವನಕ್ಕೆ ಸಂಬಂಧಪಟ್ಟ ಕಾರಣದಿಂದಾಗಿ ಪ್ರವಾದಿ ಯವರನ್ನು(ಸ) ಉದ್ದೇಶಿಸಿ ಇದನ್ನು ಹೇಳಲಾಗಿದೆ.

ಪ್ರವಾದಿಯವರು(ಸ) ಝೈನಬ್(ರ)ರನ್ನು ವಿವಾಹವಾದ ಬಳಿಕ ನೀಡಿದ ವಲೀಮಾ ಸತ್ಕಾರ ಕೂಟಕ್ಕೆ ಬಂದ ಕೆಲವರು ಆಹಾರವನ್ನು ಸೇವಿಸಿದ ನಂತರವೂ ಅಲ್ಲಿಂದ ಏಳದೆ ಹರಟೆ ಹೊಡೆಯಲಾರಂಭಿಸಿದರು. ಅನೇಕ ವಿಷಯಗಳನ್ನು ಮಾತ ನಾಡುತ್ತಾ ಅಲ್ಲಿಯೇ ಕುಳಿತುಕೊಂಡರು. ಆಗ ಈ ವಚನವು ಅವತೀರ್ಣಗೊಂಡಿತು.

ಅನೇಕ ಹೊಣೆಗಾರಿಕೆಗಳನ್ನು ನಿರ್ವಹಿಸಲಿಕ್ಕಿದ್ದ ಪ್ರವಾದಿಯವರ(ಸ) ಸಮಯ ಅನಗತ್ಯವಾಗಿ ಪೋಲು ಮಾಡುವ ಮತ್ತು ಅವರನ್ನು ಉಪದ್ರವಿಸುವ ವ್ಯಕ್ತಿಗಳೊಂದಿಗೆ ಎಚ್ಚರಿಕೆಯ ರೂಪದಲ್ಲಿ ಪವಿತ್ರ ಕುರ್‌ಆನಿನ ಈ ಸೂಕ್ತವು ಅವತೀರ್ಣಗೊಂಡಿತು. ಇದರ ಮೂಲಕ ಸಮಾಜದಲ್ಲಿ ನೆಲೆ ನಿಲ್ಲಬೇಕಾದ ಸಾಮಾನ್ಯ ಶಿಸ್ತು, ಮಾನವೀಯ ಮೌಲ್ಯಗಳು ಮತ್ತು ಶಿಷ್ಟಾಚಾರಗಳನ್ನು ಕಲಿಸಿಕೊಡಲಾಗಿದೆ. ಇದರ ಮೂಲಕ ನಿರ್ದೇಶಿಸಲ್ಪಟ್ಟ ವಿಷಯಗಳು ಸಭ್ಯರಾದ ಎಲ್ಲ ಮನುಷ್ಯರಿಗೆ ಅನ್ವಯವಾಗುತ್ತದೆ. ಸ್ತ್ರೀ–ಪುರುಷ ಸಂಬಂಧಗಳಲ್ಲಿ ಪಾಲಿಸಬೇಕಾದ ನಿಯಮ ನಿಬಂಧನೆಗಳನ್ನೂ ಮರ್ಯಾದೆಗಳನ್ನೂ ಇದು ಒಳಗೊಂಡಿದೆ.

ಧಾರ್ಮಿಕ ಸದಾಚಾರದಿಂದ ಕೂಡಿದ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ನಿಯಮ ನಿರ್ದೇಶನಗಳನ್ನು ಸಹ, ಪರಮ ಪರಿಶುದ್ಧರಾದ ಪ್ರವಾದಿಯವರ(ಸ) ಪತ್ನಿಯರನ್ನು ಪ್ರವಾದಿಯವರು(ಸ) ಸಂಶಯದಿಂದ ನೋಡುತ್ತಿದ್ದರು ಎಂಬ ನಂಬಿಕೆ ಮೂಡುವಂತೆ ದುರ್ವ್ಯಾಖ್ಯಾನಿಸಲು ವಿಕೃತ ಮನಸ್ಸಿನವರಿಗೆ ಮಾತ್ರ ಸಾಧ್ಯ.

ಪ್ರತಿಯೊಬ್ಬರೂ ತಮ್ಮ ಸ್ವಂತ ಮಾನದಂಡದಂತೆ ವಿಷಯಗಳನ್ನು ಗ್ರಹಿಸುತ್ತಾರೆ ಮತ್ತು ಇತರರು ತಮ್ಮಂತೆಯೇ ಇರುತ್ತಾರೆ ಎಂದು ಭಾವಿಸುತ್ತಾರೆ.

3. "ಸಂದೇಶವಾಹಕರೇ, ಅಲ್ಲಾಹನು ನಿಮಗೆ ಹಲಾಲ್ (ಧರ್ಮಸಮ್ಮತ) ಗೊಳಿಸಿರುವ ವಸ್ತುವನ್ನು ನೀವೇಕೆ 'ಹರಾಮ್'(ನಿಷಿದ್ಧ)ಗೊಳಿಸುತ್ತೀರಿ? ನೀವು ನಿಮ್ಮ ಪತ್ನಿಯರ ಮೆಚ್ಚುಗೆಯನ್ನು ಬಯಸುತ್ತೀರಿ (ಎಂಬ ಕಾರಣದಿಂದಲೇ ?) ಅಲ್ಲಾಹನು ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ." (ಅತ್ತಹ್ರೀಮ್: 1)

ಟೀಕೆಗಳು

ಪ್ರವಾದಿಯವರ ಪತ್ನಿ ಹಫ್ಸಾ(ರ)ರವರು ಪ್ರವಾದಿಯವರು ತಮ್ಮ ಸವತಿ ಮಾರಿಯ ಕಿಬ್ತಿಯ(ರ)ರೊಂದಿಗೆ ಮಲಗುವುದನ್ನು ನೋಡಿದರು. ಅದರ ಬಗ್ಗೆ

ಅವರು ಮತ್ತು ಆಯಿಶಾ ಕೋಪೋದ್ರಿಕ್ತರಾಗಿ ಪ್ರವಾದಿಯವರೊಂದಿಗೆ ಮಾತನಾಡಿದರು. ಆಗ ಇನ್ನು ಮುಂದೆ ನಾನು ಮಾರಿಯ ಕಿಬ್ತಿಯ(ರ)ರನ್ನು ಸಮೀಪಿಸುವುದಿಲ್ಲ ಎಂದು ಪ್ರವಾದಿಯವರು ಪ್ರತಿಜ್ಞೆ ಮಾಡಿದರು. ಮಾರಿಯರೊಂದಿಗೆ ಇರುವ ಸಂಬಂಧವನ್ನು ಮುಂದುವರಿಸಲು ಬಯಸಿದ್ದ ಪ್ರವಾದಿಯವರು ಅದಕ್ಕಾಗಿ ಅಲ್ಲಾಹನ ಹೆಸರಿನಲ್ಲಿ ಸೃಷ್ಟಿಸಿದ ಮಾತುಗಳಿವು. ಇದರಿಂದ ಸಂತೃಪ್ತರಾಗದೆ, ಆಯಿಶ(ರ)ರನ್ನು ಮತ್ತು ಹಫ್ಸಾ(ರ)ರನ್ನು ವಿವಾಹ ವಿಚ್ಛೇದನ ನೀಡುವುದಾಗಿ ಬೆದರಿಸಿದರು.

ಕಪೋಲ ಕಲ್ಪಿತ ಕತೆ

ವಿಚಾರವಾದಿಗಳು ಈ ಪವಿತ್ರ ವಚನಕ್ಕೆ ಸಂಪೂರ್ಣ ತಪ್ಪಾದ ವ್ಯಾಖ್ಯಾನವನ್ನು ನೀಡಿದ್ದಾರೆ. ವಾಸ್ತವದಲ್ಲಿ ಇದು ಮಾರಿಯರಿಗೆ ಸಂಬಂಧಪಟ್ಟದ್ದಲ್ಲ.

ಇದರ ಜೊತೆಗೆ ವಿಮರ್ಶೆ ಮಾಡುವವರ ಆರೋಪವು ಎಷ್ಟು ಬಾಲಿಶವಾಗಿದೆ ಎಂದರೆ, ಈ ವಿಷಯ ಇದರ ಅವತೀರ್ಣದ ಹಿನ್ನೆಲೆಯನ್ನು ಪರಿಶೋಧಿಸುವ ಯಾರಿಗೂ ಸುಲಭದಲ್ಲಿ ಮನವರಿಕೆಯಾಗುತ್ತದೆ. ಮಾರಿಯರನ್ನು ಸಮೀಪಿಸುವುದಿಲ್ಲ ವೆಂದು ಪ್ರವಾದಿಯವರು ಪ್ರತಿಜ್ಞೆ ಮಾಡಿರುವುದಾಗಿ ಹೇಳುವ ಅದೇ ವಿಮರ್ಶಕರು, ಆಯಿಶಾ(ರ) ಮತ್ತು ಹಫ್ಸಾ(ರ)ರನ್ನು ವಿವಾಹ ವಿಚ್ಛೇದನ ನೀಡುವುದಾಗಿ ಹೇಳಿ ಬೆದರಿಸಿರುವುದಾಗಿಯೂ ಆರೋಪಿಸುತ್ತಾರೆ. ಅಲ್ಲಾಹನ ಹೆಸರಿನಲ್ಲಿ ಪ್ರವಾದಿಯವರು(ಸ) ಸೃಷ್ಟಿಸಿರುವ ವಚನಗಳು ಪವಿತ್ರ ಕುರ್‌ಆನ್ ಸೂಕ್ತಗಳಾಗಿವೆ ಎಂಬ ಅಭಿಪ್ರಾಯ ಆಯಿಶಾ(ರ) ಮತ್ತು ಹಫ್ಸಾ(ರ)ರಿಗೆ ಇರುವುದಾಗಿದ್ದರೆ, ಈ ಸೂಕ್ತದ ಆಧಾರದಲ್ಲಿ ಪ್ರತಿಜ್ಞೆಯನ್ನು ತಿದ್ದುಪಡಿ ಮಾಡಲು ಅವರಿಬ್ಬರೂ ಪ್ರವಾದಿಯವರಿಗೆ(ಸ) ಅನುಮತಿ ನೀಡುತ್ತಿರಲಿಲ್ಲ. ತಮ್ಮ ತೀರ್ಮಾನದಲ್ಲಿ ದೃಢವಾಗಿ ನಿಲ್ಲಲು ಅವರನ್ನು ನಿರ್ಬಂಧಿಸು ತ್ತಿದ್ದರು. ಅದರ ಜೊತೆಗೆ ಇನ್ನೊಂದು ವಿಷಯವೂ ಸ್ಪಷ್ಟವಾಗಬೇಕಿದೆ.

ಪ್ರವಾದಿಯವರನ್ನು(ಸ) ನಿಂದಿಸಲಿಕ್ಕಾಗಿ, ವಿಮರ್ಶಿಸಲಿಕ್ಕಾಗಿ, ಕುರ್‌ಆನಿನ ಸೂಕ್ತಗಳನ್ನು ಉಪಯೋಗಿಸಿದ ವಿಚಾರವಾದಿಗಳು ಆ ಮೂಲಕ ಇವು ಯಾವುವೂ ಪ್ರವಾದಿಯವರು(ಸ) ಸ್ವಯಂ ಹೇಳಿದ್ದಲ್ಲ ಎಂಬುದನ್ನು ಬಹಿರಂಗವಾಗಿ ಒಪ್ಪಿ ಕೊಂಡಂತಾಗಿದೆ. ಪ್ರವಾದಿಯವರು(ಸ) ಸ್ವಯಂ ತಮ್ಮನ್ನೇ ವಿಮರ್ಶಿಸುವಂತಹ ಮಾತುಗಳು ಲೋಕಾಂತ್ಯದ ವರೆಗೆ ಬಾಕಿ ಉಳಿಯುವ ಗ್ರಂಥದಲ್ಲಿ ಬರೆದು ಇಟ್ಟುಕೊಳ್ಳಬೇಕೆಂದಿರಲಿಲ್ಲ ಅಥವಾ ಅದು ಕೂಡ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಪ್ರವಾದಿಯವರಿಗೆ(ಸ) ಇರಲಿಲ್ಲ ಎಂಬುದು ಅವರ ವಾದವಾಗಿದ್ದರೆ ಅಂತಹ ಒಂದು ವ್ಯಕ್ತಿಗೆ ಇಂತಹ ಒಂದು ಗ್ರಂಥವನ್ನು ರಚಿಸಲು ಹೇಗೆ ಸಾಧ್ಯವಾಯಿತು?

ವಿಮರ್ಶಕರು ಹೇಳುತ್ತಿರುವ ವಿಷಯ ಪ್ರಸ್ತುತ ಸೂಕ್ತದ ಅವತೀರ್ಣ ಹಿನ್ನೆಲೆ

ಅಲ್ಲವೇ ಅಲ್ಲ. ಇಮಾಮ್ ಬುಖಾರಿಯವರು ಉಲ್ಲೇಖಿಸಿದ ಪ್ರವಾದಿವಚನದಲ್ಲಿ ಇದನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಝೈನಬ್(ರ)ರವರ ಮನೆಯಲ್ಲಿ ಪ್ರತ್ಯೇಕ ಸುಗಂಧವುಳ್ಳ ಜೇನನ್ನು ಸವಿದು ಬಂದ ಪ್ರವಾದಿಯವರೊಂದಿಗೆ, ಪತ್ನಿಯರಾದ ಆಯಿಶಾ(ರ) ಮತ್ತು ಹಫ್ಸಾ(ರ) ಅಸಹ್ಯವಾದ ದುರ್ಗಂಧ ಬರುತ್ತಿದೆ ಎಂದು ಹೇಳಿದರು. ಅವರು ಜೇನು ಸೇವಿಸಿದ್ದರ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಆಗ ಪ್ರವಾದಿಯುವರು(ಸ) ನಾನು ಇನ್ನು ಮುಂದೆ ಜೇನು ಸೇವಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು. ಪ್ರವಾದಿಯವರಿಗೆ(ಸ) ಬಹಳ ಇಷ್ಟವಾದ ಮತ್ತು ಧರ್ಮಸಮ್ಮತವಾದ ಜೇನನ್ನು ಪತ್ನಿಯರ ಅಭಿಲಾಷೆಯನ್ನು ಈಡೇರಿಸಲಿಕ್ಕಾಗಿ ಸ್ವತಃ ನಿಷಿದ್ಧ ಮಾಡಿ ಕೊಂಡದ್ದನ್ನು ಪ್ರಸ್ತುತ ಸೂಕ್ತದಲ್ಲಿ ವಿಮರ್ಶಿಸಲಾಗಿದೆ. ಬಹಳ ಪ್ರಬಲವಾದ ಆಧಾರ ಗಳೊಂದಿಗೆ ಅಧಿಕಾರಯುತವಾಗಿ ಈ ವಾಸ್ತವಿಕತೆಯನ್ನು ವ್ಯಕ್ತಪಡಿಸಿರುವುದರಿಂದ ಕುರ್‌ಆನ್ ಮತ್ತು ಪ್ರವಾದಿಯೊಂದಿಗಿರುವ ವಿರೋಧವನ್ನು ತೀರಿಸಲಿಕ್ಕಾಗಿ ಕಪೋಲ ಕಲ್ಪಿತ ಕಥೆಗಳನ್ನು ವಿಮರ್ಶಕರು ಪ್ರಚಾರಪಡಿಸುತ್ತಿದ್ದಾರೆ.

4. ಕೇವಲ ಕುರ್‌ಆನ್ ಸೂಕ್ತಗಳನ್ನು ಮಾತ್ರವಲ್ಲ, ಪ್ರವಾದಿವಚನಗಳನ್ನು ಕೂಡ ವಿಚಾರವಾದಿಗಳು ದುರ್ವ್ಯಾಖ್ಯಾನಿಸಿ ತಪ್ಪು ಕಲ್ಪನೆಗಳನ್ನು ಹರಡಲು ಪ್ರಯತ್ನಿಸಿದ್ದಾರೆ.

ಅನಸ್(ರ)ರವರು ಈ ರೀತಿ ವರದಿ ಮಾಡಿರುತ್ತಾರೆ: ಪ್ರವಾದಿಯವರು ತಮ್ಮ ಪತ್ನಿಯಂದಿರನ್ನು ಹಗಲಿನ ವೇಳೆ ಅಥವಾ ರಾತ್ರಿಯ ವೇಳೆ ಒಂದು ಗಂಟೆಯ ಒಳಗಾಗಿ ಸಂದರ್ಶಿಸುತ್ತಿದ್ದರು. ಅವರು ಹನ್ನೊಂದು ಮಂದಿ ಇದ್ದರು. ಇದು ಹೇಗೆ ಸಾಧ್ಯವಾಗುತ್ತಿತ್ತೆಂದು ಕೆಲವರು ಅನಸ್(ರ)ರವರೊಂದಿಗೆ ಪ್ರಶ್ನಿಸಿದರು. "ಮೂವತ್ತು ಜನರ ಶಕ್ತಿ ಪ್ರವಾದಿಯವರಿಗೆ(ಸ) ಸಿಕ್ಕಿರುವ ಕಾರಣದಿಂದಾಗಿ ಎಂದು ನಾವು ಹೇಳುತ್ತಿದ್ದೆವು."

ವಿಮರ್ಶೆಗಳು

ಇದು ನಂಬಲರ್ಹವಲ್ಲ. ಕೇವಲ ಒಂದು ಗಂಟೆಯೊಳಗೆ ಯಾರಿಗೂ 11 ಮಂದಿಯೊಂದಿಗೆ ಲೈಂಗಿಕ ಸಂಪರ್ಕ ನಡೆಸಲು ಖಂಡಿತ ಸಾಧ್ಯವಿಲ್ಲ ಅಥವಾ ಮುಹಮ್ಮದರು ಹಾಗೆ ಮಾಡಿದ್ದಾರಾದರೆ, ಅವರಿಗಿಂತ ಅಧಿಕ ಲೈಂಗಿಕ ಶಕ್ತಿ ಮತ್ತು ಕಾಮುಕತೆ ಇರುವ ಯಾರು ಇರಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ.

ದುರ್ವ್ಯಾಖ್ಯಾನ

ಪ್ರವಾದಿಯವರಿಗೆ(ಸ) ಏಕಕಾಲದಲ್ಲಿ ಒಂಬತ್ತಕ್ಕಿಂತ ಹೆಚ್ಚು ಪತ್ನಿಯರು ಇರಲಿಲ್ಲ ಎಂಬುದು ಐತಿಹಾಸಿಕ ಸತ್ಯವಾಗಿದೆ. ಆದುದರಿಂದಲೇ ಇದೇ ಪ್ರವಾದಿ ವಚನದ ಇನ್ನೊಂದು ವರದಿಯಲ್ಲಿ ಒಂಬತ್ತು ಎಂದು ಬಂದಿದೆ. ಪ್ರವಾದಿ ವಚನದ

ಅರಬಿ ಮೂಲದಲ್ಲಿ 'ತಿರುಗುವುದು' ಎಂಬ ಅರ್ಥ ಬರುವ 'ಯದುರ್ರು' ಎಂಬ ಪದವಿದೆ. ಇದರ ಅರ್ಥ ಸಂದರ್ಶಿಸುವುದು. ಲೈಂಗಿಕ ಸಂಬಂಧ ಬೆಳೆಸಿದರು ಎಂದು ಹದೀಸ್ ವಚನದಲ್ಲಿ ಇಲ್ಲ. ಎಲ್ಲಾ ಪತ್ನಿಯರೊಂದಿಗೂ ಒಂದೇ ರೀತಿಯಲ್ಲಿ ನ್ಯಾಯ ಪಾಲಿಸಲಿಕ್ಕಾಗಿ ಪ್ರವಾದಿಯವರು(ಸ) ಎಲ್ಲ ಪತ್ನಿಯರೊಂದಿಗೂ ಸಮಯವನ್ನು ಕಳೆಯಲಿಕ್ಕಾಗಿ ಒಂದೇ ರೀತಿಯಲ್ಲಿ ಪ್ರತಿದಿನ ಒಬ್ಬ ಪತ್ನಿಗಾಗಿ ಮೀಸಲಿರಿಸಿದ್ದರು. ಇದನ್ನು ಪಾಲಿಸಲಿಕ್ಕಾಗಿ ಬಹಳ ಕ್ರಮಬದ್ಧತೆಯನ್ನು ಅಳವಡಿಸಿಕೊಂಡಿದ್ದರು. ಯಾರಾದರೂ ಒಬ್ಬರು ತನ್ನ ದಿನವನ್ನು ಬೇರೆ ಯಾರಿಗಾದರೂ ದಾನವಾಗಿ ನೀಡಿದರೆ ಮಾತ್ರ ಪ್ರವಾದಿಯವರು(ಸ) ಇದರಲ್ಲಿ ಬದಲಾವಣೆಯನ್ನು ಮಾಡುತ್ತಿದ್ದರು.

ಆದರೆ ಸಮಯ ಸಂದರ್ಭ ಕೂಡಿ ಬಂದರೆ ಒಂದೇ ದಿವಸ ಕಡಿಮೆ ಸಮಯವನ್ನು ತೆಗೆದುಕೊಂಡು ಎಲ್ಲರ ಮನೆಗಳನ್ನು ಸಂದರ್ಶಿಸುತ್ತಿದ್ದರು. ಸಮಾನ ನೀತಿಯನ್ನು ಪಾಲಿಸುತ್ತಿದ್ದ ಸ್ನೇಹನಿಧಿಯಾದ ಪತಿ ಎಂಬ ನೆಲೆಯಲ್ಲಿ ಪ್ರವಾದಿಯವರು(ಸ) ತೋರಿಸಿದ ಈ ಮಹತ್ವಪೂರ್ಣವಾದ ಮಾದರಿಯನ್ನು ವಿಮರ್ಶಕರು ದುರ್ವ್ಯಾಖ್ಯಾನ ನಡೆಸಿ ಅಪಹಾಸ್ಯ ಮಾಡುತ್ತಾ ನಿಂದಿಸಲು ಬಳಸುತ್ತಾರೆ. ಇದರ ಬಗ್ಗೆ ಅನಸ್(ರ)ರವರ ಪ್ರತಿಕ್ರಿಯೆ 'ಮೂವತ್ತು ಜನರ ಶಕ್ತಿ ಪ್ರವಾದಿಯವರಿಗೆ ಅಲ್ಲಾಹನು ನೀಡಿದ್ದನು ಎಂದು ನಾವು ಹೇಳುತ್ತಿದ್ದೆವು' ಎಂದು ಬಂದಿದೆ. ಹಾಗೆ ಹೇಳುತ್ತಿದ್ದಾರೆ ಅಥವಾ ಹೇಳಿದ್ದರು ಎಂದು ಹೇಳಲಾಗಿಲ್ಲ. ಎಲ್ಲಾ ಪತ್ನಿಯರನ್ನು ಎಂದು ಹೇಳುವಾಗ ಅದಕ್ಕೆ ಇರುವ ಶಾರೀರಿಕ ಶಕ್ತಿ ಅವರಲ್ಲಿತ್ತೋ ಎಂಬ ಪ್ರಶ್ನೆಗೆ ನೀಡಬೇಕಾದ ಉತ್ತರ ಸ್ವಾಭಾವಿಕವಾಗಿ ತಮಾಷೆಯಾಗಿ ಪರಿಗಣಿಸಬೇಕಿದೆ. ಈ ಮೇಲಿನ ಪ್ರವಾದಿವಚನವನ್ನು ಓದುವಾಗಲೇ ಅದು ಮನವರಿಕೆಯಾಗುತ್ತದೆ. ಲೈಂಗಿಕ ಸಾಮರ್ಥ್ಯ ಎಂಬ ಉಲ್ಲೇಖ ಕೂಡ ಹದೀಸ್‌ನಲ್ಲಿ ಇಲ್ಲ. ಹನ್ನೊಂದು ಪತ್ನಿಯರೊಂದಿಗೆ ಪ್ರವಾದಿಯವರು(ಸ) ಒಂದು ಗಂಟೆಯೊಳಗೆ ಲೈಂಗಿಕ ಸಂಬಂಧ ಮಾಡುತ್ತಿದ್ದರು ಎಂಬ ವಿಮರ್ಶಕರ ಮಾತು ಸ್ವಯಂಕೃತವಾಗಿದೆ. ಪ್ರವಾದಿವಚನದಲ್ಲಿ ಅಂತಹ ಯಾವುದೇ ಉಲ್ಲೇಖವಿಲ್ಲ.

5. ಹಂಝ ಬಿನ್ ಅಬೀ ಉಸೈದ್(ರ)ರಿಂದ ಈ ರೀತಿ ವರದಿಯಾಗಿದೆ: ಒಮ್ಮೆ ಪ್ರವಾದಿಯವರೊಂದಿಗೆ(ಸ) ನಾವು ಯಾತ್ರೆ ಹೊರಟೆವು. ಶೌತ್ ತೋಟವನ್ನು ಗುರಿಯಾಗಿಸಿ ನಾವು ಮುಂದುವರಿಯುತ್ತಿದ್ದೆವು. ಹಾಗೆ ನಾವು ಅಲ್ಲಿ ತಲುಪಿದೆವು ಎರಡು ತೋಟಗಳ ಮಧ್ಯೆ ತಲುಪಿದಾಗ ನಾವು ಅಲ್ಲಿ ಸ್ವಲ್ಪ ಕಾಲ ವಿರಮಿಸಿದೆವು. ಪ್ರವಾದಿಯವರು(ಸ) ನಮ್ಮೊಂದಿಗೆ ಅಲ್ಲಿ ಕುಳಿತುಕೊಳ್ಳಲು ಹೇಳಿದರು. ಅವರು ತೋಟದೊಳಗೆ ಹೋದರು. ಆಗ ಜೌನ್ ಗೋತ್ರದ ಓರ್ವ ಸ್ತ್ರೀಯನ್ನು ಅಲ್ಲಿಗೆ ಕರೆತರಲಾಗಿತ್ತು. ಖರ್ಜೂರದ ಮರದಿಂದ ತಯಾರಿಸಿದ ಮನೆಯಲ್ಲಿ ಆ ಸ್ತ್ರೀ ಇದ್ದರು. ಆಕೆ ಶರಾಹೀಲ್‌ರ ಮಗಳು ಉಮೈಮಾ ಆಗಿದ್ದರು. ಅವರ ಜೊತೆ ಎದೆ

ಹಾಲಿನ ಸಂಬಂಧವಿದ್ದ ಸಾಕುತಾಯಿ ಕೂಡ ಜೊತೆಗಿದ್ದರು. ಪ್ರವಾದಿಯವರು(ಸ) ಅವರ ಬಳಿ ತಲುಪಿ ಹೀಗೆ ಹೇಳಿದರು, "ನೀನು ನಿನ್ನನ್ನು ನನಗೆ ಸಮರ್ಪಿಸಿಕೋ." ಆಗ ಅವರು ಹೇಳಿದರು, "ಓರ್ವ ರಾಣಿ ತನ್ನನ್ನು ಸಾಮಾನ್ಯ ವ್ಯಕ್ತಿಗೆ ಸಮರ್ಪಿಸುತ್ತಾಳೆಯೇ?"

ಅವರ ಮೇಲೆ ಕೈ ಇಟ್ಟು ಅವರನ್ನು ಸಮಾಧಾನ ಪಡಿಸಲಿಕ್ಕಾಗಿ ಪ್ರವಾದಿಯವರು(ಸ) ಕೈಗಳನ್ನು ಚಾಚಿದರು. ಆಗ ಅವರು ಹೀಗೆ ಹೇಳಿದರು, "ನಾನು ನಿಮ್ಮಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ." ಬಳಿಕ ಪ್ರವಾದಿಯವರು(ಸ) ನಮ್ಮ ಬಳಿ ಬಂದರು ಮತ್ತು ಹೇಳಿದರು, "ಅಬೂ ಉಸೈದ್! ಅವರಿಗೆ ಎರಡು ರಾಸಿಖಿಯ್ಯ ವಸ್ತ್ರಗಳನ್ನು ನೀಡಿರಿ. ಅವರನ್ನು ಅವರ ಕುಟುಂಬದವರ ಬಳಿ ತಲುಪಿಸಿಬಿಡಿ." **(ಬುಖಾರಿ: 5255)**

ವಿಮರ್ಶೆಗಳು

ಪ್ರವಾದಿಯವರು(ಸ) ಅನ್ಯಸ್ತ್ರೀಯನ್ನು ಪಡೆಯುವ ಸಲುವಾಗಿ ಅನುಯಾಯಿಗಳಿಂದ ಬೇರ್ಪಟ್ಟು ಒಬ್ಬಂಟಿಯಾಗಿ ತೋಟದೊಳಗೆ ಹೋದರು. ಅವರ ಅನುಮತಿ ಇಲ್ಲದೆ ಅವರನ್ನು ಹಿಂಸಿಸಲು ಪ್ರಯತ್ನಿಸಿದರು. ಸ್ತ್ರೀ ಅದಕ್ಕೆ ಅನುಮತಿಯನ್ನು ನೀಡದ ಕಾರಣ ಏನೂ ಮಾಡಲಾಗಲಿಲ್ಲ. ಸ್ವಯಂ ತಮ್ಮನ್ನು ಸಮರ್ಪಿಸಿಕೊಳ್ಳುವವರನ್ನು ಪ್ರವಾದಿಯವರಿಗೆ(ಸ) ಉಪಯೋಗಿಸಬಹುದು ಎಂಬ ಕುರ್‌ಆನಿನ ವಚನವನ್ನು ಉಪಯೋಗಿಸಿ, ಆ ಸ್ತ್ರೀಯನ್ನು ವಶೀಕರಣಗೊಳಿಸಲು ಪ್ರವಾದಿಯವರು ಬಯಸಿದ್ದರು. ಅವರು ಅದಕ್ಕೆ ಬಲಿ ಬೀಳಲಿಲ್ಲ. ಮಾತ್ರವಲ್ಲ ಅಸಭ್ಯ ವರ್ತನೆ ತೋರಿಸಿದ್ದಕ್ಕಾಗಿ ಅವರನ್ನು ನಿಂದಿಸಿ ಹೊರಹಾಕಿದರು.

ಗಂಭೀರವಾದ ಆರೋಪಗಳು

ಇಮಾಮ್ ಬುಖಾರಿಯವರು ಈ ವಿಷಯದಲ್ಲಿ ಉಲ್ಲೇಖಿಸಿದ ಪ್ರವಾದಿ ವಚನದ ಮುಂದೆ ಇರುವ ಮತ್ತು ಬಳಿಕ ಇರುವ ಪ್ರವಾದಿ ವಚನಗಳನ್ನು ಅಧ್ಯಯನ ಮಾಡಿದಾಗ ಎಲ್ಲರಿಗೂ ಸತ್ಯವು ಮನದಟ್ಟಾಗುತ್ತದೆ. ವಿಮರ್ಶಕರು ಕೃತಕತೆಯನ್ನು ಸೃಷ್ಟಿಸಿದ್ದು ಪ್ರವಾದಿಯವರ(ಸ) ಮೇಲೆ ಸುಳ್ಳಾರೋಪವನ್ನು ಹೊರಿಸುವುದಕ್ಕಾಗಿದೆ. ಇಲ್ಲಿ ಉಲ್ಲೇಖಿಸಲಾದ ಸ್ತ್ರೀಯ ಹೆಸರು ಉಮೈಮಾ ಎಂದಾಗಿದೆ. ತಂದೆ ಹೆಸರು ಶರಾಹೀಲ್. ಅವರು ಕಿಂದಿಯ್ಯ ಗೋತ್ರಕ್ಕೆ ಸೇರಿದವರು. ಅವರ ಪಿತಾಮಹ ನುಅಮಾನ್ ಇಬ್ನು ಅಬಿಲ್ ಜೌನ್. ಅವರೊಂದಿಗೆ ಸೇರಿಸಿಯು ಅವರ ಹೆಸರು ಪ್ರವಾದಿ ವಚನಗಳಲ್ಲಿ ಬಂದಿರುತ್ತದೆ. ಅದೇ ರೀತಿ ಕಿಂದಿಯ್ಯ ಎಂದು ಬಂದಂತೆಯೇ ಜೌನಿಯ್ಯ ಎಂದೂ ಬಂದಿದೆ. ತಂದೆ ಶರಾಹೀಲ್ ಇಸ್ಲಾಮ್ ಸ್ವೀಕರಿಸಿದ ಬಳಿಕ

ಪ್ರವಾದಿಯವರನ್ನು(ಸ) ಭೇಟಿಯಾಗಲು ಬಂದರು. ತನ್ನ ಮಗಳು ಉಮ್ಮೈಮಾರನ್ನು ಪ್ರವಾದಿಯವರಿಗೆ(ಸ) ವಿವಾಹ ಮಾಡಿ ಕೊಡಲು ಅವರು ಬಹಳ ಆಸೆ ಪಟ್ಟರು. ಅದಕ್ಕಾಗಿ ಪ್ರವಾದಿಯವರನ್ನು(ಸ) ವಿವಾಹ ಮಾಡಲು ಒತ್ತಾಯಿಸಿದರು. ಗೋತ್ರದ ನಾಯಕರೂ ಆಗಿದ್ದ, ಹೊಸದಾಗಿ ಆಗಮಿಸಿದ ವ್ಯಕ್ತಿಯನ್ನು ನಿರಾಶೆಗೊಳಿಸಬಾರದೆಂದು ಪ್ರವಾದಿಯವರು(ಸ) ಶರಾಹೀಲ್‌ರ ಪ್ರಸ್ತಾಪವನ್ನು ಅಂಗೀಕರಿಸಿದರು. ತನ್ನ ಪತ್ನಿಯಾದ ಉಮ್ಮೈಮಾರನ್ನು ಸಂದರ್ಶಿಸಲಿಕ್ಕಾಗಿ ಅವರು ಶೌತ್ ಕಡೆಗೆ ಅನುಯಾಯಿಗಳ ಜೊತೆ ಹೋದರು. ಉಮ್ಮೈಮಾ ಇಸ್ಲಾಮ್ ಸ್ವೀಕರಿಸಿದ ಕೂಡಲೇ ಇದು ನಡೆದಿದ್ದರಿಂದ, ಅವರಿಗೆ ಪ್ರವಾದಿಯವರ ಕುರಿತು, ಅವರ ಪದವಿಯ ಕುರಿತು, ಮಹತ್ವದ ಕುರಿತು ಯಾವ ತಿಳುವಳಿಕೆಯು ಇರಲಿಲ್ಲ. ಆದುದರಿಂದ ಅವರ ಪತ್ನಿ ಪದವಿಯನ್ನು ಸ್ವೀಕರಿಸಲು ಇಷ್ಟಪಡಲಿಲ್ಲ. ಇದನ್ನು ಅರಿತುಕೊಂಡ ಪ್ರವಾದಿಯವರು(ಸ) ಅವರ ಸಂಕಷ್ಟವನ್ನು ದೂರೀಕರಿಸಲಿಕ್ಕಾಗಿ ಅವರೊಂದಿಗೆ ಸ್ವಯಂ ಸಮರ್ಪಿಸಿಕೊಳ್ಳಲು ಕೇಳಿಕೊಂಡರು. ಆದರೆ ಅದು ಅವರಿಗೆ ಇಷ್ಟವಿಲ್ಲವೆಂದು ಮನವರಿಕೆಯಾಯಿತು. ಆ ಕೂಡಲೇ ಉಮ್ಮೈಮಾರ ಅನುಮತಿ ಇಲ್ಲದೆ ಅವಳ ತಂದೆ ಅವಳನ್ನು ನನಗೆ ವಿವಾಹ ಮಾಡಿಕೊಟ್ಟದ್ದು ಎಂಬುದನ್ನು ಪ್ರವಾದಿಯವರು(ಸ) ಅರಿತುಕೊಂಡರು.

ಆದುದರಿಂದ ಅವರು ಅಲ್ಲಿಯೇ ಅವರಿಗೆ ವಿವಾಹ ವಿಚ್ಛೇದನ ನೀಡಿದರು. ಬೆಲೆಬಾಳುವ ಎರಡು ಬಿಳಿ ಬಣ್ಣದ ವಸ್ತ್ರಗಳನ್ನು ಅವರಿಗೆ ಉಡುಗೊರೆಯಾಗಿ ನೀಡಿದರು. ಹೀಗೆ ಬಹಳ ಗೌರವಯುತವಾಗಿ ಮತ್ತು ಮಾದರಿಯೋಗ್ಯ ರೀತಿಯಲ್ಲಿ ಪ್ರವಾದಿಯವರು(ಸ) ಈ ವಿಷಯವನ್ನು ನಿರ್ವಹಿಸಿದರು.

ಈ ವಿಷಯಕ್ಕೆ ಸಂಬಂಧಿಸಿದ ಪ್ರವಾದಿ ವಚನಗಳನ್ನು ಪರಿಶೋಧಿಸಿದಾಗ ಇವೆಲ್ಲವೂ ಮನವರಿಕೆಯಾಗುತ್ತದೆ. ವಿಮರ್ಶಕರು ಉಲ್ಲೇಖಿಸಿದ ಪ್ರವಾದಿವಚನದ ಮುಂದಿನ ಅಂದರೆ 5,254ನೇ ಸಂಖ್ಯೆಯ ಇಮಾಮ್ ಬುಖಾರಿ ಉಲ್ಲೇಖಿಸಿದ ಪ್ರವಾದಿ ವಚನದಲ್ಲಿ ಹೀಗಿದೆ: ಇಮಾಮ್ ಔಝಾಈ ಹೇಳುತ್ತಾರೆ– ನಾನು ಝುಹ್ರಿಯವರೊಂದಿಗೆ ಪ್ರಶ್ನಿಸಿದೆ, "ಪ್ರವಾದಿಯವರ ಪತ್ನಿಯರ ಪೈಕಿ ಯಾರು ಅವರಿಂದ ಅಲ್ಲಾಹನ ಅಭಯವನ್ನು ಯಾಚಿಸಿದ್ದರು?" ಅವರು ಈ ರೀತಿ ಹೇಳಿದರು, "ಆಯಿಶಾ(ರ) ಈ ರೀತಿ ಹೇಳಿರುವುದಾಗಿ ಉರ್ವ ನನಗೆ ತಿಳಿಸಿರುತ್ತಾರೆ: ಜೌನ್ ಗೋತ್ರದ ಸ್ತ್ರೀಯನ್ನು ಪ್ರವಾದಿಯ ಬಳಿಗೆ ಕರೆತಂದಾಗ ಮತ್ತು ಪ್ರವಾದಿಯವರು ಭೇಟಿಯಾಗಲು ಅವರ ಬಳಿ ಹೋದಾಗ ಅವರು, 'ನಾನು ತಮ್ಮಿಂದ ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ' ಎಂದರು. ಆಗ ಪ್ರವಾದಿಯವರು(ಸ), 'ನೀನು ಅತಿ ಮಹಾನನಲ್ಲಿಯೇ ಆಶ್ರಯವನ್ನು ಕೇಳಿಕೊಂಡಿರುವೆ. ಇನ್ನು ನೀನು ನಿನ್ನ ಕುಟುಂಬದ ಬಳಿ ಮರಳಿ ಹೋಗು' ಎಂದರು." **(ಬುಖಾರಿ: ಕಿತಾಬುತ್ತಲಾಕ್: 5254)**

ಹೀಗೆ ಪ್ರವಾದಿಯವರು ಅವರನ್ನು ವಿಚ್ಛೇದಿಸಿದರು. ಆದುದರಿಂದ ಇಮಾಮ್ ಬುಖಾರಿಯವರು ಈ ಪ್ರವಾದಿ ವಚನವನ್ನು 'ವಿವಾಹ ವಿಚ್ಛೇದನ (ತಲಾಕ್)' ಎಂಬ ಅಧ್ಯಾಯದಲ್ಲಿ ಸೇರಿಸಿರುತ್ತಾರೆ. ಇಲ್ಲಿ ಉಲ್ಲೇಖಿಸಲಾಗಿರುವ ಪ್ರವಾದಿವಚನದಲ್ಲಿ ಪತ್ನಿಯರಿಂದ ಎಂಬ ಪ್ರಯೋಗ ಪ್ರವಾದಿಯವರು(ಸ) ಅವರನ್ನು ವಿವಾಹವಾಗಿದ್ದರು ಎಂಬುದನ್ನು ತಿಳಿಸುವುದಕ್ಕೆ ಪರ್ಯಾಪ್ತವಿದೆ. 'ವಿವಾಹ ವಿಚ್ಛೇದನ' ಎಂಬ ಅಧ್ಯಾಯದಲ್ಲಿ ಇದನ್ನು ಸೇರಿಸಲಿಕ್ಕಿರುವ ಕಾರಣವೂ ಕೂಡ ಇದುವೇ ಆಗಿದೆ.

ಅದರ ಕೆಳಗೆ ಇಮಾಮ್ ಬುಖಾರಿಯವರಿಂದಲೇ ವರದಿಯಾದ ಪ್ರವಾದಿ ವಚನದಲ್ಲಿ ಪ್ರವಾದಿಯವರು(ಸ) ಉಮ್ಮೈಮಾರನ್ನು ವಿವಾಹ ಮಾಡಿಕೊಂಡಿದ್ದರು ಎಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಹುಸೈನ್ ಬಿನ್ ವಲೀದ್ ಅಲ್ ನೈಸಾಪುರಿ ಹೇಳುತ್ತಾರೆ, "ಅವರು ಅಬ್ಬಾಸ್ ಬಿನ್ ಸಹಲ್(ರ)ರಿಂದ ತಮ್ಮ ತಂದೆಯವರಾದ ಅಬೂ ಉಸೈದ್(ರ)ರಿಂದ ಈ ರೀತಿ ಉಲ್ಲೇಖಿಸಿರುತ್ತಾರೆ ಅವರಿಬ್ಬರೂ ಈ ರೀತಿ ಹೇಳಿದರು: ಪ್ರವಾದಿವರ್ಯರು(ಸ) ಶರಾಹೀಲ್‌ರ ಮಗಳು ಉಮ್ಮೈಮಾರನ್ನು ವಿವಾಹ ಮಾಡಿಕೊಂಡರು. ಅವರನ್ನು ಪ್ರವಾದಿಯವರ(ಸ) ಬಳಿಗೆ ಕರೆದುಕೊಂಡು ಬಂದಾಗ ಪ್ರವಾದಿಯವರು(ಸ) ಎರಡು ಕರಗಳನ್ನು ಮುಂದಕ್ಕೆ ಚಾಚಿ ಸ್ವೀಕರಿಸಿದರು. ಅವರು ಅದು ಇಷ್ಟವಾಗದಂತೆ ವರ್ತಿಸಿದರು. ಆಗ ಪ್ರವಾದಿಯವರು(ಸ) ಅವರೊಂದಿಗೆ ಅವರ ಸ್ವಂತ ಮನೆಗೆ ಹಿಂದಿರುಗಿ ಹೋಗಲು ಅಗತ್ಯವಾದ ವ್ಯವಸ್ಥೆಗಳನ್ನು ಒದಗಿಸಿಕೊಟ್ಟರು. ಸ್ತ್ರೀಯರು ಧರಿಸುವ ಎರಡು ರಾಸಿಖಿಯ್ಯ ವಸ್ತ್ರಗಳನ್ನು ಅವರಿಗೆ ಉಡುಗೊರೆಯಾಗಿ ನೀಡಲು ಅಬೂ ಉಸೈದ್(ರ)ರೊಂದಿಗೆ ಕೇಳಿಕೊಂಡರು. **(ಬುಖಾರಿ: 5256)**

ಪ್ರವಾದಿಯವರು(ಸ) ಉಮ್ಮೈಮಾರನ್ನು ವಿವಾಹವಾಗಿದ್ದರು ಎಂಬುದು ಅಭಿಪ್ರಾಯ ವ್ಯತ್ಯಾಸವಿಲ್ಲದ ವಾಸ್ತವಿಕತೆ ಅಥವಾ ಇಜ್ಮಾಅ್ ಆದ ವಿಷಯವಾಗಿದೆ. ಈ ವಿಷಯವನ್ನು ಇಮಾಮ್ ಇಬ್ನು ಅಬ್ದುಲ್ ಬರ್ರ್ ಕೂಡ ಉಲ್ಲೇಖಿಸಿರುತ್ತಾರೆ. **(ಫತ್ಹುಲ್ ಬಾರಿ: 15/80)**

ತಬಖಾತುಲ್ ಕುಬ್ರಾದಲ್ಲಿಯೂ ಈ ವಿಷಯವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಪ್ರವಾದಿಯವರು(ಸ) ಉಮ್ಮೈಮಾರೊಂದಿಗೆ ಹೋಲಿಕೆ ಇಲ್ಲದ ಗೌರವ ಮತ್ತು ಉದಾರತೆಯನ್ನು ತೋರಿಸಿದರು. ತನ್ನ ಪತ್ನಿಯಾಗಿದ್ದರೂ ಅವರಿಗೆ ಇಷ್ಟವಿಲ್ಲದಿರುವ ವಿವಾಹವು ನಡೆದ ಕಾರಣದಿಂದಾಗಿ ಅವರನ್ನು ಲೈಂಗಿಕವಾಗಿ ಉಪಯೋಗಿಸಲಿಲ್ಲ. ಉಮ್ಮೈಮಾರ ಮನದಿಂಗಿತವನ್ನು ಅರಿತು ಅದರಂತೆ ನಡೆದುಕೊಂಡು ಬೆಲೆಬಾಳುವ ಉಡುಗೊರೆಗಳನ್ನು ನೀಡಿದರು.

ವಿವಾಹ ವಿಚ್ಛೇದಿತರಾದ ಉಮೈಮಾ ತಮ್ಮ ಸ್ವಂತ ಕುಟುಂಬ್ಕದ ಬಳಿ ಹಿಂದಿರುಗಿದ ಬಳಿಕ ಅವರ ಮನೆಯವರು ಅವರು ಮಾಡಿದ ಕೆಲಸಕ್ಕಾಗಿ ಅವರನ್ನು ದೂಷಿಸಿದರು. ಉಮೈಮಾರಿಗೆ ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಟ್ಟರು ಎಂದು ಅದರಲ್ಲಿದೆ. ಜೀವನ ಪೂರ್ತಿ ಉಮೈಮಾ ಪ್ರವಾದಿಯವರಿಂದ(ಸ) ವಿಚ್ಛೇದಿತರಾಬೇಕಾಗಿ ಬಂದುದಕ್ಕಾಗಿ ಬಹಳ ದುಃಖಿಸುತ್ತಿದ್ದರು.

ವ್ಯಭಿಚಾರ ಎಂಬುದು ಪರಲೋಕದಲ್ಲಿ ಕಠಿಣ ಶಿಕ್ಷೆಗೆ ಕಾರಣವಾಗುವ ಮಹಾ ಪಾಪವಾಗಿದೆ. ಇಸ್ಲಾಮೀ ರಾಷ್ಟ್ರದಲ್ಲಿ ಕಠಿಣವಾದ ಶಿಕ್ಷೆಗೆ ಕಾರಣವಾಗುವ ಕ್ರಿಮಿನಲ್ ಅಪರಾಧ ಕೂಡ ಆಗಿದೆ. ಆದುದರಿಂದ ವ್ಯಭಿಚಾರದಡೆಗೆ ಸಾಗುವ ಎಲ್ಲಾ ರೀತಿಯ ವಿಷಯಗಳನ್ನು ಇಸ್ಲಾಮ್ ನಿಷೇಧಿಸಿದೆ. ಅನ್ಯ ಸ್ತ್ರೀಯೊಂದಿಗೆ ಏಕಾಂತದಲ್ಲಿ ಇರು ವುದೇ ನಿಷಿದ್ಧ ಎಂದು ಪ್ರವಾದಿಯವರು(ಸ) ಕಲಿಸಿ ಕೊಟ್ಟಿರುವರು. ಪರಸ್ತ್ರೀಯರನ್ನು ಸ್ಪರ್ಶಿಸುವುದು ತಲೆಯ ಮೇಲೆ ಸೂಜಿ ಚುಚ್ಚಿಸಿಕೊಳ್ಳುವುದಕ್ಕಿಂತ ಹೆಚ್ಚು ಗಂಭೀರವಾದ ವಿಷಯವಾಗಿದೆ ಎಂದು ಎಚ್ಚರಿಸಿದರು. ಇದಕ್ಕೆ ವಿರುದ್ಧವಾದ ಏನಾದರೂ ಪ್ರವಾದಿ ಯವರಿಂದ(ಸ) ಸಂಭವಿಸಿದ್ದರೆ ಅದು ಸಮಾಜದಲ್ಲಿ ಯಾವ ರೀತಿಯ ಸಮಸ್ಯೆಗಳನ್ನು ಉಂಟುಮಾಡುತ್ತಿತ್ತು ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ. ಅಂತಹ ಪ್ರವಾದಿಯನ್ನು ಯಾವ ಅನುಯಾಯಿಗಳೂ ಅಂಗೀಕರಿಸಲು ಸಾಧ್ಯವಿಲ್ಲ. ವಿರೋಧಿಗಳು ಸುಮ್ಮನೆ ಬಿಡುವುದಿಲ್ಲ. ಅದರ ಜೊತೆಗೆ ಪ್ರವಾದಿಯವರ(ಸ) ಜೀವನ, ಬೇರೆಲ್ಲಾ ವಿಷಯಗಳಲ್ಲಿ ಇದ್ದಂತೆ ಧಾರ್ಮಿಕ, ನೈತಿಕ ವಿಷಯಗಳಲ್ಲಿಯೂ ಪರಮ ಪವಿತ್ರವಾಗಿತ್ತು ಎಂದು ವಿರೋಧಿಗಳು ಕೂಡ ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದರು. ಈ ವಿಷಯದಲ್ಲಿ ಆ ಕಾಲದಲ್ಲಿ ಅವರ ವಿರುದ್ಧ ಯಾವುದಾದರೂ ಆಕ್ಷೇಪ, ಟೀಕೆ ಎದ್ದಿರುವ ಬಗ್ಗೆ ಯಾರೂ ಸಾಬೀತುಪಡಿಸಲು ಸಾಧ್ಯವಿಲ್ಲ. ಇಲ್ಲದಿದ್ದರೆ ಜೊತೆಗಿದ್ದ ಅನುಯಾಯಿಗಳನ್ನು ದಾರಿ ಮಧ್ಯೆ ಬಿಟ್ಟು ಪ್ರವಾದಿಗಳು ಮಾತ್ರವಲ್ಲ, ಸಾಮಾನ್ಯ ಮನುಷ್ಯರು ಕೂಡ ವ್ಯಭಿಚರಿಸಲು ಹೋಗುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವ ಸಾಮಾನ್ಯ ಬುದ್ಧಿಯು ಕೂಡ ಇಲ್ಲದವರು ಅನುಕಂಪಕ್ಕೂ ಅರ್ಹರಲ್ಲ.

6. ಅನಸ್ ಬಿನ್ ಮಾಲಿಕ್ ಹೇಳುತ್ತಾರೆ: ಉಬಾದ ಇಬ್ನು ಸಾಬಿತ್(ರ)ರ ಪತ್ನಿ ಉಮ್ಮು ಹರಾಮ್(ರ)ರ ಮನೆಗೆ ಪ್ರವಾದಿಯವರು(ಸ) ಸಾಮಾನ್ಯವಾಗಿ ಹೋಗುತ್ತಿದ್ದರು. ಅಲ್ಲಿ ಆಹಾರವನ್ನು ಸೇವಿಸುತ್ತಿದ್ದರು. ಒಂದು ದಿನ ಪ್ರವಾದಿ(ಸ) ಅಲ್ಲಿಗೆ ಹೋದರು. ಆಹಾರ ಸೇವಿಸಿದರು. ಉಮ್ಮು ಹರಾಮ್(ಸ)ರ ಮಡಿಲಲ್ಲಿ ತಲೆ ಇಟ್ಟು ಮಲಗಿದರು. ಹೀಗೆ ಅಲ್ಲಿಯೇ ಅವರಿಗೆ ನಿದ್ರೆ ಬಂತು. ಒಮ್ಮೆಲೆ ಅವರು ನಗುತ್ತಾ ನಿದ್ರೆಯಿಂದ ಎಚ್ಚೆತ್ತರು. ಆಗ ಉಮ್ಮ ಹರಾಮ್ ಪ್ರಶ್ನಿಸಿದರು, "ಅಲ್ಲಾಹನ ಸಂದೇಶವಾಹಕರೇ ತಾವ್ಯಾಕೆ ನಗುತ್ತಿದ್ದಿರಿ?" ಪ್ರವಾದಿ(ಸ) ಹೇಳಿದರು, "ಅಲ್ಲಾಹನ

ಮಾರ್ಗದಲ್ಲಿ ಹೋರಾಟ ಮಾಡುವ ನನ್ನ ಸಮುದಾಯದ ಧೀರ ಹೋರಾಟಗಾರರ ಗುಂಪೊಂದು ಸಮುದ್ರದ ಮಧ್ಯದಲ್ಲಿ ರಾಜ ಪ್ರೌಢಿಯೊಂದಿಗೆ ಯಾತ್ರೆ ಹೋಗುತ್ತಿರುವುದನ್ನು ನಾನು ಕಂಡೆ." ಆಗ ಉಮ್ಮು ಹರಾಮ್(ರ) ಹೇಳಿದರು, "ಅಲ್ಲಾಹನ ಪ್ರವಾದಿಯವರೇ, ನಾನು ಆ ಗುಂಪಿನಲ್ಲಿ ಸೇರಲು ತಾವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ." ಹೀಗೆ ಪ್ರವಾದಿಯವರು ಅವರಿಗಾಗಿ ಪ್ರಾರ್ಥಿಸಿದರು.

ಬಳಿಕ ಮುಆವಿಯರ ಕಾಲದಲ್ಲಿ ಉಮ್ಮು ಹರಾಮ್(ರ) ಸಮುದ್ರದ ಮಧ್ಯೆ ಯಾತ್ರೆ ಮಾಡುತ್ತಿದ್ದಾಗ ಆ ಯಾತ್ರೆಯಲ್ಲಿಯೇ ಅವರು ಮರಣ ಹೊಂದಿದರು.

ಪ್ರವಾದಿಯವರ ನಿಧನ ನಂತರ ನೂರ ಐವತ್ತು ವರ್ಷಗಳ ಬಳಿಕ ಹದೀಸ್ ಗ್ರಂಥಗಳ ರಚನೆಯಾಯಿತು. ಅವುಗಳನ್ನು ರಚಿಸಿದವರು ತಮ್ಮ ಸ್ವಂತ ಜೀವಕ್ಕಿಂತ, ಮತ್ತೆಲ್ಲ ವಿಷಯಗಳಿಗಿಂತ, ಪ್ರವಾದಿಯವರನ್ನು(ಸ) ಅತ್ಯಧಿಕ ಪ್ರೀತಿಸುವವರಾಗಿದ್ದರು. ಕುರ್‌ಆನ್ ಮತ್ತು ಪ್ರವಾದಿಯವರು(ಸ) ಕಲಿಸಿದ್ದ ಶಿಕ್ಷಣ, ಅಂಗೀಕೃತ ಮೌಲ್ಯಗಳು, ಮಾನದಂಡಗಳು ಮತ್ತು ಶಿಷ್ಟಾಚಾರಗಳಿಗೆ ವಿರುದ್ಧವಾದ ಮತ್ತು ಆ ಮೂಲಕ ಪ್ರವಾದಿಯವರ(ಸ) ಮಾದರಿಯೋಗ್ಯವಾದ ವ್ಯಕ್ತಿತ್ವಕ್ಕೆ ಯಾವುದೇ ರೀತಿಯ ಕುಂದು ಉಂಟಾಗುವ ಯಾವ ವಿಷಯವೂ ಅವರು ವರದಿ ಮಾಡುವುದಿಲ್ಲ ಎಂಬುದನ್ನು ಪ್ರತ್ಯೇಕ ಹೇಳಬೇಕಾದ ಅಗತ್ಯವಿಲ್ಲ ಅಥವಾ ಅವರು ವರದಿ ಮಾಡಿರುವುದರ ಪೈಕಿ ಯಾವುದರಲ್ಲಿಯೂ ಪ್ರವಾದಿಯವರ ಅತ್ಯುನ್ನತವಾದ ವ್ಯಕ್ತಿತ್ವಕ್ಕೆ ಕಳಂಕ ಉಂಟಾಗುವ ಯಾವುದೂ ಇಲ್ಲ ಎಂದರ್ಥ. ಹಾಗೆ ಇರಲು ಸಾಧ್ಯವೂ ಇಲ್ಲ.

ವಿಮರ್ಶೆ

ಪ್ರವಾದಿ ಮುಹಮ್ಮದ್(ಸ)ರು ಮನೆಯಲ್ಲಿ ಯಾರು ಇಲ್ಲದ ಸಂದರ್ಭದಲ್ಲಿ ಅನ್ಯಸ್ತ್ರೀಯ ಮನೆಗೆ ಹೋದರು. ಅಲ್ಲಿ ಆಹಾರವನ್ನು ಸೇವಿಸಿದ ಬಳಿಕ ಅವರ ಮಡಿಲಲ್ಲಿ ತಲೆ ಇರಿಸಿ ಮಲಗಿದರು. ಪ್ರವಾದಿಯವರಿಗೆ(ಸ) ಕನಸು ಕಂಡು ಅವರು ತಟ್ಟನೆ ಎದ್ದರು. ಆಗ ಆ ಸ್ತ್ರೀಯು ಪ್ರವಾದಿಯೊಂದಿಗೆ(ಸ) ಅವರು ಕಂಡ ಕನಸಿನ ಕುರಿತು ಪ್ರಶ್ನಿಸಿದರು. ಅನೇಕ ವ್ಯಕ್ತಿಗಳು ಸ್ವರ್ಗಕ್ಕೆ ಹೋಗುತ್ತಿರುವುದಾಗಿ ನಾನು ಕಂಡೆ ಎಂದು ಪ್ರವಾದಿಯವರು(ಸ) ಉತ್ತರಿಸಿದರು. ಆಗ ಆ ಸ್ತ್ರೀಯು ನಾನು ಆ ಗುಂಪಿನಲ್ಲಿ ಸೇರಲು ತಾವು ಪ್ರಾರ್ಥಿಸಬೇಕೆಂದು ವಿನಂತಿಸಿದರು. ಹೀಗೆ ಅವರು ಅದಕ್ಕಾಗಿ ಪ್ರಾರ್ಥಿಸಿದರು. ಅನ್ಯಸ್ತ್ರೀಯ ಮಡಿಲಲ್ಲಿ ತಲೆ ಇಟ್ಟು ಮಲಗುವಾಗ ಯಾವ ರೀತಿಯ ಕನಸು ಕಂಡಿರಬಹುದು ಎಂಬುದನ್ನು ಹೇಳಬೇಕಾದ ಅಗತ್ಯವಿಲ್ಲ ಅಲ್ಲವೇ? ಸ್ವರ್ಗದ ವಿಷಯ ಹೇಳಿ ಪ್ರಲೋಭನೆಗೆ ಒಳಪಡಿಸುವುದು ಯಾಕಾಗಿ ಎಂಬುದು ಸ್ಪಷ್ಟ.

ಸ್ಪಷ್ಟೀಕರಣ

ಎಲ್ಲದರಲ್ಲಿಯೂ ಕಾಮವನ್ನು ಕಾಣುವವರು ಈ ವಿಮರ್ಶಕರು!

ಇಮಾಮ್ ಬುಖಾರಿಯವರು 2,789ನೇ ಸಂಖ್ಯೆಯಲ್ಲಿ ಇಮಾಮ್ ಮುಸ್ಲಿಮ್ 1,912ನೇ ಸಂಖ್ಯೆಯಲ್ಲಿ ಸೇರಿಸಿದ ಪ್ರವಾದಿವಚನವಿದು.

ಉಮ್ಮು ಹರಾಮ್(ರ) ಬನೂ ನಜ್ಜಾರ್ ಗೋತ್ರದವರಾಗಿದ್ದರು. ಝೈದ್ ಬಿನ್ ಹರಾಮ್(ರ)ರ ಮಗ ಖಾಲಿದ್(ರ)ರ ಪುತ್ರ ಮಿಲ್ಹಾಮ್(ರ)ರ ಮಗಳು. ಅನಸ್ ಬಿನ್ ಮಾಲಿಕ್(ರ)ರ ಮಾತೆ ಉಮ್ಮು ಸುಲೈಮ್(ರ)ರ ಸಹೋದರಿ. ಉಮ್ಮು ಹರಾಮ್(ರ) ಮತ್ತು ಉಮ್ಮು ಸುಲೈಮ್(ರ) ಪ್ರವಾದಿಯವರ(ಸ) ಮಾತೆ ಆಮಿನಾರವರ ಎದೆ ಹಾಲು ಸಂಬಂಧದ ಸಹೋದರಿಯರು. ಆದುದರಿಂದ ಪ್ರವಾದಿಯವರ(ಸ) ಮಾತೃ ಸಹೋದರಿಯರು. ಅಸದುಲ್ ಗಾಬ, ಅಲ್ ಇಸ್ವಾಬ, ಹಿಲ್ಯತುಲ್ ಔಲಿಯಾಅ ಮುಂತಾದ ಅಧಿಕೃತ ಐತಿಹಾಸಿಕ ಗ್ರಂಥಗಳು ಈ ವಿಷಯವನ್ನು ಯಾವುದೇ ಸಂಶಯ ಇಲ್ಲದ ರೀತಿಯಲ್ಲಿ ಉಲ್ಲೇಖಿಸಿವೆ. ಉಮ್ಮು ಹರಾಮ್(ರ)ರವರು ಆಮಿನಾರ ರಕ್ತ ಸಂಬಂಧಿ ಸಹೋದರಿ ಮಾತ್ರವಲ್ಲ, ಎದೆ ಹಾಲು ಸಂಬಂಧಿ ಸಹೋದರಿಯೂ ಆಗಿದ್ದರು ಎಂದು ಅಭಿಪ್ರಾಯ ಪಡುವ ಇತಿಹಾಸಜ್ಞರು ಇದ್ದಾರೆ. ಎದೆ ಹಾಲು ಸಂಬಂಧದ ಮಾತೆ ಅಥವಾ ಮಾತೃ ಸಹೋದರಿ ಆಗಿದ್ದರು ಎಂದು ಇಬ್ನು ಅಬ್ದಿಲ್ ಬರ್ರ್ ಅಭಿಪ್ರಾಯಪಡುತ್ತಾರೆ. ಉಮ್ಮು ಹರಾಮ್(ರ) ಅಥವಾ ಅವರ ಸಹೋದರಿ ಉಮ್ಮು ಸುಲೈಮ್(ರ) ಪ್ರವಾದಿಯವರಿಗೆ(ಸ) ಎದೆ ಹಾಲು ನೀಡಿದ್ದಾರೆಂದು ಅವರು ಬರೆದಿದ್ದಾರೆ. ಉಮ್ಮು ಹರಾಮ್(ರ) ಪ್ರವಾದಿಯವರಿಗೆ(ಸ) ವಿವಾಹ ನಿಷಿದ್ಧರಾದ ಸಮೀಪದ ಸಂಬಂಧಿ ಯಾಗಿದ್ದರು ಎಂಬ ವಿಷಯದ ಬಗ್ಗೆ ಇಸ್ಲಾಮಿನ ವಿದ್ವಾಂಸರು ಒಮ್ಮತ ಅಭಿಪ್ರಾಯ ವನ್ನು ಹೊಂದಿದ್ದಾರೆ ಎಂದು ಇಮಾಮ್ ನವವಿ ಬರೆದಿರುತ್ತಾರೆ. ಯಾವ ರೀತಿಯಲ್ಲಿ ಎಂಬ ವಿಷಯದಲ್ಲಿ ಮಾತ್ರ ಅಭಿಪ್ರಾಯ ವ್ಯತ್ಯಾಸವಿದೆ. (ಫತ್ಹುಲ್ ಬಾರಿ) ಉಮ್ಮು ಹರಾಮ್(ರ) ಪ್ರವಾದಿಯವರ(ಸ) ಮಾತೆ ಆಮಿನಾರ ಸಹೋದರಿ ಯಾಗಿದ್ದರೆಂದು ಇಬ್ನುಲ್ ಜೌಸಿಯ್ ಅಭಿಪ್ರಾಯ ಹೊಂದಿದ್ದಾರೆ. (ಫತ್ಹುಲ್ ಬಾರಿ)

ಉಮ್ಮು ಹರಾಮ್(ರ) ಪ್ರವಾದಿಯವರಿಗೆ(ಸ) ಎಲ್ಲ ರೀತಿಯಲ್ಲಿಯೂ ನೋಡಲು ಮುಟ್ಟಲು ಮತ್ತು ಹತ್ತಿರದಿಂದ ಒಡನಾಡಲು ಅನುಮತಿಯುಳ್ಳ ಬಹಳ ಸಮೀಪದ ಸಂಬಂಧಿಯಾಗಿದ್ದರು.

ಇಮಾಮ್ ಬುಖಾರಿಯವರು ಈ ಪ್ರವಾದಿ ವಚನವನ್ನು 'ಅನುಮತಿ ಕೇಳುವುದು' ಎಂಬ ಶೀರ್ಷಿಕೆ ಅಡಿಯಲ್ಲಿ ಸೇರಿಸಿದ್ದಾರೆ. ಒಂದು ಗುಂಪು ಎಂಬ

ಅರ್ಥ ಬರುವಂತಹ ಪದವನ್ನು ಅಲ್ಲಿ ಅವರು ಉಪಯೋಗಿಸಿದ್ದಾರೆ. ಉಮ್ಮು ಹರಾಮ್(ರ)ರ ಮನೆಯಲ್ಲಿ ಅವರು ಒಬ್ಬಂಟಿಯಾಗಿರಲಿಲ್ಲವೆಂದು ಇದರಿಂದಾಗಿ ತಿಳಿಯುತ್ತದೆ ಎಂದು ಹೇಳುವ ವಿದ್ವಾಂಸರಿದ್ದಾರೆ. ಅನ್ಯಸ್ತ್ರೀಯರೊಂದಿಗೆ ಏಕಾಂತದಲ್ಲಿ ಇರಕೂಡದೆಂದು ಅವರನ್ನು ಮುಟ್ಟುವುದನ್ನು ಕಠಿಣವಾಗಿ ನಿಷೇಧಿಸಿದ ಪ್ರವಾದಿಯವರು(ಸ) ಹಾಗೆ ಮಾಡಬಹುದು ಎಂದು ಅವರನ್ನು ಅರಿತ ವಿರೋಧಿಗಳು ಕೂಡ ಹೇಳುವುದಿಲ್ಲ. ಎಲ್ಲ ವಿಷಯಗಳಲ್ಲಿಯೂ ಕಾಮವನ್ನು ನೋಡುವವರಿಗೆ ಪ್ರವಾದಿಯವರನ್ನು(ಸ) ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಅದು ಅವರ ತಪ್ಪಲ್ಲ.

ಪರಸ್ಪರ ಒಪ್ಪಿಗೆ ಇದ್ದರೆ ಯಾರಿಗೆ ಯಾರನ್ನು ಬೇಕಾದರೂ ಎಲ್ಲಿಯಾದರೂ ಹೇಗೆ ಬೇಕಾದರೂ ಉಪಯೋಗಿಸಬಹುದು ಎಂಬ ಧರ್ಮ ನಿರಪೇಕ್ಷಿತ ಭೌತಿಕ ಸಿದ್ಧಾಂತವನ್ನು ಸ್ವೀಕರಿಸಿದ ವ್ಯಕ್ತಿಗಳು, ಸಮಾಜದಲ್ಲಿ ಎಲ್ಲರೂ ತಮ್ಮ ಹಾಗೆಯೇ ಇರುತ್ತಾರೆ ಎಂದು ಭಾವಿಸುವುದು ಈ ಸಮಸ್ಯೆಯ ಮೂಲ ಕಾರಣವಾಗಿದೆ. ಅವರು ಎಲ್ಲವನ್ನು ತಮ್ಮ ಅನೈತಿಕ ಮತ್ತು ಅಶ್ಲೀಲ ಮಾನದಂಡಗಳ ಮೂಲಕ ಅಳೆಯುತ್ತಾರೆ.

ತಮ್ಮ ದೇಹೇಚ್ಛೆಗಳಿಗೆ ಅಧೀನರಾಗಿ ಅರಾಜಕತೆಯಿಂದ ಕೂಡಿದ ಜೀವನವನ್ನು ಸಾಗಿಸುವವರು ತಮ್ಮ ಸ್ವಚ್ಛಂದ ಜೀವನಕ್ಕೆ ಅಡ್ಡಿ ಉಂಟಾಗುತ್ತದೆ ಎಂಬ ಕಾರಣಕ್ಕೆ ಇಸ್ಲಾಮನ್ನು, ದೇವ ಗ್ರಂಥಗಳನ್ನು, ಪ್ರವಾದಿಯವರನ್ನು(ಸ) ಪ್ರಮುಖ ಶತ್ರುವಾಗಿ ಪರಿಗಣಿಸುತ್ತಾರೆ. ಮಾನವಿಯ ಮೌಲ್ಯಗಳು, ನೈತಿಕ ಬೋಧನೆಗಳು ಮತ್ತು ಧಾರ್ಮಿಕ ಶಿಕ್ಷಣದ ಬಗ್ಗೆ ಅವರು ಇಟ್ಟುಕೊಂಡಿರುವ ನಿಲುವಿನ ಬಗ್ಗೆ ಪ್ರಥಮ ಅಧ್ಯಾಯದಲ್ಲಿಯೇ ವಿವರಿಸಲಾಗಿದೆ. ಅದನ್ನು ಅರ್ಥ ಮಾಡಿಕೊಳ್ಳುವ ಎಲ್ಲರಿಗೂ ವಿಚಾರವಾದಿಗಳ ಮತ್ತು ಭೌತಿಕವಾದಿಗಳ ಇಸ್ಲಾಮಿನ ವಿರೋಧದ ಮರ್ಮವೇನು ಎಂಬುದು ಸುಲಭದಲ್ಲಿ ಮನವರಿಕೆಯಾಗುತ್ತದೆ.

❖ ❖ ❖ ❖